ಸಂಪುಟ: 04 ಸಂಚಿಕೆ: 316 ಪುಟಗಳು: 08 ಮಂಗಳವಾರ 28 ಜನವರಿ 2025

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

9448225696 +91 8035841833 ₹5

# ಉದಯ ವಾಹಿನಿ

UV ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಇಂದ್ರಿಯಗಳು ಮೋಹ, ದ್ವೇಷಗಳತ್ತ ನಮ್ಮನ್ನು ಪ್ರಚೋದಿಸಬಹುದು, ಈ ವ್ಯಾಮೋಹ ದ್ವೇಷದಿಂದ ನಮ್ಮೆಲ್ಲ ಯೋಚನೆಗಳು ಒಂದೇ ವ್ಯಕ್ತಿಯ ಸುತ್ತಲಿರುತ್ತವೆ, ನಮ್ಮ ಬೆಳವಣಿಗೆಗೆ ಇದು ಮಾರಕ.

## ಪ್ರಾಧ್ಯಾಪಕರು ಕೇವಲ ಸಂಬಳಕ್ಕೆ ಕೆಲಸ ಮಾಡಬಾರದು

• ಉದಯವಾಹಿನಿ, ಬೆಂಗಳೂರು

ವಿದ್ಯಾರ್ಥಿಗಳು ತಮ್ಮ ಕನಸುಗಳನ್ನು ನನಸು ಮಾಡಿಕೊಳ್ಳುವ ರೀತಿ ಪ್ರಾಧ್ಯಾಪಕರು ತಮ್ಮ ಜ್ಞಾನವನ್ನು ಕೊಟ್ಟು ಅವರಲ್ಲಿ ಅರಿವಿನ ಬೆಳಕನ್ನು ಉತ್ತೇಜಿಸಬೇಕು ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಹೇಳಿದರು. ಬೆಂಗಳೂರಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ನಡೆದ ನೂತನವಾಗಿ ನೇಮಕಗೊಂಡಿರುವ ಸಹಾಯಕ ಪ್ರಾಧ್ಯಾಪಕರಿಗೆ ವೃತ್ತಿ ಮಾರ್ಗದರ್ಶನ ಕಾರ್ಯಾಗಾರವನ್ನು ಉದ್ಘಾಟಿಸಿ ಶಿವಕುಮಾರ್ ಅವರು ಸೋಮವಾರ ಮಾತನಾಡಿದರು. ನಿಮ್ಮ ವೃತ್ತಿ ಜೀವನದಲ್ಲಿ ಎಲ್ಲಾ ವಿದ್ಯಾರ್ಥಿಗಳನ್ನು ಉತ್ತಮವಾಗಿ ತಯಾರು ಮಾಡಲು ಆಗದೇ ಇರಬಹುದು. ಆದರೆ, ಒಂದಷ್ಟು ಜನರನ್ನು ತಯಾರು ಮಾಡುವ ಶಕ್ತಿ ನಿಮ್ಮಲ್ಲಿದೆ ನೀವು ಸಮಾಜಕ್ಕೆ ಉತ್ತಮ ಸಾಧಕರನ್ನು ನೀಡುವ ಗುರಿ ಇಟ್ಟುಕೊಳ್ಳಬೇಕು ಎಂದು ತಿಳಿಸಿದರು.

## ರಾಜ್ಯ ಸರ್ಕಾರ ಯಾವುದೇ ಪರಿಹಾರ ನೀಡುವ ಅಗತ್ಯವಿಲ್ಲ

• ಉದಯವಾಹಿನಿ, ಮೈಸೂರು

ಮೈಸೂರು ಅರಮನೆ ಮೈದಾನ ಬಳಸಿಕೊಳ್ಳುವ ಸಂಬಂಧ ಸರ್ಕಾರ ಸುಗ್ರೀವಾಜ್ಞೆ ಜಾರಿ ಮಾಡಿರುವ ವಿಚಾರವಾಗಿ ರಾಜ್ಯ ಸರ್ಕಾರ ನಮಗೆ ಯಾವುದೇ ಪರಿಹಾರ ಕೊಡುವ ಅಗತ್ಯವಿಲ್ಲ ಎಂದು ಸುತ್ತೂರಿನಲ್ಲಿ ಬಿಜೆಪಿಯ ಸಂಸದ ಯದುವೀರ್ ಒಡೆಯರ್ ಹೇಳಿಕೆ ನೀಡಿದರು. ಇಂದು ಅವರು ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಸುತ್ತೂರಿನಲ್ಲಿ ಯದುವೀರ್ ಒಡೆಯರ್ ಅವರು ಮಾಧ್ಯಮಗಳೊಂದಿಗೆ ಮಾತನಾಡಿ ಪರಿಹಾರ ಕೊಡುವ ಬದಲು ಟಿಡಿಆರ್ ಸರ್ಟಿಫಿಕೇಟ್ ಕೊಟ್ಟರೆ ಸಾಕು. ಸರ್ಕಾರ ಜನರನ್ನು ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದೆ. ಸುಪ್ರೀಂ ಕೋರ್ಟ್ ಆದೇಶ ಇದ್ದಾಗ ನಮ್ಮ ಮುಂದೆ ಯಾಕೆ ಬರುತ್ತಾರೆ? ಸಾರ್ವಜನಿಕ ಹಿತದೃಷ್ಟಿಗಾಗಿ ಅಂದರೆ ನಮ್ಮ ಆಸ್ತಿನೆ ಬೇಕಾ? ಎಂದು ಪ್ರಶ್ನಿಸಿದರು. ಈ ಹಿಂದೆ ಸದಾಶಿವನಗರ ಕೂಡ ಬೆಂಗಳೂರು ಅರಮನೆಗೆ ಸೇರಿತ್ತು. ನಾವು ಆಗಲೇ ಸಾಮಾಜಿಕ ನ್ಯಾಯದಲ್ಲಿ ಬಹಳಷ್ಟು ಜಮೀನು ಕೊಟ್ಟಿದ್ದೇವೆ. ಸಾಮಾನ್ಯರಿಗೆ ಏನು ಕಾನೂನು ಇದೆ ನಮಗೂ ಅದೇ ಕಾನೂನು ಅಲ್ವಾ. ಟಿಡಿಆರ್ ಬದಲು ನಗದು ರೂಪದಲ್ಲಿ ಪರಿಹಾರ ಹೇಳಬಹುದಿತ್ತು? ಸರ್ಕಾರದ ಖಜಾನೆಗೆ ಧಕ್ಕೆ ಆಗುತ್ತೆ ಅಂತ ಟಿಡಿಆರ್ ಗೆ ಒಪ್ಪಿದ್ದೇವೆ ಎಂದು ತಿಳಿಸಿದರು.

## ರಾಜಧಾನಿ ಎಕ್ಸ್ ಪ್ರೆಸ್ ರೈಲು ಯಾದಗಿರಿಯಲ್ಲಿ ನಿಲುಗಡೆ

• ಉದಯವಾಹಿನಿ, ಬೆಂಗಳೂರು

ರೈಲುಸಂಖ್ಯೆ 22692 ಹಜರತ್ನಿ ಜಾಮುದ್ದೀನ್ – ಕೆ.ಎಸ್. ಆರ್‌ಬೆಂಗಳೂರು ರಾಜಧಾನಿ ಎಕ್ಸ್ ಸ್ಯೆ ಲಿಗೆ ಯಾದಗಿರಿ ನಿಲ್ದಾಣದಲ್ಲಿ ಹೆಚ್ಚುವ ಸೋಮಣ್ಣ ಅವರು ಹಸಿರು ನಿಶಾನೆ ತೋರಿಸಲಿದ್ದಾರೆ. ಜನವರಿ 28 ರಂದು ರಾತ್ರಿ 07.30 ಗಂಟೆಗೆ ಗಣ್ಯರು ಮತ್ತು ರೈಲ್ವೆ ಅಧಿಕಾರಿಗಳ ಉಪಸ್ಥಿತಿಯಲ್ಲಿ ಯಾದಗಿರಿ ರೈಲ್ವೆ ನಿಲ್ದಾಣದಲ್ಲಿ ರೈಲು ಸಂಖ್ಯೆ 22692 ಹಜರತ್ ನಿಜಾಮುದ್ದೀನ್ – ಕೆಎಸ್ ಆರ್ ಬೆಂಗಳೂರು ರಾಜಧಾನಿ ಎಕ್ಸ್‌ಪ್ರೆಸ್ ರೈಲಿಗೆ ಪ್ರಾಯೋಗಿಕ ಹೆಚ್ಚುವರಿ ನಿಲುಗಡೆಗೆ ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಖಾತೆ ಸಚಿವ ವಿ. ಸೋಮಣ್ಣ ಅವರು ವರ್ಚುವಲ್ ಮೂಲಕ ಚಾಲನೆ ನೀಡಲಿದ್ದಾರೆ. ದಕ್ಷಿಣ ಮಧ್ಯ ರೈಲ್ವೆಯ ಗುಂತಕಲ್ ವಿಭಾಗದಲ್ಲಿರುವ ಯಾದಗಿರಿ ನಿಲ್ದಾಣವು ಉಪನಗರವಲ್ಲದ ಗ್ರೇಡ್–3 (ಎನ್‌ಎಸ್ ಜಿ–3) ನಿಲ್ದಾಣದ ವರ್ಗಕ್ಕೆ ಸೇರುತ್ತದೆ. ಯಾದಗಿರಿ ಜಿಲ್ಲಾ ಕೇಂದ್ರವಾಗಿದ್ದು, ಕರ್ನಾಟಕದ ರಾಜಧಾನಿಯಾದ ಬೆಂಗಳೂರು ಸೇರಿದಂತೆ ದೇಶದ ವಿವಿಧ ಸ್ಥಳಗಳಿಗೆ ಪ್ರಯಾಣಿಸಲು ಮುಖ್ಯವಾಗಿ ರೈಲು ಸಾರಿಗೆಯನ್ನು ಅವಲಂಬಿಸಿರುವ ಸುತ್ತಮುತ್ತಲಿನ ಹಳ್ಳಿಗಳ ಜನರಿಗೆ ಈ ನಿಲ್ದಾಣವು ಸೇವೆ ಸಲ್ಲಿಸುತ್ತದೆ. ನಿಲ್ದಾಣಕ್ಕೆ ಪ್ರತಿದಿನ ಸರಾಸರಿ 10,000 ಜನರು ಭೇಟಿ ನೀಡುತ್ತಿದ್ದು, ಸರಾಸರಿ ಆದಾಯ ರೂ. 8 ಲಕ್ಷವಾಗಿದೆ.

ನವದೆಹಲಿ ಮತ್ತು ಬೆಂಗಳೂರು ನಗರಕ್ಕೆ ಪ್ರಯಾಣಿಸಲು ಈ ನಿಲ್ದಾಣದಲ್ಲಿ ರಾಜಧಾನಿ ಎಕ್ಸ್ ಪ್ರೆಸ್ ನಿಲ್ಲಿಸಬೇಕೆಂದು ನಿರಂತರವಾಗಿ ಬೇಡಿಕೆ ಇದೆ.

## ಬೆಂಗಳೂರಲ್ಲಿ ಅನಧಿಕೃತ ಜಾಹೀರಾತು ಅಳವಡಿಸೋರ ವಿರುದ್ಧ ಎಫ್‌ಐಆರ್

• ಉದಯವಾಹಿನಿ, ಬೆಂಗಳೂರು

ಬಿಬಿಎಂಪಿ ವ್ಯಾಪ್ತಿಯಲ್ಲಿ ಅನಧಿಕೃತ ಜಾಹೀರಾತುಗಳನ್ನು ಅಳವಡಿಸಿರುವವರ ಮೇಲೆ ಎಫ್.ಐ.ಆರ್ ದಾಖಲಿಸಲು ಮುಖ್ಯ ಆಯುಕ್ತರಾದ ತುಷಾರ್ ಗಿರಿನಾಥ್ ರವರು ಅಧಿಕಾರಿ ಗಳಿಗೆ ಸೂಚನೆ ನೀಡಿದರು. ಬಿಬಿಎಂಪಿ ವ್ಯಾಪ್ತಿಯಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಇಂದು ಪಾಲಿಕೆ ಕೇಂದ್ರ ಕಛೇರಿಯಲ್ಲಿ ನಡೆದ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಪಾಲಿಕೆ ವ್ಯಾಪ್ತಿಯಲ್ಲಿ ಅನಧಿಕೃತ ಜಾಹೀರಾತುಗಳನ್ನು ತಡೆಯಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದರು. ಪಾಲಿಕೆಯ ಎಲ್ಲಾ 8 ವಲಯಗಳಲ್ಲಿಯೂ ಅನಧಿಕೃತ ಜಾಹೀರಾತುಗಳನ್ನು ಅಳವಡಿಸಿರುವುದನ್ನು ಗುರುತಿಸಿ ಕೂಡಲೆ ಅದನ್ನು ತೆರವುಗೊಳಿಸಬೇಕು. ಜೊತೆಗೆ ಅನಧಿಕೃತ ಜಾಹೀರಾತು ಅಳವಡಿಸಿರುವವರ ಮೇಲೆ ಎಫ್.ಐ.ಆರ್ ದಾಖಲಿಸಬೇಕೆಂದು ಸೂಚಿಸಲಾಯಿತು.


# ಮುಡಾ ಸದ್ದು ಸಮನ್ಸ್ ರದ್ದು

■ ಸಿಬಿಐ ತನಿಖೆ ಕೋರಿರುವ ಅರ್ಜಿ ವಿಚಾರಣೆ ಪೂರ್ಣ

■ ಆದೇಶ ಕಾಯ್ದಿರಿಸಿದ ಹೈಕೋರ್ಟ್

■ ಮುಡಾ ಪ್ರಕರಣ : ಪಾರ್ವತಿ ಸಿದ್ದರಾಮಯ್ಯ

■ ಸಚಿವ ಭೈರತಿ ಸುರೇಶ್‌ಗೆ ಇ.ಡಿ ಸಮನ್ಸ್ ಪ್ರಶ್ನಿಸಿ ಹೈಕೋರ್ಟ್‌ಗೆ ಅರ್ಜಿ




**ಸಿಎಂ ಪತ್ನಿಗೆ ಹೈ ರಿಲೀಫ್**

**ಇಡಿ ವಿಚಾರಣೆಯಿಂದ ಬಚಾವ್**





### ಸಿಎಂ ಪತ್ನಿ ಪಾರ್ವತಿಗೆ ರಿಲೀಫ್

ಮುಡಾ ಪ್ರಕರಣಕ್ಕೆ ಸಂಬಂಧಪಟ್ಟಂತೆ ಸಚಿವ ಭೈರತಿ ಸುರೇಶ್ ಮತ್ತು ಸಿಎಂ ಪತ್ನಿ ಪಾರ್ವತಿಗೆ ತನಿಖೆಗೆ ಹಾಜರಾಗುವಂತೆ ಜಾರಿ ನಿರ್ದೇಶನಾಲಯ(ಇಡಿ) ನೀಡಿದ ಸಮನ್ಸ್ ತಾತ್ಕಾಲಿಕವಾಗಿ ರದ್ದು ಗೊಳಿಸುವಂತೆ ಹೈಕೋರ್ಟ್ ಸೋಮವಾರ ಆದೇಶ ನೀಡಿದೆ. ಸಿಎಂ ಪತ್ನಿ ಮತ್ತು ಸಚಿವ ಭೈರತಿ ಸುರೇಶ್ ಫೆ.10ರ ವರೆಗೂ ಇಡಿ ತನಿಖೆಗೆ ಹಾಜರಾಗುವಂತಿಲ್ಲ ಎಂದು ಧಾರವಾಡ ಹೈಕೋರ್ಟ್ ತಾತ್ಕಾಲಿಕ ರಿಲೀಫ್ ನೀಡಿದೆ.

• ಉದಯವಾಹಿನಿ, ಬೆಂಗಳೂರು

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯರ ಪತ್ನಿ ಪಾರ್ವತಿ ಹಾಗೂ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಅವರಿಗೆ ವಿಚಾರಣೆಗೆ ಹಾಜರಾಗುವಂತೆ ಜಾರಿ ನಿರ್ದೇಶನಾಲಯ (ಇ.ಡಿ) ಜಾರಿ ಮಾಡಿರುವ ಸಮನ್ಸ್ ಪ್ರಶ್ನಿಸಿ ಹೈಕೋರ್ಟ್‌ಗೆ ಪ್ರತ್ಯೇಕ ಅರ್ಜಿಗಳು ಸಲ್ಲಿಕೆಯಾಗಿವೆ. ಈ ಅರ್ಜಿಗಳ ತುರ್ತು ವಿಚಾರಣೆಗೆ ಪರಿಗಣಿಸುವಂತೆ ಸೋಮವಾರ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ನ್ಯಾಯಪೀಠಕ್ಕೆ ಅರ್ಜಿದಾರರ ಪರ ವಕೀಲರಾದ ವಿಕ್ರಮ್ ಹುಯ್ಲಗೋಳ ಅವರು ಪ್ರಸ್ತಾಪಿಸಿದರು. ವಾದ ಆಲಿಸಿದ ಪೀಠ, ವಿಚಾರಣೆಗೆ ಪರಿಗಣಿಸುವುದಾಗಿ ತಿಳಿಸಿತು.

**ಕೃಷ್ಣ ಪರ ವಾದ ಮಂಡಿಸಿದ ಮಣಿಂದರ್ ಸಿಂಗ್**

ಅರ್ಜಿಯ ವಿವರ : ಅರ್ಜಿದಾರರು ಹಿರಿಯ ನಾಗರೀಕರಾಗಿದ್ದು, ಮೈಸೂರಿನ ಕೆಸರೆ ಗ್ರಾಮದಲ್ಲಿ ಸರ್ವೇ ಸಂಖ್ಯೆ 464ರಲ್ಲಿ ತುಂಡು ಭೂಮಿಯೊಂದನ್ನು ನನ್ನ ಸಹೋದರ ಖರೀದಿಸಿದ್ದರು. ಬಳಿಕ ತನಗೆ 2010ರಲ್ಲಿ ಅರಿಶಿಣ– ಕುಂಕುಮ ನೀಡುವ ಸಲುವಾಗಿ ದಾನವಾಗಿ ನೀಡಿದ್ದರು. ಈ ಜಮೀನು ಸ್ವಾಧೀನವಾಗಿ ಡಿನೋಟಿಫಿಕೇಷನ್ ಮಾಡಲಾಗಿದ್ದು, ಮುಡಾ ಅಭಿವೃದ್ಧಿಪಡಿಸಿತ್ತು. ಇದಕ್ಕಾಗಿ ಪರಿಹಾರ ನೀಡುವಂತೆ ಹಲವು ಬಾರಿ ಮನವಿ ಮಾಡಲಾಗಿತ್ತು. ಬಳಿಕ ಜನವತಿ ಪ್ರದೇಶಗಳಲ್ಲಿ ಬದಲಿ ನಿವೇಶನವನ್ನು ಮಂಜೂರು ಮಾಡಲಾಗಿತ್ತು ಎಂದು ಅರ್ಜಿಯಲ್ಲಿ ತಿಳಿಸಲಾಗಿದೆ. ಇದಾದ ನಂತರ 2024ರ ಅಕ್ಟೋಬರ್ ತಿಂಗಳಲ್ಲಿ ಆ ಬದಲಿ ನಿವೇಶನಗಳನ್ನು ಬಿಟ್ಟುಕೊಡಲಾಗಿದೆ. ಹೀಗಿದ್ದರೂ ತನಗೆ ಸಂಬಂಧವಿಲ್ಲದ ದೂರಿಗೆ ಸಂಬಂಧಿಸಿದಂತೆ ಸೂಕ್ತ ದಾಖಲೆಗಳಿಲ್ಲದಿದ್ದರೂ, ಹಣಕಾಸಿನ ದುರ್ಬಳಕೆ ಇಲ್ಲದಿದ್ದರೂ, ಅಕ್ರಮ ಹಣ ವರ್ಗಾವಣೆ ಕಾಯ್ದೆಯಡಿ ವಿಚಾರಣೆಗೆ ಹಾಜರಾಗುವಂತೆ ಸಮನ್ಸ್ ಜಾರಿ ಮಾಡಲಾಗಿದೆ. ಇದು ಕಾನೂನುಬಾಹಿರ ಹಾಗೂ ಆದಾರ ರಹಿತವಾಗಿದೆ. ಅರ್ಜಿದಾರರ ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸಿದಂತಾಗಿದೆ. ಅಲ್ಲದೆ, ತನ್ನ ಪತಿಯ (ಸಿಎಂ ಸಿದ್ದರಾಮಯ್ಯ) ವಿರುದ್ಧ ರಾಜಕೀಯವಾಗಿ ಸೇಡು ತೀರಿಸಿಕೊಳ್ಳುವುದಕ್ಕಾಗಿ ಈ ರೀತಿಯ ದೂರುಗಳು ದಾಖಲಾಗುತ್ತಿವೆ ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

ಸಚಿವ ಭೈರತಿ ಸುರೇಶ್ ಅರ್ಜಿ : ಅಲ್ಲದೆ, ಪ್ರಕರಣ ಸಂಬಂಧ ಲೋಕಾಯುಕ್ತ ಪೊಲೀಸರು ಪ್ರಕರಣ ದಾಖಲಿಸಿ ವಿಚಾರಣೆ ನಡೆಸುತ್ತಿದ್ದಾರೆ. ಈ ಪ್ರಕರಣದಲ್ಲಿ ಯಾವುದೇ ಸಂಬಂಧವಿಲ್ಲದಿದ್ದರೂ, ತಮ್ಮ ವಿರುದ್ಧ ಪ್ರಕರಣ ದಾಖಲಿಸಿದ್ದು, ಸಮನ್ಸ್ ಜಾರಿ ಮಾಡಲಾಗಿದೆ. ಆದ್ದರಿಂದ ಸಮನ್ಸ್ ರದ್ದು ಮಾಡಬೇಕು ಎಂದು ಸಚಿವ ಭೈರತಿ ಸುರೇಶ್ ಮನವಿ ಮಾಡಿದ್ದಾರೆ.

### ಸುಪ್ರೀಂ ತೀರ್ಪು ಉಲ್ಲೇಖಿಸಿ ವಾದ ಮಂಡನೆ



ಸಿಬಿಐ ಇಲ್ಲವೇ ಯಾವುದಾದರೂ ಸ್ವಾತಂತ್ರ್ಯ ಸಂಸ್ಥೆಯಿಂದ ಮುಡಾ ಹಗರಣ ತನಿಖೆ ನಡೆಸಬೇಕು ಎಂದು ಕೋರಿ ಸ್ನೇಹಮಯಿ ಕೃಷ್ಣ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಪೀಠ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಸ್ನೇಹಮಯಿ ಕೃಷ್ಣ ಪರ ವಾದ ಮಂಡಿಸಿದ ಹಿರಿಯ ವಕೀಲ ಮಣೀಂದ್ರ ಸಿಂಗ್, ಸುಪ್ರೀಂಕೋರ್ಟ್ ಹಲವು ಪ್ರಕರಣಗಳನ್ನು ಉಲ್ಲೇಖಿಸಿ, ಈ ರೀತಿಯ ಪ್ರಕರಣಗಳು ಸಾರ್ವಜನಿಕ ಹಿತದೃಷ್ಠಿಯಿಂದ ಕೂಡಿದ್ದು, ಸ್ವಾತಂತ್ರ್ಯ ಸಂಸ್ಥೆಯಿಂದ ತನಿಖೆ ನಡೆಸುವುದು ಅತ್ಯಗತ್ಯವಾಗಿದೆ. ಆರೋಪಿಗಳು ಯಾವ ರೀತಿಯ ತನಿಖೆ ನಡೆಸಬೇಕು ಎಂಬುದನ್ನು ಪ್ರಶ್ನೆ ಮಾಡುವುದಕ್ಕೆ ಅವಕಾಶವಿಲ್ಲ ಎಂದು ಪೀಠಕ್ಕೆ ವಿವರಿಸಿದರು.


1. ಮುಡಾ ಹಗರಣದ ತನಿಖೆಯನ್ನು ಸಿಬಿಐಗೆ ವಹಿಸಬೇಕು ಎಂದು ಕೋರಿ ಸಲ್ಲಿಕೆಯಾದ ಅರ್ಜಿಯ ವಿಚಾರಣೆ ಪೂರ್ಣ
2. ಸಿಎಂ ಸಿದ್ದರಾಮಯ್ಯ ಹಾಗೂ ದೂರುದಾರ ಸ್ನೇಹಮಯಿ ಕೃಷ್ಣ ಪರ ವಕೀಲರಿಂದ ವಾದ ಮಂಡನೆ
3. ವಾದ ಪ್ರತಿವಾದ ಆಲಿಸಿ ಆದೇಶ ಕಾಯ್ದಿರಿಸಿದ ಹೈಕೋರ್ಟ್, ಲೋಕಾಯುಕ್ತ ವರದಿ ಸಲ್ಲಿಕೆಗೆ ಗಡುವು ವಿಸ್ತರಣೆ

### ಹೈಕೋರ್ಟ್ ಧಾರವಾಡ ಪೀಠಕ್ಕೆ ತನಿಖಾ ವರದಿ

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಹಗರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತರು ಸೋಮವಾರ ಹೈಕೋರ್ಟ್ ಧಾರವಾಡ ಪೀಠಕ್ಕೆ ತನಿಖಾ ವರದಿ ಸಲ್ಲಿಸಿದೆ. ಈ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನಂಬರ್ ಒನ್ ಆರೋಪಿಯಾಗಿದ್ದು, ಅವರ ಪತ್ನಿ ಬಿ.ಎಂ. ಪಾರ್ವತಿ ಎರಡನೇ ಆರೋಪಿಯಾಗಿದ್ದಾರೆ. ಮೈಸೂರು ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ ಟಿ.ಜೆ. ಉದೇಶ್ ಅವರು ಮುಚ್ಚಿದ ಲಕೋಟೆಯಲ್ಲಿ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ. ಈ ಸಂಬಂಧ ತಪ್ಪದೇ ವರದಿ ಸಲ್ಲಿಸುವಂತೆ ಲೋಕಾಯುಕ್ತರಿಗೆ ನ್ಯಾಯಾಲಯ ಈ ಹಿಂದೆ ಸೂಚಿಸಿತ್ತು. ಹಾಲಿ ಅರ್ಜಿಯ ಆದೇಶ ಕಾಯ್ದಿರಿಸಲಾಗಿದ್ದು, ಆದೇಶ ಪ್ರಕಟವಾದ ಬಳಿಕ ಲೋಕಾಯುಕ್ತ ಪೊಲೀಸರು ವಿಚಾರಣಾಧೀನ ನ್ಯಾಯಾಲಯಕ್ಕೆ ಮುಡಾ ಪ್ರಕರಣದ ತನಿಖಾ ವರದಿಯನ್ನು ಸಲ್ಲಿಸಬಹುದಾಗಿದೆ. ಲೋಕಾಯುಕ್ತ ಪೊಲೀಸರು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿರುವ ತನಿಖಾ ವರದಿಯನ್ನು ದಾಖಲೆಯಲ್ಲಿ ನ್ಯಾಯಲಯ ಸ್ವೀಕರಿಸಿದೆ.

## ತಹಶೀಲ್ದಾರ್-ಎಸಿ ಕೋರ್ಟ್ ಕೇಸ್ ಮುಗಿಸಲು 6 ತಿಂಗಳು ಡೆಡ್ ಲೈನ್

• ಉದಯವಾಹಿನಿ, ಬೆಂಗಳೂರು



ತಹಶೀಲ್ದಾರ್ ಹಾಗೂ ಉಪ ವಿಭಾಗಾಧಿಕಾರಿಗಳ (ಎಸಿ) ನ್ಯಾಯಾಲಯಗಳಲ್ಲಿ ಅವಧಿ ಮೀರಿ ಇರುವ ಎಲ್ಲಾ ಪ್ರಕರಣಗಳ ಇತ್ಯರ್ಥಕ್ಕೆ ಆರು ತಿಂಗಳ ಗಡುವು ನೀಡಲಾಗಿದೆ ಎಂದು ಸಚಿವ ಕೃಷ್ಣ ಬೈರೇಗೌಡ ಅವರು ತಿಳಿಸಿದರು. ವಿಕಾಸಸೌಧದಲ್ಲಿ ಸೋಮವಾರ ಜಿಲ್ಲಾಧಿಕಾರಿಗಳ ಮಾಸಿಕ ಪ್ರಗತಿ ಪರಿಶೀಲನಾ ಸಭೆಯ ನಂತರ ಪತ್ರಿಕಾಗೋಷ್ಠಿ ನಡೆಸಿ ಮಾಹಿತಿ ನೀಡಿದ ಅವರು, ತಕರಾರು ಪ್ರಕರಣಗಳನ್ನು ತಹಶೀಲ್ದಾರ್ ನ್ಯಾಯಾಲಯಗಳು 90 ದಿನಗಳಲ್ಲಿ ಇತ್ಯರ್ಥಪಡಿಸಬೇಕು ಎಂಬ ನಿಯಮವಿದೆ. ಆದರೆ, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಅವಧಿ ಮೀರಿದ 10,774 ಪ್ರಕರಣಗಳಿದ್ದವು. ಪ್ರಸ್ತುತ ಈ ಸಂಖ್ಯೆಯನ್ನು 369ಕ್ಕೆ ಇಳಿಸಲಾಗಿದೆ. ಈ ಹಿಂದೆ ಪ್ರತಿ ಪ್ರಕರಣಗಳ ಇತ್ಯರ್ಥಕ್ಕೆ ತಹಶೀಲ್ದಾರ್ ನ್ಯಾಯಾಲಯಗಳಲ್ಲಿ ಸರಾಸರಿ 7 ತಿಂಗಳಿಗಿಂತ ಹೆಚ್ಚು ಸಮಯ ವ್ಯಯವಾಗುತ್ತಿತ್ತು. ಆದರೆ, ಪ್ರಸ್ತುತ 67 ದಿನಕ್ಕೆ ಪ್ರಕರಣಗಳನ್ನು ವಿಲೇ ಮಾಡಲಾಗುತ್ತಿದೆ ಎಂದರು. ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ 62,857 ಪ್ರಕರಣಗಳು ಬಾಕಿ ಇದ್ದವು. ಆದರೆ, ಇದೀಗ ಆ ಸಂಖ್ಯೆಯನ್ನು 26,726ಕ್ಕೆ ಇಳಿಸಲಾಗಿದೆ. ಕಳೆದ ಒಂದೂವರೆ ವರ್ಷದಲ್ಲಿ 36,131 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ. ನಾವು ಅಧಿಕಾರ ಸ್ವೀಕರಿಸುವಾಗ ಐದು ವರ್ಷಕ್ಕೆ ಮೇಲ್ಪಟ್ಟ 32777 ಪ್ರಕರಣಗಳಿದ್ದವು, ಈ ಸಂಖ್ಯೆಯನ್ನು 6,602ಕ್ಕೆ ಇಳಿಸಲಾಗಿದೆ. ಮುಂದಿನ ಆರು ತಿಂಗಳಲ್ಲಿ ಉಳಿದ ಪ್ರಕರಣಗಳನ್ನೂ ಇತ್ಯರ್ಥಪಡಿಸಲು ಸೂಚಿಸಲಾಗಿದೆ. ಇದರಿಂದ ಜನರು ಅನಗತ್ಯವಾಗಿ ಸರ್ಕಾರಿ ಕಚೇರಿಗಳಿಗೆ ಅಲೆದಾಡುವುದು ತಪ್ಪಲಿದೆ ಎಂದು ತಿಳಿಸಿದರು.

**ಸರ್ಕಾರಿ ಕಚೇರಿಗಳಿಗೆ ಅಲೆದಾಡುವುದು ತಪ್ಪಲಿದೆ**

## ಮೈಕ್ರೋ ಫೈನಾನ್ಸ್‌ಗೆ ಬಡವರು ಮೊರೆ ಹೋಗಲು ಸರ್ಕಾರವೇ ಹೊಣೆ

• ಉದಯವಾಹಿನಿ, ಬೆಂಗಳೂರು

ವಿವಿಧ ಅಭಿವೃದ್ಧಿ ನಿಗಮ–ಮಂಡಳಿಗಳಿಗೆ 1055 ಕೋಟಿ ರೂ., ಕೃಷಿ ಇಲಾಖೆಗೆ 2,253 ಕೋಟಿ ರೂ., ತೋಟಗಾರಿಕೆ, ಸಹಕಾರ, ಗ್ರಾಮೀಣಾಭಿವೃದ್ಧಿ ಇಲಾಖೆಗಳಿಗೆ ಒಟ್ಟು 600 ಕೋಟಿ ರೂ., ಕಂದಾಯ ಇಲಾಖೆಗೆ 500 ಕೋಟಿ ರೂ., ಲೋಕೋಪಯೋಗಿ ಹಾಗೂ ಜಲ ಸಂಪನ್ಮೂಲ ಇಲಾಖೆಗಳಿಗೆ ತಲಾ 2,700 ಕೋಟಿ ರೂ ಅನುದಾನ ಕಡಿತ ಮಾಡಿದ್ದರಿಂದ ನೆರವು ವಂಚಿತ ಬಡವರು, ರೈತರು ಸಾಲಕ್ಕಾಗಿ ಮೈಕ್ರೋ ಫೈನಾನ್ಸ್ ಕಂಪನಿಗಳಿಗೆ ಮೊರೆ ಹೋಗಿದ್ದಾರೆ ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್. ಅಶೋಕ್ ತೀಕ್ಷ್ಣವಾಗಿ ವಿಮರ್ಶಿಸಿದರು.

ವಿಧಾನಸೌಧದಲ್ಲಿ ಸೋಮವಾರ ಕರೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಕ್ರೋ ಫೈನಾನ್ಸ್ ಕಂಪನಿಗಳು ಪರಿಸ್ಥಿತಿಯ ದುರ್ಲಾಭ ಪಡೆದು, ಬಡವರು, ರೈತರಿಗೆ ದುಬಾರಿ ಬಡ್ಡಿ ದರದಲ್ಲಿ ಸಾಲ ನೀಡಿವೆ. ಸಾಲ ಮರು ಪಾವತಿ ವಿಳಂಬ, ಬಡ್ಡಿ ಹೊರೆಯಿಂದ ಸಾಲಗಾರ ಕುಟುಂಬಗಳು ಸಂಕಷ್ಟಕ್ಕೆ ಸಿಲುಕಿವೆ. ಮೈಕ್ರೋ ಫೈನಾನ್ಸ್ ಹಾವಳಿಗೆ ಕಾಂಗ್ರೆಸ್ ಸರ್ಕಾರ ನೇರ ಹೊಣೆಯಾಗಿದೆ ಎಂದು ವಾಗ್ದಾಳಿ ಮಾಡಿದರು.

ಕಿರುಕುಳ ತಾಳದೆ ಹಲವರು ಆತ್ಮಹತ್ಯೆ, ನೊಂದವರು ಮನೆಗಳಿಗೆ ಬೀಗ ಹಾಕಿಕೊಂಡು ಊರು ಖಾಲಿ ಮಾಡುತ್ತಿದ್ದಾರೆ. ನೊಂದವರ ಅಳಲು, ಉಪಟಳದಿಂದ ತಲ್ಲಣಿಸು ವಂತಾಗಲು ಸರ್ಕಾರದ ಬೊಕ್ಕಸ ಬರಿದು, ಆಡಳಿತ ವೈಫಲ್ಯ ಕಾರಣವೆಂದು ಕಿಡಿಕಾರಿದರು.

## 25 ಅಡಿ ಎತ್ತರದ ಭುವನೇಶ್ವರಿ ಕಂಚಿನ ಪ್ರತಿಮೆ ಅನಾವರಣ


• ಉದಯವಾಹಿನಿ, ಬೆಂಗಳೂರು

ಕರ್ನಾಟಕ ಸುವರ್ಣ ಮಹೋತ್ಸವದ ಹಿನ್ನೆಲೆಯಲ್ಲಿ ಶಕ್ತಿಸೌಧ ಪಶ್ಚಿಮ ದ್ವಾರದಲ್ಲಿ ನಿರ್ಮಿಸಲಾಗಿರುವ 25 ಅಡಿ ಎತ್ತರದ ಭುವನೇಶ್ವರಿ ಕಂಚಿನ ಪ್ರತಿಮೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅನಾವರಣಗೊಳಿಸಿದರು. ಕರ್ನಾಟಕ ಸುವರ್ಣ ಮಹೋತ್ಸವದ ಹಿನ್ನೆಲೆಯಲ್ಲಿ 'ಹೆಸರಾಯಿತು ಕರ್ನಾಟಕ ಹಾಗೂ ಉಸಿರಾಗಲಿ' ಕನ್ನಡ ಎಂಬ ಶೀರ್ಷಿಕೆಯಡಿ ವರ್ಷವಿಡೀ ರಾಜ್ಯಾದ್ಯಂತ ಹಲವು ಕಾರ್ಯಕ್ರಮಗಳನ್ನು ಆಯೋಜನೆ ಮಾಡಲಾಗಿತ್ತು. ಅದರಂತೆ ಕನ್ನಡಾಂಬೆಯ ಪ್ರತಿಮೆಯನ್ನು ವಿಧಾನಸೌಧದ ಆವರಣದಲ್ಲಿ ಪ್ರತಿಷ್ಠಾಪಿಸಲು ನಿರ್ಧರಿಸಲಾಗಿತ್ತು. ಅದರಂತೆ ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಂಚಿನ ಪ್ರತಿಮೆಯನ್ನು ಅನಾವರಣಗೊಳಿಸಿದರು.



## ಮಾರ್ಚ್‌ನಿಂದ ಹೆಚ್‌ಡಿಡಿ ರಾಜ್ಯ ಪ್ರವಾಸ

• ಉದಯವಾಹಿನಿ, ಬೆಂಗಳೂರು



ಕಳೆದ ವಿಧಾನಸಭಾ ಚುನಾವಣೆ ಹಾಗೂ ಲೋಕಸಭಾ ಚುನಾವಣೆಯಲ್ಲಿ ಪ್ರಾದೇಶಿಕ ಪಕ್ಷ ಜೆಡಿಎಸ್ ಸಾಲು ಸಾಲು ಸೋಲುಗಳನ್ನ ಕಂಡಿದ್ದು, ಇದೀಗ ಜೆಡಿಎಸ್ ಪಕ್ಷ ಸಂಘಟನೆಗಾಗಿ ಮಾರ್ಚ್ ತಿಂಗಳಿಂದ ರಾಜ್ಯಾದ್ಯಂತ ಪ್ರವಾಸ ಕೈಗೊಳ್ಳುವುದಾಗಿ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷರು ಹಾಗೂ ಮಾಜಿ ಪ್ರಧಾನಿಗಳಾದ ಹೆಚ್.ಡಿ.ದೇವೇಗೌಡ ಅವರು ಹೇಳಿದರು. ಪಕ್ಷದ ರಾಜ್ಯ ಕಚೇರಿ ಜೆಪಿ ಭವನದಲ್ಲಿ ಮಾಧ್ಯಮಗಳ ಜೊತೆಗೆ ಹೆಚ್ ಡಿ ದೇವೇಗೌಡ್ರು, ಮಾತನಾಡಿ, ಪಕ್ಷದ ಸಂಘಟನೆಗೆ ನಾನು ರಾಜ್ಯದ ಉದ್ದಗಲಕ್ಕೂ ಪ್ರವಾಸ ಮಾಡುತ್ತೇನೆ. ಮಾರ್ಚ್ ತಿಂಗಳಿಂದ ಜಿಲ್ಲೆಗಳಿಗೆ ಭೇಟಿ ಕೊಡುತ್ತೇನೆ. ಕಾರ್ಯಕರ್ತರು, ಮುಖಂಡರ ಜತೆಗೂಡಿ ಪಕ್ಷ ಸಂಘಟನೆ ಮಾಡುತ್ತೇನೆ ಎಂಬುದಾಗಿ ಮಾಜಿ ಪ್ರಧಾನಿ ಹೆಚ್ ಡಿ ದೇವೇಗೌಡ್ರು ತಿಳಿಸಿದರು. ಹೆಚ್.ಡಿ.ಕುಮಾರಸ್ವಾಮಿ ಅವರು ಕೇಂದ್ರ ಸಚಿವರಾಗಿದ್ದಾರೆ. ಅವರು ದೇಶದ ಉದ್ದಗಲಕ್ಕೂ ಸಂಚಾರ ಮಾಡಿ ಕೆಲಸ ಮಾಡಬೇಕಿದೆ. ನಾನು, ನಿಖಿಲ್ ಕುಮಾರಸ್ವಾಮಿ ಹಾಗೂ ಪಕ್ಷದ ಎಲ್ಲಾ ಹಿರಿಯ, ಕಿರಿಯ ಮುಖಂಡರೆಲ್ಲ ಸೇರಿ ಕಾರ್ಯಕರ್ತರ ಪಡೆಯೊಂದಿಗೆ ಪಕ್ಷ ಕಟ್ಟುತ್ತೇವೆ ಎಂದು ಹೆಚ್ ಡಿ ದೇವೇಗೌಡ್ರು ಅವರು ಹೇಳಿದರು. ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆ ಹಿನ್ನೆಲೆಯಲ್ಲಿ ಪಕ್ಷಕ್ಕೆ ಶಕ್ತಿ ತುಂಬುತ್ತೇವೆ.


ಜಿಲ್ಲೆ, ತಾಲ್ಲೂಕು, ಹೋಬಳಿ, ಗ್ರಾಮ ಮಟ್ಟದಲ್ಲಿ ಪಕ್ಷವನ್ನು ಬಲಪಡಿಸುತ್ತೇವೆ. ಬೆಂಗಳೂರು ನಗರದಲ್ಲಿ ಸ್ಥಳೀಯರ ಮುಖಂಡರ ಜತೆಗೂಡಿ ಪಕ್ಷ ಸಂಘಟನೆ ಮಾಡುತ್ತೇವೆ ಎಂದು ರಾಷ್ಟ್ರೀಯ ಅಧ್ಯಕ್ಷರಾದ ಹೆಚ್ ಡಿ ದೇವೇಗೌಡ್ರು, ಹೇಳಿದರು.

# ಮುಡಾ ಹಗರಣದಲ್ಲಿ ಸಿಎಂಗೆ ದೊಡ್ಡ ಹಿನ್ನಡೆ: ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ

● ಸಿದ್ದರಾಮಯ್ಯನವರ ಬಾಮೈದ ನೋಟಿಸ್ ಕೊಡದೆ ಇದ್ದರೂ ಮೈಸೂರಿನ ಲೋಕಾಯುಕ್ತ ಕಚೇರಿಗೆ ಭೇಟಿ ಕೊಡುತ್ತಿದ್ದರು


• ಉದಯವಾಹಿನಿ, ಬೆಂಗಳೂರು

ಮೈಸೂರಿನ ಮುಡಾ ಹಗರಣದಲ್ಲಿ ಮುಖ್ಯಮಂತ್ರಿಗಳಿಗೆ ಬಹಳ ದೊಡ್ಡ ಹಿನ್ನಡೆಯಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ ಅವರು ತಿಳಿಸಿದ್ದಾರೆ. ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಇಂದು ಮಾಧ್ಯಮದವರ ಜೊತೆ ಮಾತನಾಡಿದ ಅವರು, ಬೇಗನೆ ಬಿ ರಿಪೋರ್ಟ್ ಹಾಕಿಸಿಕೊಂಡು ಪ್ರಕರಣ ಮುಚ್ಚಿ ಹಾಕುವ ಪ್ರಯತ್ನದಲ್ಲಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ದೊಡ್ಡ ಆಘಾತವಾಗಿದೆ. ಲೋಕಾಯುಕ್ತ ಸಂಸ್ಥೆಯ ತನಿಖೆಯನ್ನು ಮಾಧ್ಯಮಗಳೇ ತೋರಿಸಿವೆ. ರಾತ್ರಿ 8–9 ಗಂಟೆಗೆ ಸಿದ್ದರಾಮಯ್ಯನವರ ಬಾಮೈದ ನೋಟಿಸ್ ಕೊಡದೆ ಇದ್ದರೂ ಮೈಸೂರಿನ ಲೋಕಾಯುಕ್ತ ಕಚೇರಿಗೆ ಭೇಟಿ ಕೊಡುತ್ತಿದ್ದರು ಎಂದು ಆಕ್ಷೇಪಿಸಿದರು.



**ನಿವೇಶನಗಳ ಅಕ್ರಮ ಹಂಚಿಕೆ**

ಸಿಎಂ ಕುಟುಂಬಕ್ಕೆ ಎಷ್ಟು ಮುಕ್ತ ವ್ಯವಸ್ಥೆ ಇತ್ತೆಂದು ಅವತ್ತು ಕೂಡ ಬಹಿರಂಗವಾಗಿದೆ. ಮೈಸೂರಿನ ಮುಡಾ ಹಗರಣದ ವಿಷಯದಲ್ಲಿ ಬಿಜೆಪಿ- ಜೆಡಿಎಸ್ ಪಕ್ಷ ಒಟ್ಟಾಗಿ ಪಾದಯಾತ್ರೆ ಮಾಡಿದ್ದವು. ನಮ್ಮ ಹೋರಾಟದ ಪರಿಣಾಮವಾಗಿ ಮುಖ್ಯಮಂತ್ರಿಗಳ ಧರ್ಮಪತ್ನಿಯವರು 14 ನಿವೇಶನ ಹಿಂತಿರುಗಿಸುತ್ತೇವೆ ಎಂದು ರಾತ್ರೋರಾತ್ರಿ ಮೂಡಕ್ಕೆ ಪತ್ರ ಬರೆದಿದ್ದರು. ಆ ಪತ್ರದ ಮೂಲಕ ಹಗರಣದಿಂದ ಹೊರಕ್ಕೆ ಬಂದ ಭ್ರಮೆಯಲ್ಲಿ ಮುಖ್ಯಮಂತ್ರಿಗಳೂ ಇದ್ದರು. ಇವತ್ತಿನ ಇ.ಡಿ. ನೋಟಿಸ್‌ನಿಂದ ಆಘಾತ ಆಗಿರುವುದರಲ್ಲಿ ಎರಡು ಮಾತಿಲ್ಲ ಎಂದು ನುಡಿದರು. ಇ.ಡಿಗೆ ಅವರದೇ ಆದ ನಿಯಮಗಳಿರುತ್ತವೆ. ಅದರ ಪ್ರಕಾರ ಅವರು ಮುಂದುವರೆಯುತ್ತಾರೆ. ಇ.ಡಿ. ನೋಟಿಸ್ ರಾಜಕೀಯ ಪ್ರೇರಿತ ಎಂಬುದಕ್ಕಿಂತ ಹೆಚ್ಚಾಗಿ ಕಾಂಗ್ರೆಸ್ ಆಡಳಿತಾವಧಿಯಲ್ಲಿ ಸಾವಿರಾರು ಕೋಟಿ ಬಡವರ ಪಾಲಾಗಬೇಕಾದ ನಿವೇಶನಗಳ ಅಕ್ರಮ ಹಂಚಿಕೆ ನಡೆದಿತ್ತು. ಈ ದೊಡ್ಡ ಹಗರಣದ ಪರಿಣಾಮವನ್ನು ಮುಂದಿನ ದಿನಗಳಲ್ಲಿ ಎದುರಿಸಬೇಕಾಗುತ್ತದೆ ಎಂದು ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು.



● ಲೋಕಾಯುಕ್ತ ಕೊಟ್ಟ ವರದಿಯ ಮಾಹಿತಿ ಇಲ್ಲ, ರಾಜ್ಯ ಹೈಕೋರ್ಟಿಗೆ ಲಕೋಟೆಯಲ್ಲಿ ವರದಿ ನೀಡಿದ ಮಾಹಿತಿಗಳು ಬರುತ್ತಿವೆ. ನಾನು ಡಿ.ಕೆ.ಶಿವಕುಮಾರ್ ಅವರ ಹೇಳಿಕೆಯನ್ನೂ ಗಮನಿಸಿದ್ದೇನೆ. ರಾಜಕೀಯಪ್ರೇರಿತ ಇ.ಡಿ. ಎಂದು ಅವರು ಹೇಳಿದ್ದಾರೆ. ಅವರ ಮುಖದಲ್ಲಿ ಮಂದಹಾಸವೂ ಕಾಣುತ್ತಿದೆ. ಅಬ್ಬಾ ಸಿದ್ದರಾಮಯ್ಯನವರ ಕುಟುಂಬಕ್ಕೆ ಇ.ಡಿ. ನೋಟಿಸ್ ಕೊಟ್ಟಿದ ಎಂಬ ಸಂತೋಷ ಅವರ ಮುಖದಲ್ಲಿತ್ತು

**- ಬಿ.ವೈ. ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ**

### ಸಚಿವ ಭೈರತಿ ಸುರೇಶ್‌ರಿಗೂ ಇ.ಡಿ. ನೋಟಿಸ್ ಕೊಟ್ಟಿದೆ

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಆತುರಾತುರವಾಗಿ ಲೋಕಾಯುಕ್ತ ಸಂಸ್ಥೆಯಿಂದ ಬಿ ರಿಪೋರ್ಟ್ ಪಡೆದು ಮುಡಾ ಹಗರಣದಿಂದ ಹೊರಕ್ಕೆ ಬರಬಹುದೆಂಬ ಲೆಕ್ಕಾಚಾರದಲ್ಲಿದ್ದರು. ಇದೇ ಸಂದರ್ಭದಲ್ಲಿ ಇ.ಡಿ. (ಜಾರಿ ನಿರ್ದೇಶನಾಲಯ) ಮುಖ್ಯಮಂತ್ರಿಗಳ ಧರ್ಮಪತ್ನಿಗೂ ನೋಟಿಸ್ ಕೊಟ್ಟಿದೆ ಹಾಗೂ ತನಿಖೆಗೆ ಹಾಜರಾಗಲು ತಿಳಿಸಿದೆ ಎಂದು ವಿವರಿಸಿದರು. ಜೊತೆಗೇ ಸಚಿವ ಭೈರತಿ ಸುರೇಶ್‌ರಿಗೂ ಇ.ಡಿ. ನೋಟಿಸ್ ಕೊಟ್ಟಿದೆ. ಹಾಗಾಗಿ ಅನಿವಾರ್ಯವಾಗಿ ಬೈರತಿ ಸುರೇಶ್, ಮುಖ್ಯಮಂತ್ರಿಗಳ ಧರ್ಮಪತ್ನಿ ಅವರು ತನಿಖಾ ಸಂಸ್ಥೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗುವುದಿಲ್ಲ ಎಂದು ವಿಶ್ಲೇಷಿಸಿದರು.

| ಈ ದಿನದ ದರ | | | | |
|---|---|---|---|---|
| ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹8,225 /Gram24ct | ₹7,540/Gram22ct | ಬೆಳ್ಳಿ: ₹96.50/Gram |



## ಸಿದ್ಧಸೂಕ್ತಿ

**ಡಾ ಆರೂಢಭಾರತೀ ಸ್ವಾಮೀಜಿ**
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ ರಾಮೋಹಳ್ಳಿ

### ಕರ್ನೂಲ್‌ನ ಬಸವರಾಜಯ್ಯ ಅಜ್ಜ

ಮೊನ್ನೆ ಹಾನಗಲ್ ತಾಲ್ಲೂಕಿನ ಹೋತನಹಳ್ಳಿಯ ಸಿದ್ಧಾರೂಢ ಮಠದಲ್ಲಿ ಬಸವರಾಜಯ್ಯ ಅಜ್ಜನನ್ನು ಕಂಡೆ. ವಯಸ್ಸು 94, ಆರೋಗ್ಯದಿಂದಿದ್ದು ಓಡಾಡಿಕೊಂಡಿದ್ದಾರೆ. ಆಂಧ್ರದಲ್ಲಿ ಹುಟ್ಟಿದ್ದರೂ ಹುಟ್ಟೂರು ತಂದೆ ತಾಯಿಗಳ ಹೆಸರು ತಿಳಿದಿಲ್ಲ. ಹಲವು ಭಾಷೆ ಬಲ್ಲರು ಕನ್ನಡ ಚೆನ್ನಾಗಿ ಆಡುವರು. ತಂದೆ ತಾಯಿ ಭಿಕ್ಷುಕರು,ತನಗೊಬ್ಬ ಸಹೋದರಿ, ಭಿಕ್ಷೆಗಾಗಿ ಊರಿಂದೂರಿಗೆ ಅಲೆಯಾವಾಗ ಒಬ್ಬರು ಯಾರಿಗೂ ತಿಳಿಯದಂತೆ ನನ್ನನ್ನು ಕರೆ ತಂದು ಸಾಕಿದರೆನ್ನುವ ಇವರು ಹೆಸರು ಹೇಳುವುದಿಲ್ಲ. ಸಂಸಾರದಲ್ಲಿ ಆಸಕ್ತಿ ಹೊಂದದೇ ಬ್ರಹ್ಮಚಾರಿಯಾಗಿ ಉಳಿದಿದ್ದಾರೆ. ಬೆಲ್ಲ ರಾಗಿ ಅಕ್ಕಿ ಅಡಕೆ ಮುಂತಾದ ದಿನಸಿಗಳ ಸಗಟು ವ್ಯಾಪಾರಕ್ಕಿಳಿದ ಇವರು 1964 ರ ಕರ್ನಾಟಕದ ಬರಗಾಲದ ಆಹಾರ ಕೊರತೆಯನ್ನು ವ್ಯಾಪಾರ ವಹಿವಾಟಿನಿಂದ ಗಣನೀಯವಾಗಿ ಕುಗ್ಗಿಸಿದರು. ಕರ್ನೂಲ್ ನಲ್ಲಿ ವಾಸಕ್ಕೆ ಒಂದು ಮನೆ ಬಿಟ್ಟರೆ ಬೇರೆ ಆಸ್ತಿ ಪಾಸ್ತಿ ಮಾಡಲಿಲ್ಲ. ಬಂದ ಆದಾಯದ 5%ರಷ್ಟು ಬದುಕಿಗೆ, 5%ರಷ್ಟು ಭವಿಷ್ಯಕ್ಕೆ, 90% ರಷ್ಟು ಸಮಾಜಕ್ಕೆ. ಉತ್ತರ ಭಾರತದಲ್ಲಿ 3, ತುಮಕೂರಿನ ಗುಳೂರು ಬಳಿ ಮಸ್ಕಲ್ಲಲ್ಲಿ 1 ಪಂಚಲಿಂಗೇಶ್ವರ ಶನೈಶ್ಚರ ನವಗ್ರಹ ದೇವಾಲಯ ನಿರ್ಮಿಸಿ ಕೊಟ್ಟಿದ್ದಾರೆ. ಇದೀಗ ಹೋತನಹಳ್ಳಿಯ ಸಿದ್ಧಾರೂಢ ಮಠದಲ್ಲಿಯೂ ನಿರ್ಮಿಸುತ್ತಿದ್ದಾರೆ. 50 ಲಕ್ಷ ನೀಡಿದ್ದು ಇನ್ನೂ ನೀಡಲಿದ್ದಾರೆ. ಗೊಬ್ಬರಚೀಲದ ಬ್ಯಾಗ್, ಸಾದಾ ಬಟ್ಟೆ ಸರಳ ಬದುಕು. ಬಸ್ ರೇಲ್ವೆ ವಿಮಾನ ಪ್ರಯಾಣ. ನಿಲ್ದಾಣದಲ್ಲಿಯೇ ಟವಲ್ ಹಾಸಿ ಪಂಜೆ ಹೊದ್ದು ವಿಶ್ರಾಂತಿ. ಆಸ್ತಿ ಮಾಡಿದರೆ ವೈಷಮ್ಯ, ಜಗಳ ಕೊಲೆ ಪರವಶ. ಕೊನೆಗಾಲದಲ್ಲಿಯೂ ನನ್ನೊಂದಿಗೆ ಬರುವ ಆಸ್ತಿ ಮಾಡುವ ನಾನೊಬ್ಬ ಸ್ವಾರ್ಥಿ. ನನಗೆ ಯಾರೂ ಶತ್ರುಗಳಿಲ್ಲ, ಎಲ್ಲಾರೂ ಬಳಗ. ನಾನೊಬ್ಬ ಸಾಮಾನ್ಯ, ಎಲ್ಲಾರೊಳಗೊಬ್ಬ, ನನ್ನ ಬಗ್ಗೆ ಬರೆಯಬೇಡಿ ಎನ್ನುವರು.

# ಸರ್ಕಾರ ಮಾಡಿದ ಪಾಪದಿಂದಾಗಿ ಮೈಕ್ರೋ ಫೈನಾನ್ಸ್‌ನಲ್ಲಿ ಸಾಲ

## ಸರ್ಕಾರವೇ ಸಾಲ ನೀಡಿದ್ದರೆ ಜನರು ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಬರುತ್ತಿರಲಿಲ್ಲ ಪ್ರತಿಪಕ್ಷ ಆರ್.ಅಶೋಕ ಆಕ್ರೋಶ

• **ಉದಯವಾಹಿನಿ ಬೆಂಗಳೂರು**

ಕಾಂಗ್ರೆಸ್ ಸರ್ಕಾರ ಮಾಡಿದ ಪಾಪದಿಂದಾಗಿ ಜನರು ಮೈಕ್ರೋ ಫೈನಾನ್ಸ್‌ನಲ್ಲಿ ಸಾಲ ಪಡೆಯುತ್ತಿದ್ದಾರೆ. ಸರ್ಕಾರವೇ ಸಾಲ ನೀಡಿದ್ದರೆ ಜನರು ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಬರುತ್ತಿರಲಿಲ್ಲ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಆಕ್ರೋಶ ವ್ಯಕ್ತಪಡಿಸಿದರು. ವಿಧಾನಸೌಧದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಗಂಗಾ ಕಲ್ಯಾಣ ಯೋಜನೆಗೆ 2022-23 ರಲ್ಲಿ ಬಿಜೆಪಿ ಸರ್ಕಾರ 60 ಕೋಟಿ ರೂ. ಅನುದಾನ ನೀಡಿತ್ತು 2024-25 ರಲ್ಲಿ ಕಾಂಗ್ರೆಸ್ 40 ಕೋಟಿ ರೂ. ನೀಡಿದೆ. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಸ್ವಯಂ ಉದ್ಯೋಗ ಯೋಜನೆಗೆ ಬಿಜೆಪಿ 100 ಕೋಟಿ ರೂ. ನೀಡಿದರೆ, ಕಾಂಗ್ರೆಸ್ 45 ಕೋಟಿ ರೂ. ನೀಡಿದೆ. ತಾಂಡಾ ಅಭಿವೃದ್ಧಿ ನಿಗಮದ ಸ್ವಯಂ ಉದ್ಯೋಗ ಯೋಜನೆಗೆ ಬಿಜೆಪಿ 110 ಕೋಟಿ ರೂ. ನೀಡಿದರೆ ಕಾಂಗ್ರೆಸ್ 60 ಕೋಟಿ ರೂ. ನೀಡಿದೆ. ಕರ್ನಾಟಕ ಆದಿ ಜಾಂಬವ ಅಭಿವೃದ್ಧಿ ನಿಗಮಕ್ಕೆ ಬಿಜೆಪಿ 100 ಕೋಟಿ ರೂ. ನೀಡಿದರೆ, ಕಾಂಗ್ರೆಸ್ 50 ಕೋಟಿ ರೂ. ನೀಡಿದೆ. ಜೊತೆಗೆ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಭ್ರಷ್ಟಾಚಾರದಿಂದ ಹಣ ಫ್ರೀಜ್ ಆಗಿದೆ. ನಿಗಮಗಳಿಗೆ 1,700 ಕೋಟಿ ರೂ. ನೀಡಬೇಕಿದ್ದು, 643 ಕೋಟಿ ರೂ. ನೀಡಲಾಗಿದೆ. ಅಂದರೆ ಎಲ್ಲಾ ನಿಗಮಗಳಿಗೆ ಒಟ್ಟು 1,055 ಕೋಟಿ ರೂ. ಕೊರತೆಯಾಗಿದೆ. ಈ ಹಣದಲ್ಲಿ ಜನರಿಗೆ ಸಾಲ ನೀಡಬಹುದಿತ್ತು. ಕೊರತೆಯಾದ ಹಣವನ್ನು ಸಾಲವಾಗಿ ಮೈಕ್ರೋ ಫೈನಾನ್ಸ್‌ಗಳು ನೀಡುತ್ತಿವೆ ಎಂದರು.

**ಸಿದ್ದರಾಮಯ್ಯ ಈಗ ಹೊಸ ಕಾನೂನು ತರಲು**

**ಕೋಟಿ ಲೂಟಿಯಾದ ನಂತರ ಬಾಗಿಲು ಹಾಕಿದರು ಎಂಬಂತೆ, ಸಿಎಂ ಸಿದ್ದರಾಮಯ್ಯ ಈಗ ಹೊಸ ಕಾನೂನು ತರಲು ಮುಂದಾಗಿದ್ದಾರೆ. ನೋಟಿಸ್ ಕೊಡದೆ ಜನರನ್ನು ಮನೆಯಿಂದ ಹೊರಕ್ಕೆ ಕಳುಹಿಸಲಾಗಿದೆ. ಇಂತಹ ಸಮಯದಲ್ಲಿ ಪೊಲೀಸರು ಕ್ರಮ ಕೈಗೊಳ್ಳಬೇಕಿತ್ತು. ಆದರೆ ಪೊಲೀಸರು ಕೂಡ ಇದಕ್ಕೆ ಸಹಕಾರ ನೀಡಿದ್ದಾರೆ. ಕಂಟ್ರೋಲ್ ರೂಮ್ ರೂಪಿಸಿದರೂ ಅದರಿಂದ ಜನರಿಗೆ ಪ್ರಯೋಜನವಾಗಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.**

ಪ್ರತಿ ಬಜೆಟ್‌ನಲ್ಲೂ ಅನುದಾನ ಶೇ.20 ರಷ್ಟು ಹೆಚ್ಚಾಗಬೇಕು. 2022-23 ರಲ್ಲಿ ಬಿಜೆಪಿ ಸರ್ಕಾರ ಕೃಷಿ ಇಲಾಖೆಗೆ 7,288 ಕೋಟಿ ರೂ. ನೀಡಿದರೆ, ಕಾಂಗ್ರೆಸ್ ಸರ್ಕಾರ 5,035 ಕೋಟಿ ರೂ. ನೀಡಿದೆ. ಅಂದರೆ 2,253 ಕೋಟಿ ರೂ. ಕೊರತೆಯಾಗಿದೆ. ಇದು ರೈತರ ಬದುಕಿನ ಮೇಲೆ ಪರಿಣಾಮ ಬೀರಿದೆ. ತೋಟಗಾರಿಕಾ ಇಲಾಖೆಗೆ ಬಿಜೆಪಿ 1,374 ಕೋಟಿ ರೂ. ನೀಡಿದರೆ, ಕಾಂಗ್ರೆಸ್ 1,207 ಕೋಟಿ ರೂ. ನೀಡಿದೆ. ಕೃಷಿ, ತೋಟಗಾರಿಕೆ, ಗ್ರಾಮೀಣಾಭಿವೃದ್ಧಿ, ಸಹಕಾರಿ ಎಲ್ಲಾ ಸೇರಿ ಬಿಜೆಪಿ 15,383 ಕೋಟಿ ರೂ. ನೀಡಿದರೆ, ಕಾಂಗ್ರೆಸ್ 14,768 ಕೋಟಿ ರೂ. ನೀಡಿದೆ. ಇದರಿಂದ 614 ಕೋಟಿ ರೂ. ಕೊರತೆಯಾಗಿದೆ. ಕಂದಾಯ ಇಲಾಖೆಗೆ ಬಿಜೆಪಿ 1534 ಕೋಟಿ ರೂ.ನೀಡಿದರೆ, ಕಾಂಗ್ರೆಸ್ ನಿಂದ 940 ಕೋಟಿ ರೂ. ನೀಡಲಾಗಿದೆ. 594 ಕೋಟಿ ರೂ. ಕೊರತೆಯಾಗಿದೆ. ಲೋಕೋಪಯೋಗಿ ಇಲಾಖೆಗೆ ಬಿಜೆಪಿ 12,410 ಕೋಟಿ ರೂ. ನೀಡಿದರೆ, ಕಾಂಗ್ರೆಸ್ ನಿಂದ 9,699 ಕೋಟಿ ರೂ. ನೀಡಲಾಗಿದೆ. 2,710 ಕೋಟಿ ರೂ. ಕೊರತೆಯಾಗಿದೆ. ನೀರಾವರಿಗೆ ಬಿಜೆಪಿ 19,610 ಕೋಟಿ ರೂ. ನೀಡಿದರೆ, ಕಾಂಗ್ರೆಸ್ 16,834 ಕೋಟಿ ರೂ. ನೀಡಿದೆ. 2755 3. ಮೈಕ್ರೋ ಫೈನಾನ್ಸ್‌ನ ಮೀಟರ್ ಬಡ್ಡಿ ದಂಧೆಯಲ್ಲಿ ರೌಡಿಗಳು ಈವರೆಗೆ ಸುಮ್ಮನಿದ್ದರು. ಕಾಂಗ್ರೆಸ್ ಸರ್ಕಾರದಿಂದಾಗಿ ರೌಡಿಗಳಿಗೆ ಉದ್ಯೋಗ ಸಿಕ್ಕಿದೆ. ಬಡ ಜನರು ಸಾಲ ಮಾಡಿದರೆ ಮನೆ ಬಿಟ್ಟು ಹೊರಡಬೇಕಾಗಿದೆ.

**ಸರ್ಕಾರ 60 ಕೋಟಿ ರೂ. ಅನುದಾನ**




**ಮೈಕ್ರೋ ಫೈನಾನ್ಸ್‌ನಲ್ಲಿ 10 ಜನರ ಗುಂಪು ರಚಿಸಿ, ಪ್ರತಿಯೊಬ್ಬರಿಗೂ 50 ಸಾವಿರ ರೂ. ಸಾಲ ನೀಡುತ್ತಾರೆ. ಒಬ್ಬರಿಗೆ ಉಳಿದವರು ಶೂರಿಟಿ ಕೊಡಬೇಕಾಗುತ್ತದೆ. ಪ್ರತಿ ತಿಂಗಳು ಅಧಿಕ ಬಡ್ಡಿ ಕಟ್ಟಬೇಕಾಗುತ್ತದೆ. 50 ಸಾವಿರ ರೂ. ಸಾಲ ಪಡೆದರೆ 67 ಸಾವಿರ ರೂ. ವಾಪಸ್ ನೀಡಬೇಕು. ಎರಡು ತಿಂಗಳು ಕಟ್ಟಲಿಲ್ಲವೆಂದರೆ ರೌಡಿಗಳು ಮನೆಗೆ ಹೋಗಿ ಗಲಾಟೆ ಮಾಡುತ್ತಾರೆ. ಅನೇಕ ಹಳ್ಳಿಗಳಲ್ಲಿ ಜನರು ಮನೆ ಬಿಟ್ಟು ವಲಸೆ ಹೋಗಿದ್ದಾರೆ ಎಂದರು.**

## ಎಲೆಕ್ಟ್ರಿಕ್ ಬೈಕ್ ಶೋರೂಂನಲ್ಲಿ ಅಗ್ನಿ ಅವಘಡ

• **ಉದಯವಾಹಿನಿ ಬೆಂಗಳೂರು**

ಬೆಂಗಳೂರಿನ ಬೈಕ್ ಶೋಂ ನಲ್ಲಿ ಅಗ್ನಿ ಅವಘಡ ಸಂಭವಿಸಿದ್ದು, 30 ಕ್ಕೂ ಬೈಕ್ ಗಳು ಬೈಕ್ ಗಳು ಸುಟ್ಟು ಕರಕಲಾಗಿದೆ ಎಂದು ಹೇಳಲಾಗುತ್ತಿದೆ. ರಾಜಾಜಿನಗರದ ರಾಜ್ ಕುಮಾರ್ ರಸ್ತೆಯಲ್ಲಿರುವ ಶೋ ರೂಂನಲ್ಲಿ ಅಗ್ನಿ ಅವಘಡ ಸಂಭವಿಸಿದ್ದು, ಶೋ ರೂಂ ಹೊತ್ತಿ ಉರಿಯುತ್ತಿದೆ. ಒಕಿನೋವ ಎಂಬ ಬ್ರಾಂಡ್‌ನ ಎಲೆಕ್ಟಿಕ್ ಬೈಕ್ ಶೋ ರಂ ನಲ್ಲಿ ಬೆಂಕಿ ಅವಘಡ ಸಂಭವಿಸಿದ್ದು, ಸ್ಥಳಕ್ಕೆ ರಾಜಾಜಿನಗರ ಪೊಲೀಸರು ಹಾಗೂ ಅಗ್ನಿಶಾಮಕ ಸಿಬ್ಬಂದಿ ದೌಡಾಯಿಸಿ ಬೆಂಕಿ ನಂದಿಸುತ್ತಿದ್ದಾರೆ. ಶೋರೋಂನಲ್ಲಿ 30 ಕ್ಕೂ ಹೆಚ್ಚು ಬೈಕ್ ಗಳು ಇದ್ದವು ಎಂದು ಹೇಳಲಾಗುತ್ತಿದೆ. ಘಟನೆ ನಡೆದ ಸ್ಥಳಕ್ಕೆ ಅಗ್ನಿಶಾಮಕ ದಳದ ಸಿಬ್ಬಂದಿಗಳು ದೌಡಾಯಿಸಿ ಬೆಂಕಿ ನಂದಿಸುತ್ತಿದ್ದಾರೆ. ಬೆಂಕಿ ಕಾಣಿಸಿಕೊಳ್ಳುತ್ತಿದ್ದಂತೆ ಸಿಬ್ಬಂದಿಗಳು ಶೋರೂಂನಿಂದ ಹೊರಗಡೆ ಬಂದಿದ್ದಾರೆ.

## ಹವಾಮಾನ ಇಲಾಖೆ ಮುನ್ಸೂಚನೆ

• **ಉದಯವಾಹಿನಿ ಬೆಂಗಳೂರು**

ಫೆ.1 ರಿಂದ ರಾಜ್ಯದ ಹಲವು ಜಿಲ್ಲೆಗಳಲ್ಲಿ ಮತ್ತೆ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಫೆ.1 ರಿಂದ 2 ದಿನಗಳ ಕಾಲ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ತುಮಕೂರು, ಶಿವಮೊಗ್ಗ, ರಾಮನಗರ, ಮೈಸೂರು, ಮಂಡ್ಯ, ಕೋಲಾರ, ಹಾಸನ, ಬೆಂಗಳೂರು, ಬೆಂಗಳೂರು ಗ್ರಾಮಾಂತರ, ಗದಗ, ಧಾರವಾಡ, ಬಾಗಲಕೋಟೆ, ದಕ್ಷಿಣ ಕನ್ನಡ, ಉಡುಪಿಯಲ್ಲಿ ಮಳೆಯಾಗಲಿದೆ. ರಾಜ್ಯದಲ್ಲಿ ತೀವ್ರ ಚಳಿ ಉಂಟಾಗಿದ್ದು, ಇದರ ನಡುವೆ ಹವಾಮಾನ ಇಲಾಖೆ ಭಾರಿ ಮಳೆ ಮುನ್ಸೂಚನೆ ನೀಡಿದೆ.

## ಮೈಕ್ರೋ ಫೈನಾನ್ಸ್ ಕಿರುಕುಳ ವಿರುದ್ಧ ಕ್ರಿಮಿನಲ್ ಕೇಸ್

• **ಉದಯವಾಹಿನಿ ಬೆಂಗಳೂರು**

ಮೈಕ್ರೋ ಫೈನಾನ್ಸ್ ಕಂಪನಿಗಳ ಕಿರುಕುಳದ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸುವಂತೆ ಕಂದಾಯ ಸಚಿವ ಕೃಷ್ಣಭೈರೇಗೌಡ ಸೂಚನೆ ನೀಡಿದ್ದಾರೆ. ನಗರದ ವಿಕಾಸಸೌಧದಿಂದ ವಿಡಿಯೋ ಕಾನ್ಫರೆನ್ಸ್ ಮೂಲಕ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪೊಲೀಸ್ ಮುಖ್ಯಾಧಿಕಾರಿಗಳ ಜೊತೆ ಮಾಸಿಕ ಪ್ರಗತಿ ಪರಿಶೀಲನೆ ಸಭೆ ನಡೆಸಿದ ವೇಳೆ ಮೈಕ್ರೋ ಫೈನಾನ್ಸ್ ಕಂಪನಿಗಳ ಕಿರುಕುಳದ ಬಗ್ಗೆ ಪ್ರಮುಖವಾಗಿ ಪ್ರಸ್ತಾಪಿಸಿದರು. ರಾಜ್ಯದಲ್ಲಿ ಮೈಕ್ರೋ ಫೈನಾನ್ಸ್ ಕಂಪನಿಗಳು 59 ಸಾವಿರ ಕೋಟಿ ರೂ. ಸಾಲ ನೀಡಿವೆ. ತಮ ಸಾಮರ್ಥ್ಯವನ್ನು ವಿಸ್ತರಿಸಿಕೊಳ್ಳಲು ಸಾಮರ್ಥ್ಯ ಮೀರಿ ಸಾಲ ನೀಡಿವೆ. ಸಾಲ ನೀಡುವಾಗ ಸಾಲ ಪಡೆದವರ ಆರ್ಥಿಕ ಸಾಮರ್ಥ್ಯವನ್ನು ಕಡೆಗಣಿಸಲಾಗುತ್ತಿದೆ. ಹೀಗಾಗಿ ಮುಂದಿನ ದಿನಗಳಲ್ಲಿ ಮೈಕ್ರೋ ಫೈನಾನ್ಸ್ ಕಂಪನಿಗಳು ಕೂಡ ತಮ ವ್ಯವಹಾರವನ್ನು ನಿಲ್ಲಿಸಬೇಕಾದಂತಹ ಪರಿಸ್ಥಿತಿ ಬರಬಹುದು ಎಂದು ಆತಂಕ ವ್ಯಕ್ತಪಡಿಸಿದರು.

## ಶಿವರಾಜ್‌ಕುಮಾರ್ ನಿವಾಸಕ್ಕೆ ಭೇಟಿ ನೀಡಿ ಆರೋಗ್ಯ ವಿಚಾರಿಸಿದ ಸಿಎಂ!

• **ಉದಯವಾಹಿನಿ ಬೆಂಗಳೂರು**

ಅಮೆರಿಕದಲ್ಲಿ ಶಸ್ತ್ರಚಿಕಿತ್ಸೆಗೊಳಗಾಗಿ ಗುಣಮುಖರಾಗಿ ಬೆಂಗಳೂರಿಗೆ ಆಗಮಿಸಿದ ನಟ ಶಿವರಾಜ್ ಕುಮಾರ್ ಅವರನ್ನು ಸಿಎಂ ಸಿದ್ದರಾಮಯ್ಯ ಭೇಟಿಯಾಗಿ ಆರೋಗ್ಯ ವಿಚಾರಿಸಿದರು. ಬೆಂಗಳೂರಿನ ನಾಗವಾರದಲ್ಲಿರುವ ನಟ ಶಿವರಾಜ್ ಕುಮಾರ್ ನಿವಾಸಕ್ಕೆ ಭೇಟಿ ನೀಡಿದ ಸಿಎಂ ಸಿದ್ದರಾಮಯ್ಯ ಶಿವಣ್ಣನ ಆರೋಗ್ಯ ವಿಚಾರಿಸಿದರು. ಈ ಬಗ್ಗೆ ಸಿಎಂ ಸಿದ್ಧರಾಮಯ್ಯ ಟೀಟ್ ಮಾಡಿದ್ದು ಅನಾರೋಗ್ಯ ನಿಮಿತ್ತ ವಿದೇಶದಲ್ಲಿ ಶಸ್ತ್ರಚಿಕಿತ್ಸೆಗೆ ಪಡೆದು ಗುಣಮುಖರಾಗಿ ಬಂದಿರುವ ಚಿತ್ರರಂಗದ ಖ್ಯಾತ ನಟ, ಆತ್ಮೀಯರು ಆದ ಶಿವರಾಜ್ ಕುಮಾರ್ ಅವರನ್ನು ಭೇಟಿಯಾಗಿ, ಆರೋಗ್ಯ ವಿಚಾರಿಸಿದೆ. ಶಿವರಾಜ್ ಕುಮಾರ್ ಅವರು ಮತ್ತೆ ಹಿಂದಿನಂತೆ ಕ್ರಿಯಾಶೀಲರಾಗಿರುವುದು ಕಂಡು ಖುಷಿಯಾಯಿತು. ಅಭಿಮಾನಿಗಳ ಹರಕೆ - ಹಾರೈಕೆ, ಆತ್ಮಬಲದಿಂದ ಅನಾರೋಗ್ಯವನ್ನು ಗೆದ್ದು ಬಂದಿರುವ ಶಿವರಾಜ್ ಕುಮಾರ್ ಅವರ ಮುಂದಿನ ಜೀವನ ಸುಖ - ಶಾಂತಿಯಿಂದ ಕೂಡಿರಲಿ ಎಂದು ಹಾರೈಸುತ್ತೇನೆ ಎಂದು ಟೀಟ್ ಮಾಡಿದ್ದಾರೆ.

## ಬೆಸ್ಕಾಂ ನೂತನ ಎಂಡಿಯಾಗಿ ಡಾ. ಎನ್.ಶಿವಶಂಕರ ಅಧಿಕಾರ ಸ್ವೀಕಾರ

• **ಉದಯವಾಹಿನಿ ಬೆಂಗಳೂರು**

ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರಾಗಿ ಹಿರಿಯ ಐಎಎಸ್ ಅಧಿಕಾರಿ ಡಾ.ಎನ್. ಶಿವಶಂಕರ ಅವರು ಸೋಮವಾರ ಅಧಿಕಾರ ಸ್ವೀಕರಿಸಿದರು. ಸಿನಿಮಾ ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿಯಾಗಿದ್ದ ಡಾ.ಎನ್.ಶಿವಶಂಕರ ಅವರನ್ನು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಹುದ್ದೆಗೆ ವರ್ಗಾವಣೆ ಮಾಡಿ ರಾಜ್ಯ ಸರ್ಕಾರ ಜನವರಿ 24, 2025ರಂದು ಆದೇಶ ಹೊರಡಿಸಿತ್ತು.



ಉದಯವಾಹಿನಿ ಚಿತ್ರ

# ಫೈಟರ್ ರವಿಗೆ ಹೈಕೋರ್ಟ್ ನಿಂದ ಷರತ್ತು ಬದ್ಧ ಜಾಮೀನು!

• **ಉದಯವಾಹಿನಿ ಬೆಂಗಳೂರು**

ಉದ್ಯಮಿಯೊಬ್ಬರಿಗೆ ಹಲ್ಲೆ ಮಾಡಿ, ಗನ್ ತೋರಿಸಿ ಜೀವ ಬೆದರಿಕೆ ಹಾಕಿದ ಆರೋಪದಡಿ ಮಾಜಿ ರೌಡಿಶೀಟರ್ ಸೇರಿ ಇಬ್ಬರನ್ನು ಸದಾಶಿವನಗರ ಠಾಣೆ ಪೊಲೀಸರು ಬ್ರೆಸ್ಟ್ ಮಾಡಿದ್ದರು.

ಆದರೆ ಇದೀಗ ಹೈಕೋರ್ಟ್ ಫೈಟರ್ ರವಿಗೆ ಷರತ್ತು ಬದ್ಧ ಜಾಮೀನು ನೀಡಿದೆ. ಹೌದು ಉದ್ಯಮಿ ಒಬ್ಬರಿಗೆ ಫೈಟರ್ ಅಭಿಗನ್ ತೋರಿಸಿ ಬೆದರಿಕೆ ಹಾಕಿದ್ದ. ಈ ವಿಚಾರವಾಗಿ ಉದ್ಯಮಿ ಸೋಮಶೇಖರ್ ಎನ್ನುವವರು ಸದಾಶಿವನಗರ ಠಾಣೆಗೆ ದೂರು ನೀಡಿದ್ದರು. ಈ ಒಂದು ಊರಿನ ಅನ್ವಯ ಫೈಟರ್ ರವಿ ಹಾಗೂ ಆತನ ಗನ್ ಮ್ಯಾನ್ ಅನ್ನು ಪೊಲೀಸರು ಅರೆಸ್ಟ್ ಮಾಡಿದ್ದರು. ಬಳಿಕ ಪೊಲೀಸರು ನಾಲ್ಕು ದಿನ ತೆಗೆದುಕೊಂಡಿದ್ದು ಇಂದು ಫೈಟರ್ ರವಿ ಪೊಲೀಸ್ ಕಸ್ಟಡಿ ಅಂತ್ಯವಾಗಿದೆ. ಹಾಗಾಗಿ ಹೈಕೋರ್ಟ್ ಕೂಡ ಫೈಟರ್ ಅವರಿಗೆ ಶರತ್ತು ಬದ್ಧ ಜಾಮೀನು ನೀಡಿದೆ. ದೂರುದಾರ ಉದ್ಯಮಿ ಸೋಮಶೇಖರ್ ಅವರು ಪರಿಚಿತ ಶ್ರೀಕಾಂತ್ ಎಂಬುವವರಿಗೆ 75 ಲಕ್ಷ ರೂ. ಸಾಲ ನೀಡಿದ್ದರು. ಈ ಸಾಲ ವಾಪಾಸ್ ನೀಡುವಂತೆ ಸೋಮಶೇಖರ್ ಆಗಾಗ ಶ್ರೀಕಾಂತ್ ಗೆ ಕೇಳುತ್ತಿದ್ದರು. ಈ ವಿಚಾರವನ್ನು ಶ್ರೀಕಾಂತ್, ಫೈಟರ್ ರವಿಗೆ ತಿಳಿಸಿದ್ದರು.

ಹೀಗಾಗಿ ಗುರುವಾರ ಸಂಜೆ ಸೋಮಶೇಖರ್ ಅವರನ್ನು ಸದಾಶಿವನಗರದ ಕಚೇರಿಗೆ ಕರೆಸಿಕೊಂಡಿದ್ದ ಫೈಟರ್ ರವಿ, ಶ್ರೀಕಾಂತ್‌ಗೆ ನೀಡಿರುವ ಸಾಲವನ್ನು ವಾಪಾಸ್ ಕೇಳದಂತೆ ಧಮಕಿ ಹಾಕಿದ್ದಾರೆ. ಮಾತಿಗೆ ಮಾತು ಬೆಳೆದು ಫೈಟರ್ ರವಿ, ಉದ್ಯಮಿ ಸೋಮಶೇಖರ್ ಮೇಲೆ ಹಲ್ಲೆ ಮಾಡಿದ್ದ ಬಳಿಕ ತನ್ನ ಗನ್ ಮ್ಯಾನ್ ಬಳಿಯಿದ್ದ ಗನ್ ತೋರಿಸಿ ಜೀವ ಬೆದರಿಕೆ ಹಾಕಿದ್ದ.


ಉದಯವಾಹಿನಿ ಚಿತ್ರ

**ಜೀವ ಬೆದರಿಕೆ ಹಾಕಿದ ಆರೋಪ**

**ಈ ಸಂಬಂಧ ಸೋಮಶೇಖರ್ ಸದಾಶಿವನಗರ ಠಾಣೆಗೆ ದೂರು ನೀಡಿದ್ದರು. ಈ ದೂರಿನ ಮೇರೆಗೆ ಪ್ರಕರಣ ದಾಖಲಿಸಿ ಇಬ್ಬರು ಆರೋಪಿಗಳನ್ನು ಅರೆಸ್ಟ್ ಮಾಡಿದ್ದರು ಇದೀಗ ಹೈಕೋರ್ಟ್ ಫೈಟರ್ ರವಿಗೆ ಷರತ್ತು ಬದ್ಧ ಜಾಮೀನು ನೀಡಿದೆ.**

# ಹೊಸ ನಿಯಮ ಜಾರಿಗೆ ಒತ್ತಾಯ

• **ಉದಯವಾಹಿನಿ ಬೆಂಗಳೂರು**

ಕರ್ನಾಟಕ ರಾಜ್ಯದಲ್ಲಿ ಅದರಲ್ಲೂ ಬೆಂಗಳೂರಲ್ಲಿ ಪರಭಾಷಿಗರ ಹಾವಳಿ ಹೆಚ್ಚಿದೆ. ಈ ನೆಲದ ಭಾಷೆಗೆ ಅಗೌರವ ಕೊಡುವವರು ಹಲವರಿದ್ದಾರೆ. ಕನ್ನಡ ಕಲಿಯದ ಅಂತವರ ವಿರುದ್ಧ ಬೆಂಗಳೂರು ಕ್ಲೋಸ್' ಎಂಬ ಬೋರ್ಡ್ ವೈರಲ್ ಆಗಿತ್ತು.

ಇದರ ಬೆನ್ನಲ್ಲೆ ನಗರಕ್ಕೆ ಬದುಕು ಕಟ್ಟಿಕೊಳ್ಳಲು ಬಂದು ಕನ್ನಡ ಕಲಿಯಲು ಇಚ್ಚಿಸದವರಿಗೆ ಹೊಸ ನಿಮಯ ಜಾರಿಗೆ ತರಬೇಕು. ಬೆಂಗಳೂರಿಗೆ ಬರುವ ಕನ್ನಡೇತರರಿಗೆ ಸರ್ಕಾರ ನಿಯಮ (ಇನ್ನರ್ ಲೈನ್ ಪರ್ಮಿಟ್) ರೂಪಿಸುವಂತೆ ಆಗ್ರಹ ಕೇಳಿ ಬಂದಿದೆ. ಉತ್ತರ ಭಾರತದವರು ಸೇರಿದಂತೆ ಇತರ ಕಡೆಗಳಿಂದ ಬೆಂಗಳೂರಿಗೆ ಬಂದ ಕನ್ನಡ ಕಲಿಯದವರಿಗೆ, ಬೆಂಗಳೂರು ಕ್ಲೋಸ್ ಎಂದು ಪೋಸ್ಟ್ ಹಾಕಿದ್ದ 'ಬಬ್ರುವಾಹನ' ಎಂಬುವವರ ಖಾತೆಯಿಂದ ಸರ್ಕಾರಕ್ಕೆ ಒತ್ತಾಯಿಸಲಾಗಿದೆ. ಸಾಮಾಜಿಕ ಜಾಲತಾಣದ ಎಕ್ಸ್ ಖಾತೆಯಲ್ಲಿ ಮತ್ತೊಂದು ಪೋಸ್ಟ್ ಹಂಚಿಕೊಳ್ಳಲಾಗಿದೆ. ಉತ್ತರ ಭಾರತೀಯರು ಕನ್ನಡ ಕಲಿಯಲು ಇಚ್ಛಿಸದಿದ್ದರೆ, ಅವರಿಗೆ ಪ್ರವಾಸಿಗರಾಗಿ ಮಾತ್ರವೇ ಬೆಂಗಳೂರು ಭೇಟಿಗೆ ಸರ್ಕಾರ ಅವಕಾಶ ನೀಡಬೇಕು. ಈ ಸಂಬಂಧ ಇನ್ನರ್ ಲೈನ್ ಪರ್ಮಿಟ್ ನೀಡಬೇಕು ಎಂದು ಮನವಿ ಮಾಡಲಾಗಿದೆ. ಈ ಪೋಸ್ಟ್ ಅನ್ನು 25 ಸಾವಿರಕ್ಕೂ ಹೆಚ್ಚು ಜನರಿಗೆ ತಲುಪಿದೆ. ಹತ್ತಾರು ಕಾಮೆಂಟುಗಳು ಬಂದಿವೆ. ಹಿಂದಿನಿಂದಲೂ ಪರಭಾಷಿಗರು ಕನ್ನಡವನ್ನು ಅಷ್ಟಕಷ್ಟ ಎಂಬಂತೆ ಭಾವಿಸುತ್ತಲೇ ಬಂದಿದ್ದಾರೆ. ಇತ್ತೀಚೆಗೆ ಬಸವನಗುಡಿ ಅಂಚೆ ಕಚೇರಿಯಲ್ಲಿ ಮೂರು ಮಂದಿ ಅಧಿಕಾರಿಗಳು ವರ್ಷಗಳಿಂದ ಇಲ್ಲಿ ಕೆಲಸ ಮಾಡುತ್ತಿದ್ದಾರೆ.



ಉದಯವಾಹಿನಿ ಚಿತ್ರ

# 'ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ದೊಡ್ಡ ಆಘಾತ'

• **ಉದಯವಾಹಿನಿ ಬೆಂಗಳೂರು**

ಮೈಸೂರಿನ ಮುಡಾ ಹಗರಣದಲ್ಲಿ ಮುಖ್ಯಮಂತ್ರಿಗಳಿಗೆ ಬಹಳ ದೊಡ್ಡ ಹಿನ್ನಡೆಯಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ ಅವರು ತಿಳಿಸಿದ್ದಾರೆ. ಈ ಕುರಿತು ಬೆಂಗಳೂರಿನ ಬಿಜೆಪಿ ಕಚೇರಿಯಲ್ಲಿ ಮಾಧ್ಯಮದವರ ಜೊತೆ ಮಾತನಾಡಿದ ಬಿ ವೈ ವಿಜಯೇಂದ್ರ ಅವರು, ಬೇಗನೆ ಬಿ ರಿಪೋರ್ಟ್ ಹಾಕಿಸಿಕೊಂಡು ಪ್ರಕರಣ ಮುಚ್ಚಿಹಾಕುವ ಪ್ರಯತ್ನದಲ್ಲಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ದೊಡ್ಡ ಆಘಾತವಾಗಿದೆ. ಲೋಕಾಯುಕ್ತ ಸಂಸ್ಥೆಯ ತನಿಖೆಯನ್ನು ಮಾಧ್ಯಮಗಳೇ ತೋರಿಸಿವೆ. ರಾತ್ರಿ 8-9 ಗಂಟೆಗೆ ಸಿದ್ದರಾಮಯ್ಯನವರ ಬಾಮೈದ ನೋಟಿಸ್ ಕೊಡದೆ ಇದ್ದರೂ ಮೈಸೂರಿನ ಲೋಕಾಯುಕ್ತ ಕಚೇರಿಗೆ ಭೇಟಿ ಕೊಡುತ್ತಿದ್ದರು ಎಂದು ಆಕ್ಷೇಪಿಸಿದರು. ಮುಖ್ಯಮಂತ್ರಿ ಕುಟುಂಬಕ್ಕೆ ಎಷ್ಟು ಮುಕ್ತ ವ್ಯವಸ್ಥೆ ಇತ್ತೆಂದು ಅವತ್ತು ಕೂಡ ಬಹಿರಂಗವಾಗಿದೆ. ಮೈಸೂರಿನ ಮುಡಾ ಹಗರಣದ ವಿಷಯದಲ್ಲಿ ಬಿಜೆಪಿ-ಜೆಡಿಎಸ್ ಪಕ್ಷ ಒಟ್ಟಾಗಿ ಪಾದಯಾತ್ರೆ ಮಾಡಿದವು. ನಮ್ಮ ಹೋರಾಟದ ಪರಿಣಾಮವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಧರ್ಮಪತ್ನಿಯವರು 14 ನಿವೇಶನ ಹಿಂತಿರುಗಿಸುತ್ತೇವೆ ಎಂದು ರಾತ್ರೋರಾತ್ರಿ ಮೂಡಕ್ಕೆ ಪತ್ರ ಬರೆದಿದ್ದರು. ಆ ಪತ್ರದ ಮೂಲಕ ಮೂಲಕ ಹಗರಣದಿಂದ ಹೊರಕ್ಕೆ ಬಂದ ಭ್ರಮೆಯಲ್ಲಿ ಮುಖ್ಯಮಂತ್ರಿಗಳೂ ಇದ್ದರು. ಇವತ್ತಿನ ಇ.ಡಿ. ನೋಟಿಸ್. ಇದರಿಂದ ಆಘಾತ ಆಗಿರುವುದರಲ್ಲಿ ಎರಡು ಮಾತಿಲ್ಲ ಎಂದು ನುಡಿದರು. ಇ.ಡಿಗೆ ಅವರದೇ ಆದ ನಿಯಮಗಳಿರುತ್ತವೆ. ಅದರ ಪ್ರಕಾರ ಅವರು ಮುಂದುವರೆಯುತ್ತಾರೆ.


ಉದಯವಾಹಿನಿ ಚಿತ್ರ

**ಇ.ಡಿ. ನೋಟಿಸ್ ರಾಜಕೀಯಪ್ರೇರಿತ ಎಂಬುದಕ್ಕಿಂತ ಹೆಚ್ಚಾಗಿ ಕಾಂಗ್ರೆಸ್ ಆಡಳಿತಾವಧಿಯಲ್ಲಿ ಸಾವಿರಾರು ಕೋಟಿ ಬಡವರ ಪಾಲಾಗಬೇಕಾದ ನಿವೇಶನಗಳ ಅಕ್ರಮ ಹಂಚಿಕೆ ನಡೆದಿತ್ತು. ಈ ದೊಡ್ಡ ಹಗರಣದ ಪರಿಣಾಮವನ್ನು ಮುಂದಿನ ದಿನಗಳಲ್ಲಿ ಎದುರಿಸಬೇಕಾಗುತ್ತದೆ ಎಂದು ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು.**

# ಪರೀಕ್ಷೆ ಜ. 31, ಫೆ. 2ರಂದು ಹೆಚ್ಚುವರಿ ಬಸ್ ಸೌಲಭ್ಯಕ್ಕೆ ಆಗ್ರಹ

• **ಉದಯವಾಹಿನಿ ಬೆಂಗಳೂರು**

ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಜನವರಿ 31 ಮತ್ತು ಫೆಬ್ರವರಿ 2ರಂದು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸುತ್ತಿದೆ. ಈ ಪರೀಕ್ಷೆಗಳಿಗೆ ಹಾಜರಾಗಲು ಅಭ್ಯರ್ಥಿಗಳು ಪರೀಕ್ಷೆ ಕೇಂದ್ರಕ್ಕೆ ತೆರಳಬೇಕು. ಬೇರೆ ಬೇರೆ ಜಿಲ್ಲೆಗಳಲ್ಲಿ ಪರೀಕ್ಷಾ ಕೇಂದ್ರಗಳು ಇರುವ ಕಾರಣ ಅಭ್ಯರ್ಥಿಗಳ ಅನುಕೂಲಕ್ಕಾಗಿ ಹೆಚ್ಚುವರಿ ಬಸ್ ಸೌಲಭ್ಯ ಕಲ್ಪಿಸಬೇಕು ಎಂದು ಆಗ್ರಹಿಸಲಾಗಿದೆ. ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳ ಸಮಯದಲ್ಲಿ ಸರ್ಕಾರದ ಸೂಚನೆಯಂತೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (ಕೆಎಸ್‌ಆರ್‌ಟಿಸಿ) ಹೆಚ್ಚುವರಿ ಬಸ್ ವ್ಯವಸ್ಥೆ ಮಾಡುತ್ತದೆ. ಈ ಬಾರಿಯೂ ಬಸ್ ವ್ಯವಸ್ಥೆ ಮಾಡಬೇಕು ಎಂದು ಸಾಮಾಜಿಕ ಜಾಲತಾಣದಲ್ಲಿ ಸರ್ಕಾರವನ್ನು ಒತ್ತಾಯಿಸಲಾಗುತ್ತದೆ. ಜನವರಿ 31ರ ಶುಕ್ರವಾರ ಮತ್ತು ಫೆಬ್ರವರಿ 2ರ ಭಾನುವಾರ ಕೆಪಿಎಸ್‌ಸಿ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಲಾಗುತ್ತಿದ್ದು, ಈ ಪರೀಕ್ಷೆ ಬರೆಯುವ ಅಭ್ಯರ್ಥಿಗಳ ಅನುಕೂಲಕ್ಕಾಗಿ ಹೆಚ್ಚುವರಿ ಬಸ್ ಸೌಲಭ್ಯ ಒದಗಿಸಬೇಕು ಎಂದು ಸಾಮಾಜಿಕ ಜಾಲತಾಣದ ಮೂಲಕ ಮನವಿ ಮಾಡಲಾಗಿದೆ.



**ಯಾವ-ಯಾವ ಪರೀಕ್ಷೆಗಳು**

**ರಮಣ್ ದೀಪ್ ಚೌಧರಿ, ಕಾರ್ಯದರ್ಶಿ, ಕರ್ನಾಟಕ ಲೋಕ ಸೇವಾ ಆಯೋಗ ಇವರ ಮಾಹಿತಿಯಂತೆ ಆಯೋಗದ ಅಧಿಸೂಚನೆ ದಿ.13-03-2024 ಮತ್ತು ತಿದ್ದುಪಡಿ ಅಧಿಸೂಚನೆ ದಿನಾಂಕ 20-09-2024ರನ್ವಯ ಉಳಿಕೆ ಮೂಲ ವೃಂದದಲ್ಲಿ ಅಧಿಸೂಚಿಸಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಯಲ್ಲಿನ ಸಹಾಯಕ ಇಂಜಿನಿಯರ್ (ಸಿವಿಲ್) (ವಿಭಾಗ-1) ಹುದ್ದೆಗಳಿಗೆ ದಿ.31.01.2025 ರಂದು ಪತ್ರಿಕೆ-2 ನಿರ್ದಿಷ್ಟ ಪತ್ರಿಕೆ ಪರೀಕ್ಷೆಗಳು ನಡೆಯಲಿದೆ.**

**ಜೀವ ಬೆದರಿಕೆ ಹಾಕಿದ ಆರೋಪ**

# ಶಾಲಾ ಶಿಕ್ಷಕರ ಮುಂಬಡ್ತಿ ಕುರಿತು ಸರ್ಕಾರದಿಂದ ಮಹತ್ವ

• **ಉದಯವಾಹಿನಿ ಬೆಂಗಳೂರು**

ನೇರ ನೇಮಕಾತಿ ಮತ್ತು ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಪ್ರೌಢಶಾಲಾ ಸಹ ಶಿಕ್ಷಕರ ಹುದ್ದೆಗೆ ಮುಂಬಡ್ತಿ ನೀಡುವ ಸಮಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಹಿಂಬಾಕಿ (ಬ್ಯಾಕ್ ಲಾಗ್)ಹುದ್ದೆಗಳನ್ನು ಗುರುತಿಸುವ ಬಗ್ಗೆ ಸರ್ಕಾರ ಆದೇಶ ಹೊರಡಿಸಿದೆ. ಏನಿದೆ ಆದೇಶದಲ್ಲಿ... ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(01) ರ ಪತ್ರದಲ್ಲಿ ಬ್ಯಾಕ್ ಲಾಗ್ ಸಚಿವ ಸಂಪುಟ ಉಪ ಸಮಿತಿ ಸಭೆಯ ನಿರ್ಣಯದಂತೆ, ಸರ್ಕಾರದ ವಿವಿಧ ಇಲಾಖೆಗಳು/ನಿಯಮಗಳು/ಮಂಡಳಿಗಳು /ವಿಶ್ವವಿದ್ಯಾನಿಯಗಳು/ ಸಹಕಾರ ಸಂಸ್ಥೆಗಳು/ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ಭೇಟಿ ನೀಡಿ ನೇರ ನೇಮಕಾತಿ, ಮುಂಬಡ್ತಿಯಲ್ಲಿ ಬ್ಯಾಕ್ ಲಾಗ್ ಹುದ್ದೆಗಳನ್ನು ಗುರುತಿಸಲು ತನಿಖಾ ತಂಡವನ್ನು ರಚಿಸಿರುತ್ತಾರೆ. ಶಾಲಾ ಶಿಕ್ಷಣ ಇಲಾಖೆ ಸೇರಿದಂತೆ, ಇತರೆ ಇಲಾಖೆಗಳಿಗೆ ಸಂಬಂಧಿಸಿದಂತೆ ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಿರುವ ಮೀಸಲಾತಿ ನಿಯಮಗಳನ್ವಯ ನೇರ ನೇಮಕಾತಿ ಮತ್ತು ಮುಂಬಡ್ತಿಯನ್ನು ಅನುಷ್ಠಾನಗೊಳಿಸಿರುವ ಹಾಗೂ ಬ್ಯಾಕ್ಯಾಗ್ ಹುದ್ದೆಗಳನ್ನು ಪರಿಶೀಲಿಸಲು ಸದರಿ ಆಯೋಗದ ತಂಡವನ್ನು ನೇಮಿಸಿರುತ್ತಾರೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಉಲ್ಲೇಖ(2) ರಲ್ಲಿ ನಡೆದ ಸಭೆಯಲ್ಲಿ ಈ ಕುರಿತು ಚರ್ಚಿಸಿ ನಮೂನೆ-01 02 ರಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಮಾಹಿತಿಯನ್ನು ಒದಗಿಸಲು ತಿಳಿಸಿರುತ್ತಾರೆ. ಇಲಾಖೆಯಲ್ಲಿ 1978 ರಿಂದ 2003 ರ ವರೆಗೆ ಪ್ರೌಢಶಾಲಾ ಶಿಕ್ಷಕರ ನೇಮಕಾತಿ ಪ್ರಾಧಿಕಾರಿಯು ರಾಜ್ಯದ 04 ವಿಭಾಗೀಯ ಕಛೇರಿಗಳ ಸಹನಿರ್ದೇಶಕರಾಗಿದ್ದು, 2003ನೇ ಸಾಲಿನಿಂದ ನೇಮಕಾತಿ ಪ್ರಾಧಿಕಾರಿಗಳು ರಾಜ್ಯದ 35 ಶೈಕ್ಷಣಿಕ ಜಿಲ್ಲೆಗಳ ಉಪನಿರ್ದೇಶಕರು ಆಗಿರುತ್ತಾರೆ. ಶಾಲೆಯಿಂದ ಪ್ರೌಢಶಾಲೆಗೆ ಬಡ್ತಿ ನೀಡುವ ಸಕ್ಷಮ ಪ್ರಾಧಿಕಾರಿಯು 35 ಶೈಕ್ಷಣಿಕ ಜಿಲ್ಲೆಗಳ ಉಪನಿರ್ದೇಶಕರಾಗಿರುವ ವಿಷಯವನ್ನು ಮಾನ್ಯ ಆಯೋಗದ ಗಮನಕ್ಕೆ ತರಲಾಗಿದೆ.



**ಮಾನ್ಯ ಆಯೋಗವು ನಮೂನೆ-01 02 ಮಾಹಿತಿ/ದಾಖಲೆಗಳೊಂದಿಗೆ ಖುದ್ದು ಹಾಜರಾಗಿ ಆಯೋಗವು ಅಪೇಕ್ಷಿಸಿರುವ ಮಾಹಿತಿಯನ್ನು ಒದಗಿಸಲು ಸಂಬಂಧಪಟ್ಟ ನೇಮಕಾತಿ/ಬಡ್ತಿ ನೀಡುವ ಕಛೇರಿಯ ಜವಾಬ್ದಾರಿಯುತ ಅಧಿಕಾರಿಗಳನ್ನು ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ ಬೆಂಗಳೂರು, ಇಲ್ಲಿಗೆ ನಿಯೋಜಿಸಲು ಸೂಚಿಸಿರುತ್ತಾರೆ.**

# ಕೆ.ಆರ್.ಪುರಂ- ನಾಯಂಡಹಳ್ಳಿ ರಸ್ತೆ ಯೋಜನೆಗೆ ಟೆಂಡರ್

## ಸುರಂಗ ರಸ್ತೆ ಯೋಜನೆ ಕೇವಲ 1 ಕಾರಿಡಾರ್ ನಿರ್ಮಾಣಕ್ಕೆ ಬಿಬಿಎಂಪಿಯ 15,000 ಕೋಟಿ ರೂಪಾಯಿ.ತಗುಲಬಹುದೆಂದು ಅಂದಾಜು

• **ಉದಯವಾಹಿನಿ ಬೆಂಗಳೂರು**

ಬೆಂಗಳೂರಿನ ಸಂಚಾರ ದಟ್ಟಣೆಗೆ ಕಡಿವಾಣ ಹಾಕಲು ಸರ್ಕಾರ ಅನೇಕ ಯೋಜನೆ ಕೈಗೊಂಡಿದೆ. ಇದೀಗ ಹೊಸ ಸುರಂಗ ಮಾರ್ಗ ಯೋಜನೆಗೆ ಕೈ ಹಾಕಿದೆ. ಕೆ.ಆರ್.ಪುರಂ - ನಾಯಂಡಹಳ್ಳಿವರೆಗೆ ಬೃಹತ್ ಸುರಂಗ ರಸ್ತೆ ನಿರ್ಮಾಣಕ್ಕೆ ಟೆಂಡರ್ ಆಹ್ವಾನಿಸಿದೆ ಎಂದು ತಿಳಿದು ಬಂದಿದೆ. ಇದಕ್ಕು ಮೊದಲು ಹೆಬ್ಬಾಳ-ಸಿಲ್ಕ್ ಬೋರ್ಡ್ ಜಂಕ್ಷನ್ ವರೆಗೆ ಸುರಂಗ ಕಾರ್ಯಕ್ಕೆ ಕೈ ಹಾಕಿತ್ತು. ಈ ಯೋಜನೆಗೆ ವ್ಯಾಪಕ ವಿರೋಧ ಕೇಳಿ ಬಂದವು. ಇದೀಗ ಮತ್ತೊಂದು ಸುರಂಗ ಯೋಜನೆಗೆ ಮುಂದಾಗಿದೆ.

ಕರ್ನಾಟಕ ರಾಜ್ಯ ಸರ್ಕಾರದ ಕೆ.ಆರ್.ಪುರಂ ಮತ್ತು ನಾಯಂಡಹಳ್ಳಿವರೆಗೆ ಸುರಂಗ ರಸ್ತೆ ಮಾರ್ಗ ನಿರ್ಮಿಸಲು ಮುಂದಾಗಿದೆ ಎಂದಿರುವ ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಅವರು ಖಂಡಿಸಿದ್ದಾರೆ. ಹೆಬ್ಬಾಳ-ಸಿಲ್ಕ್ ಬೋರ್ಡ್ ಸುರಂಗ ರಸ್ತೆಯ ಕಳಪೆ ಡಿಪಿಆರ್ ಮತ್ತು ಕಾರ್ಯಸಾಧ್ಯತಾ ವರದಿಗೆ ಸಾಕಷ್ಟು ಟೀಕೆಗಳು ಕೇಳಿ ಬಂದಿವೆ. ಹೀಗಿದ್ದರೂ ಸರ್ಕಾರ ವಿಚಲಿತವಾಗದೇ ಇದೀಗ ಕೆಆರ್ ಪುರ- ನಾಯಂಡಹಳ್ಳಿಗೆ ಡಿಪಿಆರ್ ತಯಾರಿಸಲು ಸಲಹೆಗಾರರಿಗೆ ಟೆಂಡರ್ ಕರೆದಿದೆ ಎಂದು ತಿಳಿಸಿದರು. ನಗರದಲ್ಲಿ ಸುರಂಗ ರಸ್ತೆ ಯೋಜನೆಯು ಒಂದು ಕೆಟ್ಟ ನಿರ್ಧಾರ. ಇದು ವಿನ್ಯಾಸದಲ್ಲಿ ಸರಿಯಾಗಿಲ್ಲ. ಸರಿಯಾಗಿ ಯೋಚಿಸದೇ ಈ ನಿರ್ಧಾರಕ್ಕೆ ಬರಲಾಗಿದೆ. ಬೆಂಗಳೂರಿನ ಸಂಚಾರ ಬಿಕ್ಕಟ್ಟನ್ನು ಪರಿಹರಿಸುವ ಉದ್ದೇಶದಿಂದ ಈ ಯೋಜನೆಗೆ ಕೈ ಹಾಕಿದರೂ ಸಹಿತ ಈ ಕಾರ್ಯಸಾಧುವಲ್ಲ ಎಂದು ಅವರು ಆಕ್ಷೇಪಿಸಿದ್ದಾರೆ.

ಮೊದಲ ಆಕಖ, ವ್ಯರ್ಥ ವೆಚ್ಚಗಳಿಂದ ಹಿಡಿದು ಮೂಲಭೂತ ದೋಷಗಳು, ಯೋಜನೆಯಲ್ಲಿನ ತಪ್ಪುಗಳು ಹಾಗೂ ಇನ್ನಿತರ ಕಾರಣಗಳಿಂದ ಯೋಜನೆಯನ್ನು ಒಮ್ಮೆಗೇ ರದ್ದುಗೊಳಿಸುವ ಮಾತುಗಳು ಕೇಳಿ ಬಂದಿವೆ. ಯೋಜನೆಗಳಿಗೆ ಸಾಕಷ್ಟು ಹಣ ಖರ್ಚು ಮಾಡುವ ಸರ್ಕಾರ ಇಂತಹ ನಿರ್ಧಾರಗಳಿಗೆ ಹೇಗೆ ಬರುತ್ತದೆ ಎಂದು ಅವರು ಪ್ರಶ್ನಿಸಿದ್ದಾರೆ. ಕೆಲವು ಯೋಜನೆಗಳಿಗೆ ಹಣ ಖರ್ಚು ಮಾಡಿ ನಂತರ ದಿಢೀರ್ ರದ್ದುಗೊಳಿಸಿದ್ದನ್ನು ನಾವು ನೋಡಿದ್ದೇವೆ. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (ಬಿಎಂಟಿಸಿ) ಬಸ್ ಫ್ಲೀಟ್ ಅನ್ನು 15,000 ಬಸ್‌ಗಳಿಗೆ ವಿಸ್ತರಣೆ ಮಾಡುವುದು. ನಗರದಲ್ಲಿ ಸಾರ್ವಜನಿಕ ಸಾರಿಗೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡುವ ಬೆಂಗಳೂರಿನ ಮಾಸ್ಟರ್ ಪ್ಲಾನ್ 2031ರ ಡಿಪಿಆರ್ ಅನ್ನು ಸರ್ಕಾರ ನಿರ್ಲಕ್ಷಿಸಿತ್ತು. ಇಂತಹದೆ ತಪ್ಪುಗಳು, ನಿರ್ಲಕ್ಷ್ಯಗಳಿಂದಲೇ ನಮ್ಮ ಮೆಟ್ರೋ ಹಂತಗಳು 2ಬಿ ಮತ್ತು 3ಎ ಕಾಮಗಾರಿಯಲ್ಲಿ ನಿರ್ಣಾಯಕವಾಗಿರುವ ಸುರಂಗ ರಸ್ತೆ ಜೋಡಿಸುವಲ್ಲಿ ಸರ್ಕಾರ ವಿಫಲವಾಗಿದೆ. ಈಗಾಗಲೇ ಮೆಟ್ರೋ ಸುರಂಗ ಯೋಜನೆಗಳು 61 ತಿಂಗಳ ಗಡುವು ಮೀರಿವೆ. ಕಾಲಮಿತಿಯಲ್ಲಿ ನಿರ್ಮಾಣ ಆಗದ ಹಿನ್ನೆಲೆಯಲ್ಲಿ ಕಾಮಗಾರಿಗೆಂದು ಅಗೆದ ರಸ್ತೆಗಳು ಇಕ್ಕಟ್ಟಾಗಿವೆ. ಸುಗಮ ಸಂಚಾರಕ್ಕೆ ಸಾಕಷ್ಟು ಅಡಚಣೆಗಳು ಆಗುತ್ತಿದೆ ಎಂದು ಸರ್ಕಾರದ ಆಡಳಿತ ವೈಖರಿ ವಿವರಿಸಿದರು.


ಉದಯವಾಹಿನಿ ಚಿತ್ರ

**ಸುರಂಗ ರಸ್ತೆ ಯೋಜನೆ ಕೇವಲ 1 ಕಾರಿಡಾರ್ ನಿರ್ಮಾಣಕ್ಕೆ ಬಿಬಿಎಂಪಿಯ 15,000 ಕೋಟಿ ರೂಪಾಯಿ ತಗುಲಬಹುದೆಂದು ಅಂದಾಜು ಮಾಡಿದೆ. ಇದರಲ್ಲಿ ಶೇಕಡಾ 25ರಷ್ಟು ವಾಹನಗಳಿಗೆ ಮಾತ್ರವೇ ಆಗುವಂತೆ ಕಾರಿಡಾರ್ ನಿರ್ಮಿಸಲು ಸಜ್ಜಾಗಿದೆ. ಇಲ್ಲಿ ಸಂಚರಿಸುವ ನಾಲ್ಕು ಚಕ್ರದ ವಾಹನಗಳಿಗೆ ಟೋಲ್ ಶುಲ್ಕ ವಿಧಿಸುವ ಚಿಂತನೆ ಇದೆ. ಯೋಜನೆಯಲ್ಲಿ ಇಂಟರ್‌ಮೋಡಲ್ ಹಬ್ ಗಳಲ್ಲಿ ಶಾಪಿಂಗ್ ಮಾಲ್, ವ್ಯಾಪಾರಕ್ಕೆ ಅವಕಾಶ ನೀಡುವ ಪ್ರಸ್ತಾವನೆ ಇದೆ.**

**ನಗರದಲ್ಲಿ ಚಾಲ್ತಿಯಲ್ಲಿರುವ ನಮ್ಮ ಮೆಟ್ರೋ ಯೋಜನೆಗಳು ನಗರದ ಸಂಚಾರ ದಟ್ಟಣೆ ಕಡಿಮೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಆದರೆ ಸರ್ಕಾರದ ಉದ್ದೇಶಿತ ಈ ಸುರಂಗ ರಸ್ತೆಗಳು ವಾಹನ ಸಂಚಾರಕ್ಕೆ ಅಪಾಯ ತಂಡದೊಡ್ಡುವ ಸಾಧ್ಯತೆ ಇದೆ. ದೀರ್ಘಾವಧಿಯಲ್ಲಿ ದಟ್ಟಣೆ ಕಡಿಮೆ ಮಾಡುವುದು ಅನುಮಾನ. ಹೆಬ್ಬಾಳ ಸುರಂಗ ಯೋಜನೆ ಬಗ್ಗೆ ಪ್ರೊಫೆಸರ್ ಆಶಿಶ್ ವರ್ಮಾ ಅವರ ವಿಶ್ಲೇಷಣಾ ವರದಿ ತಿಳಿಸಿದೆ ಎಂದರು.**

# ಭೂ ಕಬಳಿಕೆ ಆರೋಪ: ರೋಲ್‌ಕಾಲ್ ಗಿರಾಕಿಗಳಿಂದ ಅಪಪ್ರಚಾರ


## ನನ್ನ ವಿರುದ್ಧ ಕೇಳಿ ಬಂದಿರುವ ಭೂ ಕಬಳಿಕೆ ಆರೋಪದ ಕುರಿತು, ಸತ್ಯಾಂಶ ಅರಿಯದೆ ಮಾಧ್ಯಮಗಳಲ್ಲಿ ಸುದ್ದಿ ಪ್ರಕಟ

• ಉದಯವಾಹಿನಿ ರಾಮನಗರ

'ಕನಕಪುರ ತಾಲ್ಲೂಕಿನಲ್ಲಿ ನನ್ನ ವಿರುದ್ಧ ಕೇಳಿ ಬಂದಿರುವ ಭೂ ಕಬಳಿಕೆ ಆರೋಪದ ಕುರಿತು, ಸತ್ಯಾಂಶ ಅರಿಯದೆ ಮಾಧ್ಯಮಗಳಲ್ಲಿ ಸುದ್ದಿ ಪ್ರಕಟವಾಗಿದೆ. ಇದರಿಂದ ನನಗೆ ನೋವಾಗಿದೆ. ಇದೇ ವಿಷಯವಾಗಿ ಕೆಲ ರೋಲ್ ಕಾಲ್ ಗಿರಾಕಿಗಳು ನನ್ನ ಬಳಿ ದುಡ್ಡಿಗಾಗಿ ಬಂದಿದ್ದರು. ಏನು ಗಿಟ್ಟದಿದ್ದಾಗ ಆ ಕಿಡಿಗೇಡಿಗಳು ನನ್ನ ವಿರುದ್ಧ ಅಪಪ್ರಚಾರ ಮಾಡುತ್ತಿದ್ದಾರೆ' ಎಂದು ಶಾಸಕ ಎಚ್.ಎ. ಇಕ್ಬಾಲ್ ಹುಸೇನ್ ಕಿಡಿಕಾರಿದರು. ತಮ್ಮ ವಿರುದ್ಧ ಕೇಳಿ ಬಂದಿರುವ ಭೂ ಕಬಳಿಕೆ ಆರೋಪದ ಕುರಿತು, ನಗರದಲ್ಲಿ ಸುದ್ದಿಗಾರರ ಪ್ರಶ್ನೆಗೆ ಅವರು ಪ್ರತಿಕ್ರಿಯಿಸಿದರು. 'ಅಚ್ಚಲು ಗ್ರಾಮದ ನವಾಬ್ ಜಾನ್ ಎಂಬ ಸಾಹುಕಾರರು 500 ಎಕರೆ ಜಮೀನು ಹೊಂದಿದ್ದರು.

ಅದರಲ್ಲಿ ಈಗಿರುವ ಹೊಂಗಾಣಿದೊಡ್ಡಿ ಗ್ರಾಮವೂ ಇದ್ದು, ಅಂದು ರೈತರು ಉಳುಮೆ ಮಾಡುತ್ತಿದ್ದರು. ಭೂ ಸುಧಾರಣಾ ಕಾಯ್ದೆ ಬಂದಾಗ ಅಲ್ಲಿದ್ದ ಗೇಣಿದಾರರಿಗೆ 1987ರಲ್ಲಿ ಭೂ ನ್ಯಾಯಮಂಡಳಿಯಲ್ಲಿ ಜಮೀನು ಹಂಚಿಕೆಗೆ ಆದೇಶವಾಗಿದೆ. ಆಗಿನ್ನೂ ನಾನು ವಿದ್ಯಾರ್ಥಿಯಾಗಿದ್ದೆ. ಆಗ ನಿಯಮಾನುಸಾರವಾಗಿಯೇ ಮಂಜೂರು ಮಾಡುತ್ತಾರೆ' ಎಂದರು.

'ಆದರೆ, ರೈತರು ಆದೇಶದಲ್ಲಿರುವ ಕುಂಟೆ ಲೆಕ್ಕದ ಜಮೀನು ಬದಲು ತಾವು ಸ್ವಾಧೀನಾನುಭವದಲ್ಲಿರುವ ಜಮೀನನ್ನು ಕೊಡಬೇಕು ಎಂದು ಕೋರ್ಟ್ ಮೆಟ್ಟಿಲೇರುತ್ತಾರೆ. ಕೋರ್ಟ್


ಉದಯವಾಹಿನಿ ಚಿತ್ರ

ಸಹ ಭೂ ನ್ಯಾಯಮಂಡಳಿಯಲ್ಲಿ ಆದೇಶವಾಗಿರುವಷ್ಟು ಮಾತ್ರ ಹಂಚಿಕೆಯಾಗುತ್ತದೆ ಎಂದು ಹೇಳುತ್ತದೆ. ವರ್ಷಗಳವರೆಗೆ ನಡೆದ ಹಗ್ಗಜಗ್ಗಾಟದ ಮಧ್ಯೆ ಜಮೀನು ಮಾಲೀಕರು ಹಾಗೂ ಅರ್ಜಿದಾರರು ಸಹ ತೀರಿಕೊಳ್ಳುತ್ತಾರೆ' ಎಂದರು.

'ನಂತರ ಮಾಲೀಕರ ಮಕ್ಕಳು ಹಾಗೂ ಅರ್ಜಿದಾರರ ಮಕ್ಕಳು ಮತ್ತೆ ಕೋರ್ಟ್ ಮೆಟ್ಟಿಲೇರುತ್ತಾರೆ. ಇದೇ ವಿಷಯಕ್ಕೆ ಹಲವು ವ್ಯಾಜ್ಯಗಳು ಏರ್ಪಟ್ಟು, ಗೊಂದಲಗಳು ಸೃಷ್ಟಿಯಾಗುತ್ತವೆ.

> ಇವರು ಹೇಳುವಂತೆ ಮೂರ್ನಾಲ್ಕು ಎಕರೆ ಕೊಡಿ ಎಂದರೆ ಯಾರು ಕೊಡುತ್ತಾರೆ ಕಾನೂನಾತ್ಮಕವಾಗಿ ಎಷ್ಟು ತೀರ್ಮಾನವಾಗಿದೆಯೊ ಅಷ್ಟನ್ನು ಮಾತ್ರ ಕೊಡಬಹುದು ಅಷ್ಟೇ' ಎಂದು ಶಾಸಕ ಹುಸೇನ್ ಖಾರವಾಗಿ ಪ್ರತಿಕ್ರಿಯಿಸಿದರು.

ಆಗ ಅಲ್ಲಿನ ಸ್ಥಳೀಯ ಮುಸ್ಲಿಮರು ಸಮಸ್ಯೆ ಬಗೆಹರಿಸುವಂತೆ ಸಮುದಾಯದ ನಾಯಕನಾದ ನನ್ನಲ್ಲಿ ಬಂದು ಕೇಳಿಕೊಳ್ಳುತ್ತಾರೆ. ರೈತರನ್ನು ಈ ಕುರಿತು ಕೇಳಿದಾಗ, ಅವರು ಸಹ ಈ ಸಮಸ್ಯೆಯಿಂದಾಗಿ ನಮಗೆ ಖಾತೆ-ಕಂದಾಯ ಆಗುತ್ತಿಲ್ಲ. ನೀವು ಹೇಳಿದಂತೆ ನಾವು ಕೇಳುತ್ತೇವೆ ಎಂದಿದ್ದರು' ಎಂದು ತಿಳಿಸಿದರು

'ಕಡೆಗೆ ಎಲ್ಲಾರನ್ನೂ ಕೂರಿಸಿ ಹಿಂದೆ 10 ಗುಂಟೆ ಮಂಜೂರಾಗಿದ್ದವರಿಗೆ ಇನ್ನೂ ಸ್ವಲ್ಪ ಜಮೀನು ಸೇರಿಸಿ ಎಲ್ಲಾರನ್ನೂ ಕಾನೂನು ಪ್ರಕಾರವಾಗಿ ಸಮಾಧಾನಪಡಿಸಿ ಭೂಮಿ ಹಕ್ಕು ಕೊಡಿಸಲು ಯತ್ನಿಸಿದ್ದೇನೆ. ಇದಕ್ಕೆ 19 ಗೇಣಿದಾರರು ಒಪ್ಪಿಗೆ ಕೊಟ್ಟಿದ್ದು, ನಾಲ್ವರು ಮಾತ್ರ ಕೊಟ್ಟಿರಲಿಲ್ಲ. ಮುಂದೆ ಅವರೂ ಬರುತ್ತಾರೆ. ಅವರು ಯಾವುದೋ ಸಂಘ-ಸಂಸ್ಥೆಗಳ ರೋಲ್‌ಕಾಲ್ ಗಿರಾಕಿಗಳನ್ನು ಕಟ್ಟಿಕೊಂಡು, ನಮಗೆ ಇನ್ನೂ ಹೆಚ್ಚು ಜಮೀನು ಬರಬೇಕು ಎಂದು ಅಪಪ್ರಚಾರ ಮಾಡುತ್ತಿದ್ದಾರೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು. 'ಖರೀದಿಸಿರುವ ಭೂಮಿಯನ್ನು ನನ್ನ ಹೆಸರಿಗೆ ನೋಂದಣಿ ಮಾಡಿಸಿ, ಗೇಣಿದಾರರಿಗೆ ನ್ಯಾಯಯುತವಾಗಿ

> ಈಗಾಗಲೇ ವಿತರಿಸಿರುವ ಹಕ್ಕುಪತ್ರದಲ್ಲಿ ದಾಖಲಿಸಿರುವ ಜಮೀನಿನ ವಿಸ್ತೀರ್ಣಕ್ಕೂ ಗೇಣಿದಾರರು ಸ್ವಾಧೀನಾನುಭವದಲ್ಲಿರುವ ಜಮೀನಿಗೂ ವ್ಯತ್ಯಾಸವಿದೆ ಎಂದು ರೈತರು ಹೇಳುತ್ತಿದ್ದಾರಲ್ಲ' ಎಂಬ ಸುದ್ದಿಗಾರರ ಪ್ರಶ್ನೆಗೆ ಖಾರವಾಗಿ ಪ್ರತಿಕ್ರಿಯಿಸಿದ ಹುಸೇನ್ '1987ರಲ್ಲಿ ಭೂ ನ್ಯಾಯಮಂಡಳಿಯಲ್ಲಿ ಎಷ್ಟು ಭೂಮಿ ಹಂಚಿಕೆಯಾಗಿದೆಯೊ ಅಷ್ಟು ಮಾತ್ರ ಕೊಡಲು ಸಾಧ್ಯ. ಅವರು ಸ್ವಾಧೀನದಲ್ಲಿದ್ದಾರೆಂದು ಎಲ್ಲಾವನ್ನೂ ಕೊಡಲು ಸಾಧ್ಯವಿಲ್ಲ. ಇಷ್ಟಕ್ಕೂ ಅದೇನೂ ಗೋಮಾಳ ಅಥವಾ ಸರ್ಕಾರಿ ಜಮೀನಲ್ಲ. ಬದಲಿಗೆ ಖಾಸಗಿ ಜಮೀನು. ಮೂಲ ಮಾಲೀಕರ ವಂಶಸ್ಥರಿದ್ದು ಅವರಿಗೂ ಮಕ್ಕಳಿದ್ದಾರೆ.

ಸಿಗಬೇಕಾದ ಜಮೀನನನ್ನು ದಾನ ಮಾಡುವೆ. ನಂತರ ಅವರಿಗೆ ಹಕ್ಕುಪತ್ರ ಮಾಡಿಕೊಡುವಂತೆ ಉಪ ವಿಭಾಗಾಧಿಕಾರಿ, ತಹಶೀಲ್ದಾರ್, ತಾಲ್ಲೂಕು ಪಂಚಾಯಿತಿ ಇಒ ಸೇರಿದಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಈಗಾಗಲೇ ಸೂಚಿಸಿದ್ದೇನೆ. ಗೇಣಿದಾರರಿಗೆ 1987ರಿಂದಲೂ ಸಿಗದ ಹಕ್ಕುಪತ್ರವನ್ನು ನಾನು ಕಾಳಜಿ ವಹಿಸಿ ಕೊಡಿಸಿ, ಅವರಿಗೆ ಶಾಶ್ವತ ನೆಲೆ ಕಲ್ಪಿಸುವ ಕೆಲಸ ಮಾಡುತ್ತಿದ್ದೇನೆ. ಇದರಲ್ಲಿ ಯಾವುದೇ ಮೋಸ ಆಗಿಲ್ಲ' ಎಂದು ತಿಳಿಸಿದರು.

# ಮುಡಾ ತನಿಖೆ ತಪ್ಪಿಸಲು ಸಿದ್ದರಾಮಯ್ಯ ಪ್ರಯತ್ನ: ಜೋಶಿ

• ಉದಯವಾಹಿನಿ ಮೈಸೂರು

ಮುಡಾ ಹಗರಣದಲ್ಲಿ ಏನಾದರೂ ಮಾಡಿ ತನಿಖೆಯಿಂದ ತಪ್ಪಿಸಿಕೊಳ್ಳಲು ಸಿಎಂ ಸಿದ್ದರಾಮಯ್ಯ ಪ್ರಯತ್ನಿಸುತ್ತಿದ್ದಾರೆ. ರಾಜ್ಯಪಾಲರ ಆದೇಶದ ವಿರುದ್ಧವಾಗಿ ಹೈಕೋರ್ಟ್‌ಗೆ ಹೋದರು.

ಆದರೆ ರಾಜ್ಯಪಾಲರ ನಡೆಯನ್ನು ಹೈಕೋರ್ಟ್ ತೆಗೆದು ಹಾಕಿಲ್ಲ. ಉಚ್ಚನ್ಯಾಯಾಲಯ ಸಿಎಂ ಪ್ರಕರಣದಲ್ಲಿ ನಿಯಮಗಳನ್ನು ಉಲ್ಲಂಘಿಸಿದ್ದಾರೆಂದು ಹೇಳಿದ ಮೇಲೂ ಅಧಿಕಾರದಲ್ಲಿ ಸಿದ್ದರಾಮಯ್ಯ ಮುಂದುವರೆದಿರುವುದೇ ಒಂದು ಅನೈತಿಕತೆ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಹೇಳಿದರು.

ಮೈಸೂರಿನಲ್ಲಿ ಸೋಮವಾರ (ಜ.27) ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಿಜಿಸ್ಟರ್ ಮೈಕ್ರೋ ಫೈನಾನ್ಸ್ ಗಳು ಆರ್‌ಬಿಐ ನಿಯಾಮವಳಿಗೆ ಒಳಪಡುತ್ತದೆ. ರಾಜ್ಯ ಸರ್ಕಾರದ ಇದನ್ನು ಗಮನಿಸಬೇಕು. ಕಾನೂನು ಕೈಗೆ ತೆಗೆದುಕೊಳ್ಳುವವರ ವಿರುದ್ಧ ಸಿಎಂ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು. ನಿಯಮಗಳನ್ನು ಜಾರಿಗೆ


ಉದಯವಾಹಿನಿ ಚಿತ್ರ

ತರಬೇಕು ಎಂದರು. ಪೊಲೀಸರಿಗೆ ಅಧಿಕಾರ ಕೊಟ್ಟು ಅದರಲ್ಲಿ ಭ್ರಷ್ಟಾಚಾರ ಆಗಬಾರದು. ಸಮಿತಿಗೆ ಪ್ರಾಮಾಣಿಕ ಅಧಿಕಾರಿಗಳನ್ನು ನೇಮಿಸಿ ಮಾನಿಟರ್ ಮಾಡಬೇಕು. ಆರ್ ಬಿಐ ಗೈಡ್ ಲೈನ್ಸ್ ನಲ್ಲಿ ಎಷ್ಟು ಪರ್ಸಂಟೇಜ್ ಬಡ್ಡಿ ಹಾಕಬೇಕು ಎಂದಿದೆ. ಅನ್ ರಿಜಿಸ್ಟರ್ ಫೈನಾನ್ಸ್ ಸಾಕಷ್ಟಿದೆ ಎನ್ ಬಿಎಸ್ಸಿಯಲ್ಲೂ ಸಹ ಇದಕ್ಕೆ ಪವರ್ ಸಿಗುತ್ತಿಲ್ಲ. ಈಗಾಗಿ ರಾಜ್ಯ ಸರ್ಕಾರ ಕಟ್ಟುನಿಟ್ಟಾಗಿ ಕಂಟ್ರೋಲ್ ಮಾಡಬೇಕು. ಇದರಲ್ಲಿ ಭ್ರಷ್ಟಾಚಾರವಾಗುತ್ತಿದೆ. ಫೈನಾನ್ಸ್ ಕಂಪನಿಗಳು ಪೊಲೀಸರ ರಕ್ಷಣೆ ಪಡೆದು ತೊಂದರೆ


> ಈ ಬಾಲಿಷ ಹೇಳಿಕೆಗಳನ್ನು ಕೊಡವುದನ್ನು ಬಿಡಬೇಕು. ಜನರು ಅಧಿಕಾರ ಕೊಟ್ಟಿದ್ದಾರೆ. ಒಳ್ಳೆಯ ಕೆಲಸಗಳನ್ನು ಮಾಡಲಿ, ಸರ್ಕಾರ ಭ್ರಷ್ಟಾಚಾರದಲ್ಲಿ ತೊಡಗಿದೆ. ಕುರ್ಚಿ ಜಗಳದಲ್ಲಿ ನಿರತರಾಗಿದ್ದಾರೆ ಎಂದು ಪ್ರಹ್ಲಾದ್ ಜೋಶಿ ಹೇಳಿದರು.

ಕೊಡುತ್ತಿದ್ದಾರೆ ಎಂಬ ಮಾಹಿತಿ ಇದೆ. ಪೊಲೀಸರ ಮೇಲೆ ನಾನು ಆರೋಪ ಮಾಡುವುದಿಲ್ಲ. ರಾಜ್ಯ ಸರ್ಕಾರ ಭ್ರಷ್ಟಾಚಾರದಲ್ಲಿ ತೊಡಗಿದೆ ಹೀಗಾಗಿ ಈ ರೀತಿಯ ಪ್ರಕರಣಗಳು ಹೆಚ್ಚಾಗಿದೆ ಎಂದರು. ರಾಜ್ಯ ಸರ್ಕಾರ ಅಧಿಕಾರಕ್ಕೆ ಬಂದು ಒಂದೂವರೆ ವರ್ಷವಾಗಿದೆ. ರಾಜ್ಯದಲ್ಲಿ ಏನೇ ನಡೆದರು ಹಿಂದಿನ ಬಿಜೆಪಿ ಹಾಗೂ ಕೇಂದ್ರ ಸರ್ಕಾರದ ಮೇಲೆ ಹಾಕುತ್ತಾರೆ. ಮಳೆ ಹೆಚ್ಚಾದರು ಕಡಿಮೆಯಾದರೂ ಕೇಂದ್ರ, ಬಿಜೆಪಿ ಹಾಗೂ ರಾಜ್ಯದ ಬಿಜೆಪಿ ಕಾರಣ ಎನ್ನುತ್ತಾರೆ.

# ಮತ ಹಾಕಿಲ್ಲವೆಂದು ಗ್ರಾಮಗಳ ಕಡೆಗಣನೆ ಸಲ್ಲ

• ಉದಯವಾಹಿನಿ ಬಾಗೇಪಲ್ಲಿ

ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕೊತ್ತಕೋಟೆ, ಮಾರಗಾನುಕುಂಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ರಸ್ತೆಗಳ ಅಭಿವೃದ್ಧಿಗೆ ವಿಶೇಷ ಅನುದಾನ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿ ಶೀಘ್ರವೇ ಅಭಿವೃದ್ಧಿ ಮಾಡಲಾಗುವುದು ಎಂದು ಸಂಸದ ಡಾ. ಕೆ. ಸುಧಾಕರ್ ಭರವಸೆ ನೀಡಿದರು. ತಾಲ್ಲೂಕಿನ ಕೊತ್ತಕೋಟೆ ಗ್ರಾಮದ ಬಳಿ ಶುಕ್ರವಾರ ಹಮ್ಮಿಕೊಂಡಿದ್ದ ಸಂಸದರ ನಡೆ ಹಳ್ಳಿಯ ಕಡೆ ಕಾರ್ಯಕ್ರಮದಲ್ಲಿ ನಾಗರಿಕರ ಅಹವಾಲು ಸ್ವೀಕರಿಸಿ ಮಾತನಾಡಿದರು. ಸಂಸದರಾಗಲೀ, ಶಾಸಕರಾಗಲೀ ಗೆದ್ದನಂತರ ಇಡೀ ಕ್ಷೇತ್ರಕ್ಕೆ ಸರ್ಕಾರದ ಪ್ರತಿನಿಧಿಗಳಾಗುತ್ತಾರೆ. ಗೆದ್ದಂತಹವರುಎಲ್ಲಾರನ್ನೂ ಸಮನಾಗಿ ಕಾಣಬೇಕು. ಮತ ಹಾಕಿಲ್ಲ ಎಂದು ಯಾವುದೇ ಒಂದು ನಿರ್ದಿಷ್ಟ ಗ್ರಾಮಗಳನ್ನು ಕಡೆಗಣಿಸಿದರೆ ಮುಂದಿನ ದಿನಗಳಲ್ಲಿ ಕೆಟ್ಟ ಪರಿಣಾಮ ಎದುರಿಸಬೇಕಾಗುತ್ತದೆ ಎಂದರು. ಇನ್ನು ಕ್ಷೇತ್ರದ ಅಭಿವೃದ್ಧಿ ವಿಚಾರಕ್ಕೆ ಬಂದರೆ ಎಲ್ಲೆಡೆ ಹದಗೆಟ್ಟ ರಸ್ತೆಗಳೇ ಇದ್ದು, ಎಲ್ಲಾರೂ ಒಟ್ಟಿಗೆ ಕೈಜೋಡಿಸಿ ಸಮಸ್ಯೆ ಸರಿಪಡಿಸಲು ಕೆಲಸ ಮಾಡಬೇಕಿದೆ. ಕೇಂದ್ರ


ಉದಯವಾಹಿನಿ ಚಿತ್ರ

ಸರ್ಕಾರ ಒಬ್ಬ ಸಂಸದನಿಗೆ ವಾರ್ಷಿಕ 5 ಕೋಟಿ ರೂ. ಅನುದಾನ ನೀಡುವುದರಿಂದ ಬಾಗೇಪಲ್ಲಿ ಒಂದೇ ಕ್ಷೇತ್ರದಲ್ಲಿನ ರಸ್ತೆ ಸರಿಪಡಿಸಲು ಇದರಿಂದ ಸಾಧ್ಯವಾಗುವುದಿಲ್ಲ.

ಆದ್ದರಿಂದ ಕೇಂದ್ರ ಸರ್ಕಾರದ ಪಿಎಂಜಿಎಸ್‌ವೈ ಯೋಜನೆಯಡಿ ವಿಶೇಷ ಅನುದಾನ ತಂದು ರಸ್ತೆಗಳನ್ನು ಅಭಿವೃದ್ಧಿಪಡಿಸುವ ಜತೆಗೆ ಮಾರಗಾನುಕುಂಟೆ ಗ್ರಾಪಂ ವ್ಯಾಪ್ತಿಯ ದೇವಿಕುಂಟೆ ಗ್ರಾಮದ ರಸ್ತೆಗೆ ವಿಶೇಷ ಅನುದಾನ ಬಿಡುಗಡೆ ಮಾಡಿಸಿ ಅಭಿವೃದ್ಧಿಪಡಿಸಲಾಗುವುದು ಎಂದು ಗ್ರಾಮಸ್ಥರಿಗೆ ಭರವಸೆ ನೀಡಿದರು.

# ರಕ್ತದಾನ ಶಿಬಿರ, ಆರೋಗ್ಯ ತಪಾಸಣೆ

• ಉದಯವಾಹಿನಿ ಮಡಿಕೇರಿ

ಇಲ್ಲಿನ ಮೈತ್ರಿ ಸಭಾಂಗಣದಲ್ಲಿ ಭಾನುವಾರ 58 ಮಂದಿಗೆ ಕೃತಕ ಅಂಗಾಂಗಗಳನ್ನು ಅಳವಡಿಸಿದರೆ, 70 ಮಂದಿ ರಕ್ತದಾನ ಮಾಡಿ ಸಾರ್ಥಕತೆ ಮೆರೆದರು. 182 ಮಂದಿ ಆರೋಗ್ಯ ತಪಾಸಣೆಗೆ ಒಳಗಾದರು. ಇವಿಷ್ಟೂ ಸೇವೆಗಳನ್ನು ಉಚಿತವಾಗಿ ಏರ್ಪಡಿಸಿದ್ದದ್ದು, ಇಂಡಿಯನ್ ಮೆಡಿಕಲ್ ಅಸೋಸಿಯೇಷನ್, ನ್ಯಾಷನಲ್ ಮೆಡಿಕೋಸ್ ಸಂಸ್ಥೆ, ಸಂಸ್ಕೃತಿ ಸಿರಿ ಬಳಗ ಮತ್ತು ಟ್ರಸ್ಟ್, ಸ್ವಸ್ಥ ಕೂರ್ಗ್ ಫೌಂಡೇಶನ್, ಕರ್ನಾಟಕ ಮಾರ್ವಾರಿ ಅಸೋಸಿಯೇಷನ್. ಇದರ ಜೊತೆಗೆ, ಕೊಡಗು ಜಿಲ್ಲಾ ಮಟ್ಟದ ನೃತ್ಯ ಸ್ಪರ್ಧೆಯೂ ನಡೆದು ಬಂದಿದ್ದ ಎಲ್ಲಾರಿಗೂ ಭರಪೂರ ಮನರಂಜನೆ ಒದಗಿಸಿತು. ಮುಖ್ಯವಾಗಿ, ಕರ್ನಾಟಕ ಮಾರ್ವಾರಿ ಅಸೋಸಿಯೇಷನ್ ಸದಸ್ಯರು ಅಂಗವಿಕಲರಿಗೆ ಬೇಕಾದ ಅಂಗಾಂಗಳ ಅಳತೆ ತೆಗೆದು ಸ್ಥಳದಲ್ಲೇ ಜೋಡಿಸಿ ಕೊಟ್ಟಿದ್ದು ವಿಶೇಷ ಎನಿಸಿತು.


ಉದಯವಾಹಿನಿ ಚಿತ್ರ

58 ನೋಂದಾಯಿತರ ಪೈಕಿ ಹಲವು ಮಂದಿಗೆ ಕೃತಕ ಅಂಗಾಂಗ ನೀಡಿದರೂ ಇನ್ನೂ ಕೆಲವರಿಗೆ ಜೋಡಿಸಿಕೊಡುವುದಕ್ಕೆ ಸಮಯ ಸಾಕಾಗಲಿಲ್ಲ. ಹಾಗಾಗಿ, ನೋಂದಾಯಿಸಿದವರಿಗೆ ಸೋಮವಾರವೂ ಈ ಕಾರ್ಯ ನಡೆಯಲಿದೆ. ಆರೋಗ್ಯ ತಪಾಸಣೆಯಲ್ಲಿ ಕೇವಲ ರಕ್ತದೊತ್ತಡ, ಮಧುಮೇಹ ಮಾತ್ರವೇ ಅಲ್ಲ, ಕಣ್ಣು, ಸ್ತ್ರೀ ರೋಗಗಳು, ಮೂತ್ರಪಿಂಡ ಸಂಬಂಧಿ ತಪಾಸಣೆ, ಎಚ್‌ಐವಿ ಪರೀಕ್ಷೆ ಸೇರಿದಂತೆ ಅತ್ಯಾಧುನಿಕ ಪರೀಕ್ಷೆಗಳೂ ಇದ್ದವು. ತಜ್ಞ ವೈದ್ಯರೂ ಸೇರಿದಂತೆ ಒಟ್ಟು 29 ವೈದ್ಯರು 182 ಮಂದಿಯ ಆರೋಗ್ಯ ತಪಾಸಣೆ ನಡೆಸಿ, ಸಲಹೆ, ಸೂಚನೆಗಳನ್ನು ನೀಡಿದರು.

# ಹಿಂದುಳಿದವರ ಸಂಘಟನೆ, ಸ್ವಾವಲಂಬನೆ ಅಗತ್ಯ

• ಉದಯವಾಹಿನಿ ರಾಮನಗರ

'ಹಿಂದುಳಿದ ಸಮುದಾಯಗಳು ಸಂಘ-ಸಂಸ್ಥೆಗಳನ್ನು ಸ್ಥಾಪಿಸಿಕೊಂಡು ಸಂಘಟಿತರಾಗಿ ಸ್ವಾವಲಂಬನೆ ಸಾಧಿಸಬೇಕು. ಸಣ್ಣ ಸಮುದಾಯಗಳು ಸಂಘಟಿತರಾದಾಗ ಮಾತ್ರ ಮುಖ್ಯವಾಹಿನಿಗೆ ಬರಲು ಸಾಧ್ಯ' ಎಂದು ಶಾಸಕ ಎಚ್.ಎ. ಇಕ್ಬಾಲ್ ಹುಸೇನ್ ಅಭಿಪ್ರಾಯಪಟ್ಟರು. ಸಂವಿಧಾನ ದಿನಾಚರಣೆ ಅಂಗವಾಗಿ ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಭಾನುವಾರ ಜರುಗಿದ ರಾಮನಗರ ಜಿಲ್ಲಾ ಆದಿ ದ್ರಾವಿಡ ಸಮುದಾಯ ಕ್ಷೇಮಾಭಿವೃದ್ಧಿ ಸೇವಾ ಸಂಘದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು. ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳಾದರೂ ಹಲವು ಸಣ್ಣ ಸಮುದಾಯಗಳು ಸಮಾಜದ ಕಟ್ಟಕಡೆಯಲ್ಲಿವೆ. ಅವರನ್ನು ಸಹ ಒಗ್ಗೂಡಿಸಿಕೊಂಡು ಮುಂದಕ್ಕೆ ಒಯ್ಯಬೇಕಾದ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ. ಆ ನಿಟ್ಟಿನಲ್ಲಿ ಆದಿ ದ್ರಾವಿಡ


ಉದಯವಾಹಿನಿ ಚಿತ್ರ

ಸಂಘ ಸ್ಥಾಪನೆ ಉತ್ತಮ ಹೆಜ್ಜೆಯಾಗಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.
ಸಂಘದ ಪದಾಧಿಕಾರಿಗಳ ಸಮುದಾಯ ಭವನ ಬೇಡಿಕೆಗೆ ಪ್ರತಿಕ್ರಿಯಿಸಿದ ಶಾಸಕ, 'ಸಂಬಂಧಿಸಿದ ಅಧಿಕಾರಿ ಜೊತೆ ಮಾತನಾಡುವೆ. ನನ್ನ ಪ್ರಯತ್ನದ ಜೊತೆಗೆ ನಿಮ್ಮ ಶ್ರಮವೂ ನಿರಂತರವಾಗಿರಲಿ' ಎಂದರು.

ನಗರಸಭೆ ಅಧ್ಯಕ್ಷ ಕೆ. ಶೇಷಾದ್ರಿ, ಶಶಿ ಮಾತನಾಡಿ, 'ಪೆರಿಯಾರ್ ಅವರು ದೇಶ ಕಂಡ ಪ್ರಚಂಡ ವೈಚಾರಿಕ ಕ್ರಾಂತಿಕಾರಿ, ತಮಿಳುನಾಡಿನಲ್ಲಿ ಅವರು ಆರಂಭಿಸಿದ ದ್ರಾವಿಡ ಸ್ವಾಭಿಮಾನ ಚಳವಳಿ ಇಡೀ ದಕ್ಷಿಣ

> 'ಶೋಷಿತ ಸಮುದಾಯಗಳು ಜಾಗೃತವಾಗಿರಬೇಕು. ಶಿಕ್ಷಣ ಪಡೆದು ಸಂಘಟಿತರಾಗಬೇಕು. ಅಂಬೇಡ್ಕರ್ ತೋರಿದ ವಿಮೋಚನೆಯ ಮಾರ್ಗದಲ್ಲಿ ಸಾಗಬೇಕು. ತಮ್ಮೊಂದಿಗೆ ಇತರ ಸಣ್ಣ ಸಮುದಾಯಗಳನ್ನು ಕರೆದೊಯ್ಯಬೇಕು. ಆಗ ಮಾತ್ರ ಸಮ ಸಮಾಜ ನಿರ್ಮಾಣ ಸಾಧ್ಯ' ಎಂದು ಅಭಿಪ್ರಾಯಪಟ್ಟರು.

ಭಾರತವನ್ನು ಪ್ರಭಾವಿಸಿದೆ. ತಮಿಳುನಾಡಿನಲ್ಲಿ ಇಂದಿಗೂ ಅವರ ವಿಚಾರಧಾರೆಯ ಪ್ರಾದೇಶಿಕ ಪಕ್ಷಗಳೇ ಅಧಿಕಾರ ಹಿಡಿಯುತ್ತಿರುವುದು ಅವರು ಆರಂಭಿಸಿದ ಚಳವಳಿಗೆ ಇದ್ದ ಶಕ್ತಿಗೆ ಸಾಕ್ಷಿಯಾಗಿದೆ' ಎಂದು ಬಣ್ಣಿಸಿದರು.

# ದನಗಳ ಜಾತ್ರಾ ಮಹೋತ್ಸವ ಫೆ.26ರಿಂದ


ಉದಯವಾಹಿನಿ ಚಿತ್ರ

• ಉದಯವಾಹಿನಿ , ಪಾಂಡವಪುರ

ತಾಲ್ಲೂಕಿನ ಬೇಬಿಬೆಟ್ಟದಲ್ಲಿ ಫೆ.26ರಿಂದ ಮಾರ್ಚ್ 6ರವರೆಗೆ ನಡೆಯಲಿರುವ ದನಗಳ ಜಾತ್ರಾ ಮಹೋತ್ಸವಕ್ಕೆ ಅಧಿಕಾರಿಗಳು ಹಾಗೂ ಈ ವ್ಯಾಪ್ತಿಯ 8 ಗ್ರಾಮ ಪಂಚಾಯಿತಿಗಳ ಜಾತ್ರಾ ಸಮಿತಿ ಸದಸ್ಯರು ಸಕಲ ಸಿದ್ಧತೆ ಮಾಡಿಕೊಳ್ಳಬೇಕು' ಎಂದು ಶಾಸಕ ದರ್ಶನ್ ಪುಟ್ಟಣ್ಣಯ್ಯ ಹೇಳಿದರು.

ಬೇಬಿಬೆಟ್ಟದ ರಾಮಯೋಗೀಶ್ವರ ಮಠದ ಆವರಣದಲ್ಲಿ ನಡೆದ ಜಾತ್ರಾ ಮಹೋತ್ಸವದ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಾತ್ರಾ ಮಹೋತ್ಸವದ ಅಂಗವಾಗಿ ಮಾರ್ಚ್ 2ರಂದು ಸಾಮೂಹಿಕ ಸರಳ ವಿವಾಹ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ವಧು-ವರರು ಹೆಸರನ್ನು ನೋಂದಾಯಿಸಿಕೊಳ್ಳಬೇಕು. ಮಾರ್ಚ್ 3ರಂದು ಉತ್ತಮ ರಾಸುಗಳ ಆಯ್ಕೆ ನಡೆಯಲಿದೆ. 4ರಂದು ರಥೋತ್ಸವ ಹಾಗೂ 5ರಂದು ಸಮಾರೋಪ ಮತ್ತು ಉತ್ತಮ ರಾಸುಗಳಿಗೆ ಬಹುಮಾನ ವಿತರಣೆ ಮಾಡಲಾಗುವುದು' ಎಂದು ತಿಳಿಸಿದರು.

ಸಭೆಯಲ್ಲಿ ತಹಶೀಲ್ದಾರ್ ಎಸ್.ಸಂತೋಷ್, ತಾ.ಪಂ. ಇಒ ಲೋಕೇಶ್ ಮೂರ್ತಿ, ಬಿಇಒ ರವಿಕುಮಾರ್, ಚಿನಕುರಳಿ ತಮ್ಮಣ್ಣ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ತಾಲ್ಲೂಕು ಅಧ್ಯಕ್ಷ ಎಚ್.ಕೃಷ್ಣಗೌಡ, ಜಿ.ಪಂ. ಮಾಜಿ ಸದಸ್ಯ ಕೆ.ಟಿ.ಗೋವಿಂದೇಗೌಡ, ರೈತ ಸಂಘದ ತಾಲ್ಲೂಕು ಅಧ್ಯಕ್ಷ ಕೆನ್ನಾಳು ವಿಜಯಕುಮಾರ್, ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಸಿ.ಎ.ಅರವಿಂದ್, ಪಶು ಸಂಗೋಪನಾ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಮಹೇಂದ್ರ, ಹಾಜರಿದ್ದರು.

> 'ಜಾತ್ರಾ ಯಶಸ್ಸಿಗೆ ಸ್ವಾಗತ ಸಮಿತಿ, ಪ್ರಚಾರ ಸಮಿತಿ, ಸಾಂಸ್ಕೃತಿಕ ಮತ್ತು ಕ್ರೀಡಾ ಸಮಿತಿ, ವೇದಿಕೆ ಸಮಿತಿ, ಆಹಾರ ಸಮಿತಿ ಸೇರಿದಂತೆ ವಿವಿಧ ಸಮಿತಿಗಳನ್ನು ರಚಿಸಬೇಕು. ವಿವಿಧ ಇಲಾಖೆಗಳನ್ನೊಳಗೊಂಡ ವಸ್ತುಪ್ರದರ್ಶನ ಸಮಿತಿ ರಚಿಸಿಕೊಂಡು ಕಾರ್ಯಪ್ರವೃತ್ತರಾಗಬೇಕು' ಎಂದು ಹೇಳಿದರು.ಶಿವಬಸವ ಸ್ವಾಮೀಜಿ ಮಾತನಾಡಿ, 'ಬೇಬಿ ಜಾತ್ರೆಗೆ ಪ್ರತಿಯೊಬ್ಬರೂ ಸಹಕರಿಸಬೇಕು' ಎಂದರು.

# ಪೊಲೀಸರ ಪ್ರತಿಭೆ ಅನಾವರಣ,
## ಸಾಂಸ್ಕೃತಿಕ ವೇದಿಕೆ ಉದ್ಘಾಟನೆ

• ಉದಯವಾಹಿನಿ ಮಡಿಕೇರಿ

ಇಲ್ಲಿನ ಪೊಲೀಸ್ ಮೈದಾನದಲ್ಲಿ ರಾತ್ರಿ ನಡೆದ ಅಪರೂಪದ ಕಾರ್ಯಕ್ರಮದಲ್ಲಿ ಪೊಲೀಸರ ಪ್ರತಿಭೆ ಅನಾವರಣಗೊಂಡಿತು.

ಕೊಡಗು ಪೊಲೀಸ್ ಸಾಂಸ್ಕೃತಿಕ ವೇದಿಕೆ ಇಲ್ಲಿ ಉದ್ಘಾಟನೆ ಗೊಳ್ಳುವ ಮೂಲಕ ಜಿಲ್ಲೆಯ ಸಾಂಸ್ಕೃತಿಕ ಪುಸ್ತಕಕ್ಕೆ ಮತ್ತೊಂದು ಪುಟ ಸೇರ್ಪಡೆಗೊಂಡಿತು. 6. ವಿದೇಶ ಈ ಕಾರ್ಯಕ್ರಮದಲ್ಲಿ ಹಲವು ಪೊಲೀಸರು ಹಾಡು ಹಾಡಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದರು. 5. ಭವ್ಯ ವೇದಿಕೆಯ ಮೇಲೆ ಹಲವು ಕಲಾವಿದರು ಹಾಡುಗಳನ್ನು ಒಂದರ ಮೇಲೆ ಒಂದರಂತೆ ಹಾಡುವ ಮೂಲಕ ನೋಡುಗರನ್ನು ಗಾನದ ಅಲೆಯ ಮೇಲೆ ತೇಲುವಂತೆ ಮಾಡಿದರು. ಸಭಿಕರೂ ಹಾಡಿಗೆ ತಕ್ಕಂತೆ ಹೆಜ್ಜೆ ಹಾಕಿದ್ದು ವಿಶೇಷ ಎನಿಸಿತು.

ಶ್ಲೋಕದ ಮೂಲಕ ಆರಂಭವಾದ ಈ ಗಾನಸುಧೆಯಲ್ಲಿ ಹಲವು ದೇಶಭಕ್ತಿ ಗೀತೆಗಳು ಕೇಳಿ ಬಂದವು. ಹಲವು


ಉದಯವಾಹಿನಿ ಚಿತ್ರ

ಹಳೆಯ ಹಿಂದಿ ಹಾಡುಗಳು ಗತಕಾಲಕ್ಕೆ ಕೊಂಡೊಯ್ದವು. ಹಳೆಯ ಕನ್ನಡದ ಹಾಡುಗಳು ತನ್ಮಯಗೊಳಿಸಿದವು. ನಟಿ ಹರ್ಷಿಕಾ ಪೂಣಚ್ಚ ಮಾತನಾಡಿ, 'ಪೊಲೀಸರಿಗಾಗಿ ಸಾಂಸ್ಕೃತಿಕ ವೇದಿಕೆ ಉದ್ಘಾಟನೆಯಾಗಿರುವುದು ಖುಷಿ ತರಿಸಿದೆ' ಎಂದರು. ಪತ್ರಿಕೋದ್ಯಮಿ ಜಿ.ಚಿದ್ವಿಲಾಸ್ ಮಾತನಾಡಿ, 'ಎಲ್ಲಿ ಸಂಸ್ಕಾರ ಮತ್ತು ಶಿಸ್ತು ಇರುತ್ತದೋ ಅಂತಹ ಮನೆ ಸುಂದರ ಇರುತ್ತದೆ. ಅಂತಹ ಮನೆ ಕೊಡಗು ಪೊಲೀಸ್ ಇಲಾಖೆ. ಮುಂದಿನ ದಿನಗಳಲ್ಲಿ ಕೊಡಗಿನ ಪೊಲೀಸ್ ಪ್ರತಿಭೆಗಳು ರಾಷ್ಟ್ರಮಟ್ಟದಲ್ಲಿ ಬೆಳಗಲು ಇದು ಸಮರ್ಥ ವೇದಿಕೆಯಾಗಿದೆ' ಎಂದು ಶ್ಲಾಘಿಸಿದರು. ಜೊತೆಗೆ, 'ಎದೆ ತುಂಬಿ ಹಾಡಿದೆನು' ಹಾಡನ್ನು ಹಾಡಿದರು.

# ಎಂ.ಸಿ ಸುಧಾಕರ್ VS ಕೆ.ಸುಧಾಕರ: ತಾರಕಕ್ಕೇರಿದ ಭ್ರಷ್ಟಾಚಾರದ ವಾಕ್ಸಮರ

## ಉತ್ಸವ, ಶಿವೋತ್ಸವಕ್ಕೆ ಯಾರಿಂದ ಎಷ್ಟು ವಸೂಲಿ ಮಾಡಿದರು, ಗುತ್ತಿಗೆ ಕಾಮಗಾರಿಗಳಲ್ಲಿ ಎಲ್ಲಿ ವಸೂಲಿ ಮಾಡಿದರು ಎನ್ನುವ ಬಗ್ಗೆ ಮಾಹಿತಿ

• ಉದಯವಾಹಿನಿ ಚಿಕ್ಕಬಳ್ಳಾಪುರ

'ಭ್ರಷ್ಟಾಚಾರ' ಕುರಿತು.ಸಚಿವ ಡಾ.ಎಂ.ಸಿ.ಸುಧಾಕರ್ ಮತ್ತು ಸಂಸದ ಡಾ.ಕೆ.ಸುಧಾಕರ್ ನಡುವಿನ ವಾಕ್ಸಮರ ತಾರಕಕ್ಕೇರಿದೆ. 'ಜಿಲ್ಲೆಯಲ್ಲಿ ಭ್ರಷ್ಟಾಚಾರ ತಾಂಡವಾಡುತ್ತಿದೆ. ಎಲ್ಲಾ ಇಲಾಖೆಗಳಲ್ಲಿಯೂ ಸಚಿವರ ಏಜೆಂಟರು ಇದ್ದಾರೆ, ಅವರ ಬಾವ, ಬಾಮೈದ, ಅಣ್ಣ, ತಮ್ಮ ಹೀಗೆ ಸಂಬಂಧಿಕರೇ ಏಜೆಂಟರಾಗಿದ್ದಾರೆ ಎಂದು ಸಂಸದ ಡಾ.ಕೆ.ಸುಧಾಕರ್ ಇತ್ತೀಚೆಗೆ ಆರೋಪಿಸಿದ್ದರು.

ಇದಕ್ಕೆ ಭಾನುವಾರ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ ಸಚಿವ ಡಾ.ಎಂ.ಸಿ.ಸುಧಾಕರ್, 'ಡಾ.ಕೆ.ಸುಧಾಕರ್‌ಗೆ ಸಂಸದರಾಗಿ ಆಯ್ಕೆಯಾಗಿರುವ ಕುರಿತು ತೃಪ್ತಿ ಇಲ್ಲ ಜಿಲ್ಲೆಯ ಮೇಲಿನ ನನ್ನ ಹಿಡಿತ ತಪ್ಪಿತು. ಬರಬೇಕಾದ ವರಮಾನ ಇಲ್ಲದಾಯಿತು ಎಂದು ಮಾನಸಿಕ ಅಸ್ವಸ್ಥರ ರೀತಿ ವರ್ತಿಸುತ್ತಿದ್ದಾರೆ' ಎಂದು ಲೇವಡಿ ಮಾಡಿದರು.

ಕಂಪನಿಗಳನ್ನು ಮಾಡಿಕೊಂಡು ಲೂಟಿ ಸಂಸ್ಕೃತಿ ಹುಟ್ಟುಹಾಕಿದ್ದು ಯಾರು ಸ್ವಂತ ಕಂಪನಿಗಳಿಗೆ ಗುತ್ತಿಗೆ ನೀಡಿದ್ದು ಯಾರು ಎನ್ನುವುದು


ಉದಯವಾಹಿನಿ ಚಿತ್ರ

ಜಿಲ್ಲೆಯ ಜನರಿಗೆ ಗೊತ್ತಿದೆ. ಈ ಹಿಂದೆ ಅವರು ಸಚಿವರಾಗಿದ್ದ ವೇಳೆ ಯಾವ ವ್ಯವಸ್ಥೆ ಇತ್ತು. ಈಗ ಯಾವ ರೀತಿ ವ್ಯವಸ್ಥೆ ಇದೆ ಎನ್ನುವ ಬಗ್ಗೆ, ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಕೇಳಿದರೆ ಗೊತ್ತಾಗುತ್ತದೆ ಎಂದರು.

ಚಿಕ್ಕಬಳ್ಳಾಪುರ ಉತ್ಸವ, ಶಿವೋತ್ಸವಕ್ಕೆ ಯಾರಿಂದ ಎಷ್ಟು ವಸೂಲಿ ಮಾಡಿದರು ಗುತ್ತಿಗೆ ಕಾಮಗಾರಿಗಳಲ್ಲಿ ಎಲ್ಲಿ ವಸೂಲಿ ಮಾಡಿದರು ಎನ್ನುವ ಬಗ್ಗೆ ಮಾಹಿತಿ ಇದೆ. ಕಾಮಾಲೆ ರೋಗ ಬಂದವರಿಗೆ ಪ್ರಪಂಚವೇ ಹಳದಿ ಎನ್ನುವಂತೆ ಇವರ ಮನಸ್ಥಿತಿ ಇದೆ ಎಂದು ಟೀಕಿಸಿದರು. ಈ 20 ತಿಂಗಳಲ್ಲಿ ನನ್ನ ಕಾರ್ಯವೈಖರಿ ಯಾವ ರೀತಿ ಎನ್ನುವುದು ನಿಮಗೆ (ಮಾಧ್ಯಮ) ಸೇರಿದಂತೆ ಎಲ್ಲಾರಿಗೂ ಗೊತ್ತು. ನಮ್ಮದು ಅವರ ರೀತಿ ಸಂಸ್ಕೃತಿಯಲ್ಲ ಕೋವಿಡ್ ವೇಳೆ ಸತ್ತವರ ಹೆಸರಿನಲ್ಲಿ ಹಣ ಲೂಟಿ ಮಾಡಿದ್ದಾರೆ. ಡಾ.ಕೆ.

> ನನಗೆ ಮಾಹಿತಿ ಇಲ್ಲ. ಈ ಹಿಂದಿನಿಂದಲೂ ಚಿಕ್ಕಬಳ್ಳಾಪುರ ರಿಪಬ್ಲಿಕ್ ಬಗ್ಗೆ ನಾನು ಧ್ವನಿ ಎತ್ತಿದ್ದೇನೆ. ಡಾ.ಕೆ.ಸುಧಾಕರ್ ಸಹ ಕ್ರಷರ್ ಮಾಲೀಕರು ನನ್ನ ಮೇಲೆ ಇಂತಹ ಮಾತುಗಳು ಬಂದರೆ ನಾನು ಎಲ್ಲಿ ಬೇಕಾದರೂ ಎದೆ ಮುಟ್ಟಿಕೊಂಡು ಮಾತನಾಡುತ್ತೇನೆ ಎಂದರು. ಇದು ಶಾಸಕರು ಮತ್ತು ಸಂಸದರ ವೈಯಕ್ತಿಕ ವಿಚಾರ. ಈ ಬಗ್ಗೆ ಶಾಸಕರ ಗಮನಕ್ಕೆ ತಂದಿದ್ದೇನೆ. ಅವರು ಉತ್ತರ ಕೊಡುತ್ತೇನೆ ಎಂದಿದ್ದಾರೆ ಎಂದು ಹೇಳಿದರು.

### ಶಾಸಕರು ಪ್ರತಿಕ್ರಿಯಿಸುವರು'

ಹೊಸ ವರ್ಷದ ಉಡುಗೊರೆ ಹೆಸರಿನಲ್ಲಿ ಶಾಸಕ ಪ್ರದೀಪ್ ಈಶ್ವರ್ ಗಣಿಗಳು ಮತ್ತು ಕ್ರಷರ್‌ಗಳಿಂದ ತಲಾ 10 ಲಕ್ಷದಂತೆ 12 ಕೋಟಿ ಪಡೆದಿದ್ದಾರೆ ಎಂದು ಡಾ.ಕೆ.ಸುಧಾಕರ್ ಆರೋಪಿಸಿರುವ ಕುರಿತು ಪ್ರತಿಕ್ರಿಯಿಸಿದ ಡಾ.ಎಂ.ಸಿ.ಸುಧಾಕರ್, 'ಈ ಬಗ್ಗೆ ಶಾಸಕರು ಪ್ರತಿಕ್ರಿಯಿಸುವರು' ಎಂದು ಹೇಳಿದರು.

ಸುಧಾಕರ್ ಸಚಿವರಾಗಿದ್ದ ವೇಳೆ ವೈದ್ಯಕೀಯ ಶಿಕ್ಷಣ ಕಾಲೇಜುಗಳಿಗೆ ಪ್ರಾಧ್ಯಾಪಕರ ನೇಮಕದ ವೇಳೆಯಲ್ಲಿ ಎಷ್ಟು ಹಣ ಪಡೆದರು, ವರ್ಗಾವಣೆಗೆ ಎಷ್ಟು ಹಣ ನಿಗದಿ ಮಾಡಿದ್ದರು ಎನ್ನುವುದು ತಿಳಿದಿದೆ ಎಂದು ಹೇಳಿದರು. ಭವಿಷ್ಯದ ಮುಖ್ಯಮಂತ್ರಿ ಎನ್ನುವ ಕನಸು ಸಹ ಕಂಡಿದ್ದರು. ಈಗ ಹತಾಶೆಯಿಂದ ಮಾತನಾಡುತ್ತಿದ್ದಾರೆ. ಅವರ ಬಗ್ಗೆ ಕನಿಕರವೂ ಇದೆ ಎಂದರು.

# ಮಿನಿ ನ್ಯೂಸ್

## ರಾಜ್ಯದಲ್ಲಿ ನಿಲ್ಲದ ಮೈಕ್ರೋ ಫೈನಾನ್ಸ್ ಸಿಬ್ಬಂದಿಗಳ ಕಿರುಕುಳ

• ಉದಯವಾಹಿನಿ ಮೈಸೂರು

ರಾಜ್ಯದಲ್ಲಿ ಮೈಕ್ರೋ ಫೈನಾನ್ಸ್ ಸಿಬ್ಬಂದಿಗಳ ಕಿರುಕುಳ ಮುಂದುವರೆದಿದ್ದು, ಮೈಸೂರಲ್ಲಿ ಮತ್ತೋರ್ವ ವ್ಯಕ್ತಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ ಮಲ್ಕುಂಡಿ ಗ್ರಾಮದಲ್ಲಿ ಘಟನೆ ನಡೆದಿದೆ. ಕೃಷ್ಣಮೂರ್ತಿ ಎಂಬುವವರು ಸಂಘವೊಂದರ ಹಣ ಕಟ್ಟಲಾಗದೇ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಹಣ ಕಟ್ಟಲು ಸಾಲಕೊಡಿ ಎಂದು ಕೃಷ್ಣಮೂರ್ತಿ ಹಲವರ ಬಳಿ ಕೇಳಿಕೊಂಡಿದ್ದರು, ಸಾಲ ಸಿಗದೇ ಕಿರುಕುಳ ತಾಳಲಾರದೇ ಸೂಸೈಡ್ ಮಾಡಿಕೊಂಡಿದ್ದಾರೆ. ಸ್ಥಳಕ್ಕೆ ಹುಲ್ಲಹಳ್ಳಿ ಠಾಣೆ ಪೊಲಿಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

## ಮೈಸೂರಲ್ಲಿ ಕುಸಿದು ಬಿದ್ದು ಎಸ್‌ಎಸ್ ಎಲ್‌ಸಿ ವಿದ್ಯಾರ್ಥಿನಿ ಸಾವು

• ಉದಯವಾಹಿನಿ ಮೈಸೂರು

ಹೃದಯಾಘಾತದಿಂದ ಎಸ್ ಎಸ್ ಎಲ್ ಸಿ ವಿದ್ಯಾರ್ಥಿನಿ ಮೃತಪಟ್ಟ ಘಟನೆ ಮೈಸೂರಿನಲ್ಲಿ ನಡೆದಿದೆ. ಪಿರಿಯಾಪಟ್ಟಣ ತಾಲ್ಲೂಕಿನ ಕಲ್ಲೂರು ಗ್ರಾಮದಲ್ಲಿ ಈ ಘಟನೆ ನಡೆದಿದೆ.ನಾಗರಾಜ್, ವಸಂತ ದಂಪತಿ ಪುತ್ರಿ ದೀಪಿಕಾ (15) ಮೃತಪಟ್ಟಿದ್ದು, ಇದ್ದಕ್ಕಿದ್ದಂತೆ ಕುಸಿದು ಬಿದ್ದು ಅಸ್ವಸ್ಥರಾಗಿದ್ದ ದೀಪಿಕಾಳನ್ನ ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಆದರೆ ಮಾರ್ಗ ಮಧ್ಯೆ ಬಾಲಕಿ ಮೃತಪಟ್ಟಿದ್ದಾಳೆ, ಬಾಲಕಿ ಹೃದಯಾಘಾತದಿಂದ ಮೃತಪಟ್ಟಿದ್ದಾಳೆ ಎಂದು ವೈದ್ಯರು ಧೃಡಪಡಿಸಿದ್ದಾರೆ. ಯುವಜನತೆಯಲ್ಲಿ ಹೃದಯಾಘಾತ ಹೆಚ್ಚುತ್ತಿದ್ದು, ಆತಂಕಕ್ಕೆ ಕಾರಣವಾಗಿದೆ. ಅದರಲ್ಲೂ ವಿದ್ಯಾರ್ಥಿಗಳು ಹೃದಯಾಘಾತಕ್ಕೆ ಬಲಿಯಾಗುತ್ತಿರುವುದು ಆತಂಕಕ್ಕೆ ಕಾರಣವಾಗಿದೆ. ತುಮಕೂರಿನಲ್ಲೂ ವಿದ್ಯಾರ್ಥಿನಿ ಸಾವು ಹೃದಯಾಘಾತದಿಂದ ಕುಸಿದುಬಿದ್ದು ಕಾಲೇಜು ವಿದ್ಯಾರ್ಥಿನಿ ಮೃತಪಟ್ಟ ಘಟನೆ ತುಮಕೂರಿನಲ್ಲಿ ಇತ್ತೀಚೆಗೆ ನಡೆದಿತ್ತು.. ಪಾವಗಡದ ಸರ್ಕಾರಿ ಪದವಿ ಕಾಲೇಜಿನ ಪ್ರಥಮ ಬಿಕಾಂ ವಿದ್ಯಾರ್ಥಿನಿ ಮೈಥಿಲಿ(19) ಮೃತಪಟ್ಟವರು. ಮಧುಗಿರಿ ತಾಲ್ಲೂಕಿನ ಮಿಡಿಗೇಶಿ ಮೂಲದ ಮೈಥಿಲಿ ಶನಿವಾರ ತರಗತಿ ಮುಗಿಸಿ ಪಟ್ಟಣದ ನಿಲ್ದಾಣಕ್ಕೆ ಬರುವಾಗ ಚಳ್ಳಕೆರೆ ಕ್ರಾಸ್ ಬಳಿ ಏಕಾಏಕಿ ಅಸ್ವಸ್ಥಗೊಂಡು ಕುಸಿದುಬಿದ್ದಿದ್ದಾರೆ. ತಕ್ಷಣ ಅವರನ್ನು ಪಾವಗಡದ ಸಾರ್ವಜನಿಕ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿತ್ತು, ಆದರೆಮಾರ್ಗ ಮಧ್ಯೆಯೇ ಅವರು ಕೊನೆಯುಸಿರೆಳೆದಿದ್ದಾರೆ.

## ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರೆ

• ಉದಯವಾಹಿನಿ ಸುತ್ತೂರು

ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವದಲ್ಲಿ ಸೋಮವಾರ ಒಂದು ಅಂತರ್ ಧರ್ಮೀಯ, 23 ಅಂತರ್ಜಾತಿ, ಒಂದು ಮರು ಮದುವೆ ಸೇರಿ 155 ಜೋಡಿಗಳು ವೈವಾಹಿಕ ಜೀವನಕ್ಕೆ ಕಾಲಿಟ್ಟರು. ಹರಗುರು ಚರಮೂರ್ತಿಗಳು, ಪೋಷಕರು, ಬಂಧುಗಳು, ಮಿತ್ರರು ಹಾಗೂ ನೂರಾರು ಸಂಖ್ಯೆಯಲ್ಲಿ ಸೇರಿದ್ದ ಭಕ್ತರ ಸಮ್ಮುಖದಲ್ಲಿ ಸತಿ-ಪತಿಗಳಾದರು. 3 ವೀರಶೈವ ಲಿಂಗಾಯತ, 84 ಪರಿಶಿಷ್ಟ ಜಾತಿ, 22 ಪರಿಶಿಷ್ಟ ಪಂಗಡ, 22 ಹಿಂದುಳಿದ ವರ್ಗ, 23 ಅಂತರ್ಜಾತಿ, 3 ಅಂಗವಿಕಲ, 17 ತಮಿಳುನಾಡಿನ ಜೋಡಿಗಳು ಬೆಳಿಗ್ಗೆ 11.54ಕ್ಕೆ ವಿವಾಹವಾದರು. ಕೇಂದ್ರ ಸಚಿವ ಪುಲ್ಹಾದ ಜೋಶಿ ಅವರು ಪ್ರತಿಜ್ಞಾವಿಧಿ ಬೋಧಿಸಿದರು.

## ಮಹಿಳೆ ಮೇಲೆ ಹಲ್ಲೆ ನಡೆಸಿ ಮಾಂಗಲ್ಯ ಸರ ಕದ್ದು ಪರಾರಿಯಾದ ಖದೀಮರು

• ಉದಯವಾಹಿನಿ ಚಿಕ್ಕಬಳ್ಳಾಪುರ

ಹಾಡಹಗಲೇ ಅಂಗಡಿಯಲ್ಲಿದ್ದ ಮಹಿಳೆ ಮೇಲೆ ಹಲ್ಲೆ ನಡೆಸಿ, ಮಾಂಗಲ್ಯ ಸರವನ್ನು ಕಿತ್ತುಕೊಂಡು ದುಷ್ಕರ್ಮಿಗಳು ಪರಾರಿಯಾಗಿರುವ ಘಟನೆ ಚಿಕ್ಕಬಳ್ಳಾಪುರದಲ್ಲಿ ನಡೆದಿದೆ. ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕಿನ ಗಡಿಡಂ ಗ್ರಾಮದಲ್ಲಿ ಈ ಘಟನೆ ನಡೆದಿದೆ. ಚಿಲ್ಲರೆ ಅಂಗಡಿಗೆ ಸಾಮಾನು ಖರೀದಿ ನೆಪದಲ್ಲಿ ಬಂದಿದ್ದ ಇಬ್ಬರು ಕಳ್ಳರು, ಅಂಗಡಿಯಲ್ಲಿದ್ದ ಮಹಿಳೆ ಮೇಲೆ ಹಲ್ಲೆ ನಡೆಸಿ, ಅವರ ಮಾಂಗಲ್ಯ ಸರ ಕಿತ್ತುಕೊಂಡು ಎಸ್ಕೆಪ್ ಆಗಿದ್ದಾರೆ. ಬೈಕ್ ನಲ್ಲಿ ಬಂದಿದ್ದ ಇಬ್ಬರು ಖದೀಮರು ಈ ಕೃತ್ಯವೆಸಗಿದ್ದಾರೆ. ಅನಸೂಯಮ್ಮ ಎಂಬ ಮಹಿಳೆ ಹಲ್ಲೆಗೊಳಗಾಗಿದ್ದು, ಬಾಗೇಪಲ್ಲಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

## ಸಂವಿಧಾನದಿಂದ ಪ್ರತಿಯೊಬ್ಬರಿಗೂ ಸಮಾನ ಶಿಕ್ಷಣ'

• ಉದಯವಾಹಿನಿ ಕುಶಾಲನಗರ

'ಭಾರತದಲ್ಲಿ ಸಂವಿಧಾನ ಜಾರಿಗೆ ಬಂದ ಕಾರಣದಿಂದಲೇ ದೇಶದ ಪ್ರತಿಯೊಬ್ಬ ಪ್ರಜೆಗೂ ಸಹ ಸಮಾನ ಶಿಕ್ಷಣ, ಪ್ರತಿಯೊಬ್ಬರಿಗೂ ಬೇಕಾದ ಮೂಲಭೂತ ಹಕ್ಕುಗಳು, ಶಿಕ್ಷಣ ಹಕ್ಕುಗಳು, ಧಾರ್ಮಿಕ ಹಕ್ಕುಗಳು ಸಿಕ್ಕಿದೆ. ಸಂವಿಧಾನ ಎಂಬುದು ಭಾರತದ ಸರ್ವೋಚ್ಚ ಕಾನೂನು ಆಗಿದೆ' ಎಂದು ಕೊಡಗು ಜಿಲ್ಲಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ನಿವೃತ್ತ ನೌಕರರ ಸಂಘದ ಅಧ್ಯಕ್ಷ ಸಿದ್ದಪ್ಪ ಹೇಳಿದರು. ಇಲ್ಲಿನ ಮಹಾಲಕ್ಷ್ಮಿ ಸಭಾಂಗಣದಲ್ಲಿ ಭಾನುವಾರ ಕೊಡಗು ಜಿಲ್ಲಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ನಿವೃತ್ತ ನೌಕರರ ಸಂಘದಿಂದ ಏರ್ಪಡಿಸಿದ್ದ ಗಣರಾಜ್ಯೋತ್ಸವ ಹಾಗೂ ಸಂವಿಧಾನ ದಿನಾಚರಣೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಕೊಡಗು ಜಿಲ್ಲಾ ವಾಲ್ಮೀಕಿ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಕೆ.ಎನ್.ಅಶೋಕ್ ಕಾರ್ಯಕ್ರಮ ಉದ್ಘಾಟಿಸಿದರು. ದಲಿತ ಸಂಘರ್ಷ ಸಮಿತಿ ಮುಖಂಡ ಹಾನಗಲ್ಲು ಜಯಪ್ಪ ಅವರು ಸಂವಿಧಾನದ ಪೀಠಿಕೆ ವಾಚಿಸಿದರು.

## ಅರಕೆರೆ: 6 ಹುಲ್ಲಿನ ಮೆದೆ ಭಸ್ಮ

• ಉದಯವಾಹಿನಿ ಶ್ರೀರಂಗಪಟ್ಟಣ

ತಾಲ್ಲೂಕಿನ ಅರಕೆರೆ ಗ್ರಾಮದಲ್ಲಿ ಭಾನುವಾರ ಮಧ್ಯಾಹ್ನ ಬೆಂಕಿ ಬಿದ್ದು 6 ಹುಲ್ಲಿನ ಮೆದೆಗಳು ಭಸ್ಮವಾಗಿವೆ. ಗ್ರಾಮದ ರಮೇಶ ಒಂದು ಎಕರೆ, ಶಂಕರ, ಪುಟ್ಟಸ್ವಾಮಿ ಹಾಗೂ ಚುಂಚೇಗೌಡನ ರಮೇಶ ತಲಾ ಎರಡೂವರೆ ಎಕರೆ, ಸಣೇಗೌಡ ಅರ್ಧ ಎಕರೆ, ಗುಜ್ಜಿ ಮಹದೇವ ಅರ್ಧ ಎಕರೆ ಜಮೀನಲ್ಲಿ ಬೆಳೆದು ಗುಡ್ಡೆ ಹಾಕಿದ್ದ ಹುಲ್ಲಿನ ಮೆದೆಗಳು ಸುಟ್ಟು ಹೋಗಿವೆ. ಗ್ರಾಮದ ಹೊಸ ಬಡಾವಣೆ ಬಳಿ ಮರೀಗೌಡ ಎಂಬುವರ ಹೊಲದಲ್ಲಿ ಒಂದರ ಪಕ್ಕ ಒಂದರಂತೆ ಹಾಕಿದ್ದ ಹುಲ್ಲಿನ ಮೆದೆಗಳಿಗೆ ಮಧ್ಯಾಹ್ನ 1.30ರ ಸಮಯದಲ್ಲಿ ಬೆಂಕಿ ಹೊತ್ತಿಕೊಂಡಿದೆ. ಬೆಂಕಿ ಅವಘಡಕ್ಕೆ ನಿಖರ ಕಾರಣ ತಿಳಿದು ಬಂದಿಲ್ಲ. ಇವುಗಳ ಪಕ್ಕದಲ್ಲೇ ಇದ್ದ ಎರಡು ತಿಪ್ಪೆಗಳೂ ಸುಟ್ಟು ಹೋಗಿವೆ. ಸ್ಥಳಕ್ಕೆ ಅಗ್ನಿಶಾಮಕ ದಳ ಬರುವಷ್ಟರಲ್ಲಿ ಹುಲ್ಲಿನ ಮೆದೆಗಳು ಸಂಪೂರ್ಣ ಭಸ್ಮವಾಗಿದ್ದವು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.


## ಅಂತರಾಳದಿಂದ... EDITORIAL

# ಭಯೋತ್ಪಾದಕರನ್ನು ಬಗ್ಗು ಬಡಿದೀತೆ ಸುಗ್ರೀವಾಜ್ಞೆ

ಆದರೆ ಈ ಕಾನೂನು ಯಶಸ್ವಿಯಾಗಿ ಜಾರಿಯಾಗಲಿದೆಯೆ ಮೈಕ್ರೋ ಫೈನಾನ್ಸ್‌ನ ಹಿಂದಿರುವ ಶಕ್ತಿಗಳು ಅದಕ್ಕೆ ಅವಕಾಶ ನೀಡುತ್ತಾರೆಯೇ ಎನ್ನುವುದನ್ನು ಕಾದು ನೋಡಬೇಕಾಗಿದೆ. ಲೇವಾದೇವಿದಾರರ ದೌರ್ಜನ್ಯ, ಗೂಂಡಾಗಿರಿಗಳಿಂದ ಆತ್ಮಹತ್ಯೆಗಳು ನಡೆಯುತ್ತಿರುವುದು ರಾಜ್ಯಕ್ಕೆ ಹೊಸದೇನೂ ಅಲ್ಲ. ಈ ಹಿಂದೆಯೂ ಇದರ ವಿರುದ್ಧ ದೂರುಗಳು, ಆಕ್ರೋಶಗಳು ಕೇಳಿ ಬಂದಾಗ ಸರಕಾರ 'ಕಠಿಣ ಕ್ರಮ'ದ ಭರವಸೆಯನ್ನು ನೀಡಿತ್ತು. ಮೈಕ್ರೋಫೈನಾನ್ಸ್‌ನ ವಿರುದ್ಧ ಪೂರ್ಣ ಪ್ರಮಾಣದಲ್ಲಿ ಕ್ರಮ ಕೈಗೊಳ್ಳಲು ರಾಜ್ಯ ಸರಕಾರಕ್ಕೆ ಅವಕಾಶವಿಲ್ಲ. ರಾಜ್ಯದಲ್ಲಿ ಆರ್‌ಬಿಐ ನಿಯಮಗಳನ್ನು ಈ ಫೈನಾನ್ಸ್ ಗಳು ಸ್ಪಷ್ಟವಾಗಿ ಉಲ್ಲಂಘಿಸುತ್ತಿದೆಯಾದರೂ, ಕೇಂದ್ರ ಸರಕಾರ ಮೌನವಾಗಿ ಇದಕ್ಕೆ ಕುಮ್ಮಕ್ಕು ನೀಡುತ್ತಿದೆ. ಆರ್‌ಬಿಐ ಯಾಕೆ ಇವುಗಳನ್ನು ನಿಯಂತ್ರಿಸಲು ವಿಫಲವಾಗಿದೆ ಎನ್ನುವ ಪ್ರಶ್ನೆಗೂ ಉತ್ತರವಿಲ್ಲ. ಹಣ–ಗೂಂಡಾಗಳು ಮತ್ತು ರಾಜಕಾರಣಿಗಳ ನಡುವಿನ ಸಂಬಂಧದ ಅರಿವಿರುವವರಿಗೆ ಈ ಪ್ರಶ್ನೆಗೆ ಉತ್ತರ ಹುಡುಕುವುದು ಕಷ್ಟವೇನೂ ಇಲ್ಲ. ಮೈಕ್ರೋಫೈನಾನ್ಸ್ ಈ ಮೂರು ಪಿಲ್ಲರ್‌ಗಳ ಮೇಲೆ ನಿಂತಿದೆ. ಅದುದರಿಂದಲೇ ಈ ಬಡ್ಡಿ ಮಾಫಿಯಾ ವಿರುದ್ಧ ಹುಸಿ ಹೋರಾಟವನ್ನಷ್ಟೇ ಸರಕಾರ ನಡೆಸುತ್ತಾ ಬರುತ್ತಿದೆ. ಪೂರ್ಣ ಪ್ರಮಾಣದಲ್ಲಿ ಅದನ್ನು ಮಟ್ಟ ಹಾಕಲು ಸರಕಾರಕ್ಕೂ ಸಾಧ್ಯವಿಲ್ಲ ಎನ್ನುವ ಸ್ಥಿತಿಯಿದೆ. ಇದೇ ಸಂದರ್ಭದಲ್ಲಿ ಗ್ರಾಮೀಣ ಮತ್ತು ಪಟ್ಟಣ ಪ್ರದೇಶದಲ್ಲಿ ಈ ಫೈನಾನ್ಸ್‌ಗಳ ಸಾಲವನ್ನೇ ನೆಚ್ಚಿಕೊಂಡು ಕೃಷಿ, ಉದ್ದಿಮೆಗಳನ್ನು ನಡೆಸುವವರಿದ್ದಾರೆ. ಶೋಷಣೆಗೊಳಗಾದರೂ, ಅದರ ವಿರುದ್ಧ ದೂರು ಸಲ್ಲಿಸುವ ಸ್ಥಿತಿಯಲ್ಲಿ ಅವರಿರುವುದಿಲ್ಲ. ಯಾಕೆಂದರೆ, ನಾಳೆಗೆ ತುರ್ತು ಹಣ ಬೇಕಾದಲ್ಲಿ ಅವರಿಗೆ ಈ ಫೈನಾನ್ಸ್ ಗಳಲ್ಲದೇ ಬೇರೆ ಮೂಲಗಳೇ ಇಲ್ಲ. ನೋಟು ನಿಷೇಧ ಮತ್ತು ಲಾಕ್‌ಡೌನ್‌ಗಳ ಬಳಿಕ ಇಡೀ ದೇಶದ ಆರ್ಥಿಕ ಸ್ಥಿತಿ ಚಿಂತಾಜನಕವಾಗಿದೆ. ಆರ್ಥಿಕ ಬಿಕ್ಕಟ್ಟಿನಿಂದ ನೂರಾರು ಕಿರು ಉದ್ದಿಮೆಗಳು ಮುಚ್ಚಿ ಹೋದವು. ಕಟ್ಟಡ ನಿರ್ಮಾಣ ಕಾಮಗಾರಿಗಳಿಗೂ ಭಾರೀ ಹಿನ್ನಡೆಯಾಯಿತು. ನೋಟು ನಿಷೇಧದ ಪರಿಣಾಮವಾಗಿ ಜನರ ಕೈ ಖಾಲಿಯಾದರೆ, ಲಾಕ್‌ಡೌನ್ ಸಂದರ್ಭದಲ್ಲಿ ದೇಶದ ಮಧ್ಯಮ ವರ್ಗ ಸಾಲದ ಸುಳಿಯಲ್ಲಿ ಸಿಲುಕಿಕೊಂಡಿತು. ಲಾಕ್‌ಡೌನ್‌ನಲ್ಲಿ ಕೆಲಸವಿಲ್ಲದೆ ಬಡವರು, ಬಡ್ಡಿಗೆ ಸಾಲ ಪಡೆದು ತಮ್ಮ ಮಕ್ಕಳನ್ನು ಭೂಮಾಲಕರ ತೋಟದ ಕೆಲಸಕ್ಕೆ ಹಚ್ಚಿದರು. ಲಾಕ್‌ಡೌನ್‌ನ ಸಂದರ್ಭದಲ್ಲಿ ಮಾಡಿದ ಬಡ್ಡಿ ಸಾಲದ ಸುಳಿಯಿಂದ ಇಂದಿಗೂ ಹೊರಬರಲಾಗದೆ ಒದ್ದಾಡುತ್ತಿರುವ ಕುಟುಂಬಗಳು ಗ್ರಾಮೀಣ ಪ್ರದೇಶದಲ್ಲಿ ನೂರಾರಿವೆ. ಇತ್ತೀಚಿನ ದಿನಗಳಲ್ಲಿ ಬ್ಯಾಂಕ್‌ಗಳು ಕೂಡ ವಿಶ್ವಾಸಾರ್ಹತೆಯನ್ನು ಕಳೆದುಕೊಂಡಿವೆ. ಬೀಜ, ಗೊಬ್ಬರ ಕೊಳ್ಳಲು ಹಣ ಹೊಂದಾಣಿಕೆಯಾಗದೇ ಇದ್ದರೆ, ಫೈನಾನ್ಸ್ ಗಳ ಮೊರೆ ಹೋಗುವುದು ರೈತರಿಗೆ ಅನಿವಾರ್ಯವಾಗುತ್ತದೆ. ಬ್ಯಾಂಕ್‌ಗಳಲ್ಲಿ ಹಣ ಪಡೆಯಬೇಕಾದರೆ ನೂರಾರು ನಿಯಮಗಳು, ಕಟ್ಟುಪಾಡುಗಳಿವೆ. ಆ ನಿಯಮ, ಕಟ್ಟುಪಾಡುಗಳ ಹಿಂದೆ ಅಲೆದರೆ, ಮಳೆಗಾಲ ಮುಗಿದು ಹೋಗುತ್ತದೆ. ಅದುದರಿಂದ ರೈತರಿಗೆ ಫೈನಾನ್ಸ್‌ಗಳನ್ನು ಸ್ಥಳೀಯ ಲೇವಾದೇವಿ, ಬಡ್ಡಿ ವ್ಯಾಪಾರಿಗಳನ್ನು ನೆಚ್ಚಿಕೊಳ್ಳುವುದು ಅನಿವಾರ್ಯವಾಗುತ್ತದೆ. ಅವರ ತುರ್ತು ಅಗತ್ಯದ ಸಂದರ್ಭದಲ್ಲಿ ಹಣ ಒದಗಿಸಲು ನಮ್ಮ ಸಹಕಾರಿ ಬ್ಯಾಂಕ್‌ಗಳು ಎಲ್ಲಿಯವರೆಗೆ ವಿಫಲವಾಗುತ್ತದೆಯೋ ಅಲ್ಲಿಯವರೆಗೆ ನಮ್ಮ ರೈತರು, ಸಣ್ಣ ಉದ್ದಿಮೆದಾರರು, ಕಿರು ವ್ಯಾಪಾರಿಗಳು ಫೈನಾನ್ಸನ್ನು ನೆಚ್ಚಿಕೊಳ್ಳುವುದು ಅನಿವಾರ್ಯವಾಗುತ್ತದೆ. ಸರಕಾರ ಮೊತ್ತ ಮೊದಲಾಗಿ ಅರ್ಥ ಮಾಡಿಕೊಳ್ಳಬೇಕಾದದ್ದು ಭಾರೀ ಬಡ್ಡಿ, ಚಕ್ರಬಡ್ಡಿಗಳು ಬೀಳುತ್ತವೆ ಎಂದು ಗೊತ್ತಿದ್ದರೂ ಜನಸಾಮಾನ್ಯರು ಈ ಫೈನಾನ್ಸ್‌ಗಳ ಬಲೆಗೆ ಯಾಕೆ ಬೀಳುತ್ತಾರೆ ಎನ್ನುವುದನ್ನು ಅವರ ಅಸಹಾಯಕತೆಯ ಹಿಂದಿರುವವರು ಯಾರು ಫೈನಾನ್ಸ್‌ಗಳನ್ನೆಲ್ಲ ಮುಚ್ಚಿ ಬಿಟ್ಟರೆ ರೈತರು, ಕಾರ್ಮಿಕರ ಸಮಸ್ಯೆ ಪರಿಹಾರವಾಗುತ್ತದೆಯೆ ಬ್ಯಾಂಕ್‌ಗಳು ಸುಲಭದಲ್ಲಿ ಸಾಲಗಳನ್ನು ನೀಡದೇ ಇದ್ದಾಗ, ಬಂಡವಾಳಕ್ಕಾಗಿ ಇವರು ಯಾರನ್ನು ಆಶ್ರಯಿಸಬೇಕು ಮೊತ್ತ ಮೊದಲಾಗಿ ಮಧ್ಯಮ ವರ್ಗದ ಜನರು ಯಾವುದೇ ಉದ್ದಿಮೆ ಅಥವಾ ಕೃಷಿಗಾಗಿ ಫೈನಾನ್ಸ್‌ಗಳನ್ನು ನೆಚ್ಚಿಕೊಳ್ಳದ ಹಾಗೆ ಅವರಿಗೆ ಆರ್ಥಿಕ ನೆರವುಗಳನ್ನು ನೀಡುವ ಕೆಲಸ ತುರ್ತಾಗಿ ಆಗಬೇಕು. ಆ ಆರ್ಥಿಕ ನೆರವುಗಳನ್ನು ನೀಡಲು ನಮ್ಮ ಬ್ಯಾಂಕ್‌ಗಳು, ಸಹಕಾರಿ ಸಂಘಗಳು, ಸರಕಾರದ ವಿವಿಧ ಅಭಿವೃದ್ಧಿ ಪ್ರಾಧಿಕಾರಗಳು ಯಶಸ್ವಿಯಾದಾಗ ಜನಸಾಮಾನ್ಯರು ಫೈನಾನ್ಸ್‌ಗಳನ್ನು ನೆಚ್ಚಿಕೊಳ್ಳುವುದು ಕಡಿಮೆಯಾಗುತ್ತದೆ. ಹಾಗೆಯೇ, ಸಾಲ ನೀಡಿದ ಬಳಿಕ ಅದರ ವಸೂಲಾತಿಗೆ ನಿರ್ಬಂಧ ಹೇರುವುದು ಸಾಧ್ಯವಿಲ್ಲದ ವಿಷಯ. ಯಾಕೆಂದರೆ, ನಮ್ಮ ಸಹಕಾರಿ ಸಂಘಗಳು, ರಾಷ್ಟ್ರೀಕೃತ ಬ್ಯಾಂಕ್‌ಗಳು ಬಡ ರೈತರ ಸಾಲ ವಸೂಲಾತಿಯಲ್ಲಿ ಯಾವ ದಾಕ್ಷಿಣ್ಯವನ್ನೂ ಮಾಡುವುದಿಲ್ಲ. ರಾತ್ರೋರಾತ್ರಿ ಮನೆಯನ್ನು ಜಪ್ತಿ ಮಾಡಿ, ಅವರನ್ನು ಬೀದಿಪಾಲು ಮಾಡುವುದರಲ್ಲಿ ಈ ಬ್ಯಾಂಕ್‌ಗಳೂ ಕುಖ್ಯಾತಿಯನ್ನು ಪಡೆದಿವೆ. ಹೀಗಿರುವಾಗ, ಕೊಟ್ಟ ಸಾಲವನ್ನು ವಸೂಲಿ ಮಾಡಬಾರದು ಎಂದು ಫೈನಾನ್ಸ್‌ಗಳಿಗೆ ನಿರ್ಬಂಧ ವಿಧಿಸುವಂತಿಲ್ಲ.

> **ಮೈಕ್ರೋ ಫೈನಾನ್ಸ್ ಕಿರುಕುಳ ಪ್ರಕರಣಗಳು ಒಂದೊಂದಾಗಿ ಬಹಿರಂಗವಾಗುತ್ತಿರುವಂತೆಯೇ ಸರಕಾರ ಎಚ್ಚೆತ್ತುಕೊಂಡಿದೆ. ಸಾಲಗಾರರ ರಕ್ಷಣೆಗೆ 'ಸುಗ್ರೀವಾಜ್ಞೆ' ಮೂಲಕ ಕಾನೂನು ಜಾರಿಗೊಳಿಸುವ ಇಂಗಿತವನ್ನು ಮುಖ್ಯಮಂತ್ರಿ ವ್ಯಕ್ತಪಡಿಸಿದ್ದಾರೆ. ಬಲವಂತದಿಂದ ಸಾಲ ವಸೂಲಾತಿ ಮಾಡುವವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ, ಸ್ವಯಂ ಪ್ರೇರಿತ ದೂರು ದಾಖಲಿಸಿಕೊಳ್ಳಲು ಪೊಲೀಸರಿಗೆ ಅವಕಾಶ, ನೋಂದಣಿಯಾಗದ ಲೇವಾದೇವಿಗಾರರಿಗೆ ನಿಷೇಧ, ದೂರು ಸಲ್ಲಿಸಲು ಮುಕ್ತ ಅವಕಾಶ, ಸಂಜೆ 5 ಗಂಟೆಯ ಬಳಿಕ ಸಾಲ ವಸೂಲಾತಿಗೆ ನಿಷೇಧ, ಜಿಲ್ಲಾಧಿಕಾರಿ ಕಚೇರಿಯಲ್ಲಿ ಸಹಾಯವಾಣಿ, ವಸೂಲಿಗೆ ತೆರಳುವ ಖಾಸಗಿ ವ್ಯಕ್ತಿಗಳು, ರೌಡಿಶೀಟರ್‌ಗಳ ವಿರುದ್ಧ ಕ್ರಮ, ಅಧಿಕ ಬಡ್ಡಿ ವಸೂಲಿಗೆ ತಡೆ, ಸಾಲದ ಮಿತಿ ನಿರ್ಧಾರ ಇತ್ಯಾದಿಗಳನ್ನು ಕಾನೂನಿನೊಳಗೆ ಒಳಪಡಿಸುವ ನಿರ್ಧಾರಕ್ಕೆ ಸರಕಾರ ಬಂದಿದೆ.**

## ರಾಮಾಯಣ



**ಶ್ರೀ ರಾಮನ ಪಟ್ಟಾಭಿಷೇಕಕ್ಕೆ ಸಕಲ ಜನಗಳೂ ಸಮ್ಮತಿಸಿದ್ದು**

• ಹಿಂದಿನ ಸಂಚಿಕೆಯಿಂದ 78 ನೆಯ ಅಧ್ಯಾಯ

ದಶರಥರಾಯನು ಅವರನ್ನು ಕುರಿತು ಎಲೈ ಪ್ರಜೆಗಳೆ, ನಾನು ಶ್ರೀರಾಮನಿಗೆ ಪಟ್ಟವನ್ನು ಕಟ್ಟಬೇಕೆಂದು ನುಡಿಯಲು ನೀವು ಹಾಗೆ ಮಾಡಬೇಕೆಂದು ಹೇಳುತ್ತೀರಿ. ನಾನು ಧರ್ಮದಿಂದ ರಾಜ್ಯವನ್ನು ಪರಿಪಾಲಿಸುತ್ತಿರಲು ನೀವು ಶ್ರೀರಾಮನು ಪಟ್ಟಾಭಿಷಿಕ್ತನಾಗಿ ಆನೆಯ ಮೇಲೆ ಶ್ವೇತಚ್ಛತ್ರದ ನೆರಳಲ್ಲಿ ಮೆರವಣಿಗೆಯಾಗಿ ಬರುವುದನ್ನು ನೋಡಬೇಕೆಂದು ಹೇಳುತ್ತೀರಿ. ನನಗೆ ಸಂಶಯ ಉಂಟಾಗಿದೆ. ನಿಮ್ಮ ನಿಜವಾದ ಅಭಿಪ್ರಾಯವನ್ನು ನನಗೆ ತಿಳಿಸಬೇಕು ಎಂದು ನುಡಿದನು.

**ಆ ಮಾತನ್ನು ಕೇಳಿ ಸಭೆಯಲ್ಲಿದ್ದ ಜನರು ಹೀಗೆಂದರು:** ★ ಮಹಾರಾಜ, ನಿನ್ನ ಮಗನಾದ ಶ್ರೀರಾಮನಲ್ಲಿ ಅನೇಕ ಕಲ್ಯಾಣಗುಣಗಳುಂಟು. ದೇವೇಂದ್ರನಿಗೆ ಸಮಾನನಾಗಿಯೂ ಅತ್ಯಂತ ಬುದ್ಧಿವಂತನಾಗಿಯೂ ಇರುವ ಆತನ ಕಲ್ಯಾಣಗುಣಗಳು ಸಮಸ್ತ ಜನರನ್ನೂ ಸಂತೋಷಪಡಿಸುವುವು. ಶ್ರೀರಾಮನು ದಿವ್ಯ ಸದ್ಗುಣಗಳಿಂದ ದೇವೇಂದ್ರನಿಗೆ ಸಮಾನನಾದವನು. ವಿನಯಾದಿ ಸುಗುಣಗಳಿಂದ ಇಕ್ಷ್ವಾಕುವಂಶದ ರಾಜರೆಲ್ಲರಿಗೂ ಅಧಿಕನಾದವನು. ಲೋಕದಲ್ಲಿ ಆತನು ಸತ್ಪುರುಷನು, ಸದ್ಧರ್ಮಪರಾಯಣನು. ಆತನಿಂದಲೇ ಧರ್ಮವೂ ಐಶ್ವರ್ಯವೂ ಉಂಟಾಗುವುವು. ಆತನು ಪ್ರಜೆಗಳಿಗೆ ಸಂತೋಷವನ್ನುಂಟುಮಾಡುವಲ್ಲಿ ಚಂದ್ರನಿಗೂ, ಕ್ಷಮೆಯಲ್ಲಿ ನೆಲದಿನಲ್ಲಿ ವಾರ್ಧಕ್ಯವನ್ನೆ ದಿತು. ನಾನು ಅನೇಕ ಸಾವಿರ ವರುಷಗಳು ಬದುಕಿದೆನು. ಈಗ ನನ್ನ ಶರೀರಕ್ಕೆ ವಿಶ್ರಾಂತಿಯನ್ನು ಬಯಸುತ್ತಲಿದ್ದೇನೆ. ಸಜ್ಜನರಾದ ನರೇಂದ್ರರಿಂದ ಧರಿಸಲ್ಪಟ್ಟು ದುಷ್ಟರಾಯರಿಂದ ಭರಿಸಲಶಕ್ಯವಾಗಿ ಮಹತ್ತಾದ ಈ ಭೂಮಿಯ ಭಾರವನ್ನು ಪ್ರಜೆಗಳ ಹಿತಾರ್ಥವಾಗಿ ನನ್ನ ಕುಮಾರನಾದ ಶ್ರೀರಾಮನಲ್ಲಿರಿಸಿ ಭಾರವನ್ನು ಪರಿಹರಿಸಿಕೊಂಡು ಸುಖದಿಂದಿರ ಬೇಕೆಂದು ಬಯಸುತ್ತೇನೆ. ಶ್ರೀರಾಮನು ನನಗಿಂತಲೂ ಅಧಿಕವಾದ ಸದ್ಗುಣಗಳುಳ್ಳವನು. ಪರಾಕ್ರಮದಲ್ಲಿ ದೇವೇಂದ್ರನಿಗೆ ಸಮಾನನು. ಸಮಸ್ತ ಶತ್ರುರಾಯರ ದುರ್ಗಗಳನ್ನು ಜಯಿಸ ಬಲ್ಲವನು. ಪುಷ್ಯನಕ್ಷತ್ರದೊಡನೆ ಕೂಡಿದ ಚಂದ್ರನಂತಿರುವವನು. ಅತ್ಯಂತ ಧರ್ಮಿಷ್ಠನಾದ ಶ್ರೀರಾಮನಿಗೆ ಯುವರಾಜ ಪಟ್ಟವನ್ನು ಕಟ್ಟಬೇಕೆಂದು ಮನಸ್ಸಿನಲ್ಲಿ ಯೋಚಿಸಿದ್ದೇನೆ. ಅವನು ನಿಮಗೆ ಸಮ್ಮತನಾದವನು. ಶಾಶ್ವತವಾದ ತೇಜಸ್ಸುಳ್ಳವನು. ಮೂರು ಲೋಕಗಳನ್ನೂ ರಕ್ಷಿಸಲು ಶಕ್ತನು. ಆದಕಾರಣ ನಿಮಗೆಲ್ಲರಿಗೂ ಶ್ರೇಯಸ್ಸಾಗಬೇಕೆಂದು ಸಮಸ್ತ ಭೂಭಾರವನ್ನು ಶ್ರೀರಾಮನಲ್ಲಿರಿಸಿ ನಾನು ಪ್ರಯಾಸವಿಲ್ಲದೆ ಸುಖವಾಗಿರುತ್ತೇನೆ. ಶ್ರೀರಾಮನು ನಿಮಗೆಲ್ಲರಿಗೂ ರಾಜನಾಗಲಿ. ಈ ವಿಷಯವು ನಿಮಗೆಲ್ಲರಿಗೂ ಸಮ್ಮತವಾದರೆ ನನ್ನ ಮನೋರಥವು ಸಿದ್ಧಿಸುವುದು. ನನಗೆ ಇದೇ ಸೂಕ್ತವಾಗಿ ತೋರುತ್ತದೆ. ನಿಮಗೂ ಒಳ್ಳೆಯದೆಂದು ತೋರಿದರೆ ಸಮ್ಮತಿಸಬಹುದು. ಪರಸ್ಪರ ಆಲೋಚಿಸಿ ಮುಂದಿನ ಕರ್ತವ್ಯವನ್ನು ತಿಳುಹಿಸಿ ಎಂದು ನುಡಿದನು.

**ಮುಂದುವರಿಯುವುದು...**

# ಫೀಲ್ಡ್ ಮಾರ್ಷಲ್ ಜನರಲ್ ಕೆ ಎಂ ಕಾರಿಯಪ್ಪರವರ 126ನೇ ವರ್ಷದ ಜನ್ಮಜಯಂತಿ



**ಕಲಾ ಸಾಹಿತ್ಯ**
**ಕೃಷ್ಣಪ್ಪ**
ಲೇಖಕರು
ಪ್ರಗತಿ ಪರ ಚಿಂತಕ, ವಿಮರ್ಶಕರು



• **ಉದಯವಾಹಿನಿ, ವಿಶೇಷ**

ಫೀಲ್ಡ್ ಮಾರ್ಷಲ್ ಜನರಲ್ ಕಾರ್ಯಪ್ಪ ರವರು ಕೊಡಗು ಜಿಲ್ಲೆಯ ಮಡಿಕೇರಿಯಲ್ಲಿ 1899 ಜನವರಿ 28 ರಂದು ಜನಿಸಿದರು. ತಂದೆ ಮಾದಪ್ಪ,ತಾಯಿ ಕಾವೇರಿ. ಅವರದು ಸುಸಂಸ್ಕೃತ ಕುಟುಂಬ. ಶಿಸ್ತು, ಪ್ರಮಾಣಿಕತೆ, ಮಾನವೀಯ ಗುಣಗಳನ್ನು ಹೊಂದಿದ್ದರು.

ಮಡಿಕೇರಿಯಲ್ಲಿ ಶಾಲಾ ಶಿಕ್ಷಣ ಮುಗಿಸಿ ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿಗೆ ಸೇರಿದರು.ಅವರು ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವಾಗಲೇ ಸೈನ್ಯದಲ್ಲಿ ಅಧಿಕಾರಿಗಳ ಸ್ಥಾನಕ್ಕೆ ಆಯ್ಕೆ ನಡೆಸುವ ವಿಚಾರ ತಿಳಿಯಿತು.ಹಾಗೆ ಆಯ್ಕೆಯಾದ 50 ಯುವಕರಲ್ಲಿ ಇವರು ಒಬ್ಬರು.

ತರಬೇತಿ ಮುಗಿಸಿ 1919 ರಲ್ಲಿ ಸೈನ್ಯದಲ್ಲಿ ಅಧಿಕಾರಿಯಾದರು. 1939 ರಲ್ಲಿ ಭಾರತ ಸೈನ್ಯದಲ್ಲಿ ಪ್ರಪ್ರಥಮ ಬ್ರಿಗೇಡಿಯರ್ ಆದರು. ಬರ್ಮ ಯುದ್ಧದಲ್ಲಿ ಅವರ ಕರ್ತವ್ಯಶ್ರದ್ಧೆ, ದಕ್ಷತೆ, ಶಿಸ್ತು ಹಾಗೂ ಪ್ರಾಮಾಣಕತೆ ಇವುಗಳನ್ನು ಗುರುತಿಸಿ ಆಂಗ್ಲ ಸರ್ಕಾರ ಇವರಿಗೆ ಆರ್ಡರ್ ಆಫ್ ದಿ ಬ್ರಿಟಿಷ್ ಎಂಪೈರ್ ಪ್ರಶಸ್ತಿ ನೀಡಿತು. ಜನರಲ್ ಕಾರಿಯಪ್ಪ ಅವರು ಎರಡನೇ ಮಹಾಯುದ್ದದ ವೇಳೆಯಲ್ಲಿ ಇರಾಕ್, ಸಿರಿಯಾ, ಇರಾನ್, ಬರ್ಮಾ ಯುದ್ಧಗಳಲ್ಲಿ ಭಾಗವಹಿಸಿದರು. ಎರಡನೇ ಮಹಾಯುದ್ಧ ಮುಗಿದ ಮೇಲೆ 1945 ರಲ್ಲಿ ಇವರನ್ನು ಜರ್ಮನಿಗೆ ಕಳಿಸಲಾಯಿತು. ಯುದ್ಧದ ಬೀಕರ ಪರಿಣಾಮದಿಂದಾಗಿ ಜರ್ಮನಿ ದೇಶ ತತ್ತರಿಸಿ ಹೋಗಿತ್ತು. 1947 ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬಂದಿತು. ಆದರೆ ಸ್ವಾತಂತ್ರ್ಯ ಬಂದ ಬೆನ್ನಹಿಂದೆಯೇ ಭಾರತದ ವಿಭಜನೆ,ಕಾಶ್ಮೀರ ಸಮಸ್ಯೆಯನ್ನು ಎದುರಿಸಬೇಕಾಯಿತು.

1948 ರಲ್ಲಿ ಸರ್ಕಾರವು ಅವರನ್ನು ಭಾರತ ಸೈನ್ಯದ ಮಹಾದಂಡನಾಯಕ ರನ್ನಾಗಿ ನೇಮಿಸಿತು. ಆ ದಿನಗಳಲ್ಲಿ ಭೂಸೈನ್ಯ, ನೌಕಾಸೇನೆ, ವಾಯು ಸೈನ್ಯಗಳಿಗೆ ಒಬ್ಬರೇ ಮಹಾದಂಡನಾಯಕರು ಇರುತ್ತಿದ್ದರು.ಅದರ ಜವಾಬ್ದಾರಿಯನ್ನು 1949 ಜನವರಿ 15 ರಂದು ಅಧಿಕಾರ ವಹಿಸಿಕೊಂಡರು. ಅವರ ಅಧಿಕಾರದ ಅವಧಿಯಲ್ಲಿ ಅವರ ಸಂಕಲ್ಪಶಕ್ತಿ, ಮಹತ್ಸಾಧನೆ,ದೇಶದ ಹಿತದೃಷ್ಟಿ ಇವುಗಳಿಂದಾಗಿ ಸೈನ್ಯದಲ್ಲಿ ಉತ್ಸಾಹ, ಕರ್ತವ್ಯ ಶ್ರದ್ಧೆ, ವ್ಯವಸ್ಥೆ ಅರ್ಪಣಾ ಮನೋಭಾವ ಎಲ್ಲಾವೂ ಕೂಡಿ ಭಾರತ ಸೈನ್ಯದ ಗುಣಮಟ್ಟ ಉನ್ನತ ಮಟ್ಟಕ್ಕೆ ಏರಿತು. 1953ರಲ್ಲಿ ಜನರಲ್ ಕಾರಿಯಪ್ಪನವರು ನಿವೃತ್ತರಾದಮೇಲೆ ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್ ಗಳಲ್ಲಿ ಭಾರತದ ಹೈ ಕಮಿಷನರ್ ರಾಗಿದ್ದರು. ಭಾರತದ ರಾಯಭಾರಿಯಾಗಿ ಇವರು ತಮ್ಮ ಕರ್ತವ್ಯವನ್ನು ನಿಷ್ಠೆ, ಶ್ರದ್ಧೆ, ದಕ್ಷತೆ,ಘನತೆಯಿಂದ ನಿರ್ವಹಿಸಿ ಮಾತೃಭೂಮಿಯ ಕೀರ್ತಿ ಹೆಚ್ಚಿಸಿದರು. 1986 ರಲ್ಲಿ ಜನರಲ್ ಕಾರ್ಯಪ್ಪರವರಿಗೆ ಫೀಲ್ಡ್ ಮಾರ್ಷಲ್ ಎನ್ನುವ ಉನ್ನತ ಸೇನಾ ಪ್ರಶಸ್ತಿ ನೀಡಿ ಅವರನ್ನು ಗೌರವಿಸಲಾಯಿತು. ಅನಾರೋಗ್ಯದಿಂದಾಗಿ ಅವರ ದೇಹಸ್ಥಿತಿ ಕ್ಷೀಣಿಸಿ 1993 ಮೇ 15 ರಂದು ತನ್ನ 94 ನೇ ವಯಸ್ಸಿನಲ್ಲಿ ನಿಧನರಾದರು. ಉತ್ಕಟ ದೇಶಾಭಿಮಾನಿಯಾಗಿದ್ದ ಜನರಲ್ ಕಾರಿಯಪ್ಪನವರು ಭಾರತದ ಸೈನಾಧಿಕಾರಿಯಾಗಿ ಯುದ್ಧದಲ್ಲಿ ಭಾಗವಹಿಸಿ ರಾಷ್ಟ್ರ ರಕ್ಷಣೆಯ ಕಾರ್ಯವನ್ನು ಸಮರ್ಥವಾಗಿ ನಿರ್ವಹಿಸಿದರು.

ಇಂತಹ ಮಹಾದಂಡನಾಯಕ ರನ್ನು ಭಾರತೀಯರಾದ ನಾವುಗಳು ಅದರಲ್ಲೂ ಭಾರತೀಯ ಸೇನಾನಿಗಳು ಅವರನ್ನು ಸ್ಮರಿಸಿ, ನೆನೆಯುತ್ತಾ ಅವರ ಧೈರ್ಯಸ್ಥೈರ್ಯ, ಭರವಸೆ, ಸಾಧನೆ ಹಾಗೂ ಆದರ್ಶಗಳನ್ನು ಎಲ್ಲಾರೂ ಪಾಲಿಸಬೇಕು. ಇಂದು ಅವರ 126ನೇ ವರ್ಷದ ಜನ್ಮ ಜಯಂತಿಯನ್ನು ಆಚರಿಸುತ್ತಾ ಅವರ ಆತ್ಮಕ್ಕೆ ಶಾಂತಿ ಸದ್ಗತಿ ದೊರೆಯಲೆಂದು ಆ ಭಗವಂತನಲ್ಲಿ ಪ್ರಾರ್ಥಿಸೋಣ.

> **ಕಾಶ್ಮೀರದ ರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸಿದರು. ಸೈನ್ಯದಲ್ಲಿ ಹಲವಾರು ಅಗತ್ಯ ಸುಧಾರಣೆಗಳನ್ನು ತಂದರು. ಮಿಗಿಲಾಗಿ ನಿಸ್ವಾರ್ಥತೆ,ತ್ಯಾಗ, ಕರ್ತವ್ಯನಿಷ್ಠೆ ,ಶ್ರದ್ಧೆ , ದೇಶಭಕ್ತಿ,ದಕ್ಷತೆ,ಪ್ರೀತಿ, ಸಹಕಾರ, ಸ್ನೇಹ ಇಂಥ ಹತ್ತು ಹಲವು ಆದರ್ಶಗಳನ್ನು ನಾಡಿನ ಯುವಜನಾಂಗಕ್ಕೆ ನೀಡಿದ್ದಾರೆ.**

> **ಸೈನ್ಯದಲ್ಲಿ ಹಲವಾರು ಅಗತ್ಯ ಸುಧಾರಣೆ**

# ಎಲ್ಲಾರನ್ನೂ ಸೆಳೆಯುವ ಶಕ್ತಿ ಸಂಗೀತಕ್ಕೆ ಇದೆ

• **ಉದಯವಾಹಿನಿ ಬೆಂಗಳೂರು**


ಉದಯವಾಹಿನಿ ಚಿತ್ರ

ಎಲ್ಲಾರನ್ನು ಸೆಳೆಯುವ ಶಕ್ತಿ ಸಂಗೀತಕ್ಕೆ ಇದೇ ಎಂದು ಖ್ಯಾತ ದಾಸವಾಣಿ ಗಾಯಕ ವಿಜಯಹಾವನೂರ್ ಹೇಳಿದರು,

ಅವರು ನಿನಾದ ಸಂಸ್ಕೃತಿ ಕಲಾಕೇಂದ್ರವು ಆಯೋಜಿಸಿದ ಗಾನೋಧ್ಯಾನ ತ್ರೈ ಮಾಸಿಕ ವಿಶೇಷ ಮಾಲಿಕೆ –1 ಪ್ರೀತಿಯ ಗಂಗೆ :ಮಲ್ಲಿಗೆಯ ಕವಿ ಕೆ. ಎಸ್. ನರಸಿಂಹ ಸ್ವಾಮಿ ಮತ್ತು ವರಕವಿ ದ. ರಾ. ಬೇಂದ್ರೆಯವರ ಗೀತೆಗಳ ವಿಶೇಷ ಕಾರ್ಯಕ್ರಮಕ್ಕೆ ದೀಪ ಬೆಳಗಿಸಿ ಮಾತನಾಡಿ ಸಂಗೀತಕ್ಕೆ ಮಾರು ಹೋಗದವರು ಯಾರು ಇಲ್ಲವೆಂದರು,


ಶತ ತಬಲಾ ವಾದಕ ಕರ್ನಾಟಕ ಕಲಾಶ್ರೀ ಡಾ, ಸತೀಶ್ ಹಂಪಿಹೊಳಿ ಮುಖ್ಯ ಅಥಿತಿಯಾಗಿ ಪಾಲ್ಗೊಂಡು ಇಂತಹ ಕಾರ್ಯಕ್ರಮಗಳು ಪ್ರತಿಯೊಂದು ಬಡವಣೆಯಲ್ಲೂ ನಡೆಯಬೇಕು ಎಂದರು, ಹಿರಿಯ ಪತ್ರಕರ್ತ ಎನ್ ಎಸ್ ಸುಧೀಂದ್ರ ರಾವ್ ಮಾತನಾಡಿ ನಮ್ಮ ಸಂಸ್ಕೃತಿ ಪರಂಪರೆಯನ್ನು ಉಳಿಸಿ ಬೆಳಸಲು ಈ ರೀತಿಯ ಕಾರ್ಯಕ್ರಮ ಹೆಚ್ಚು ಹೆಚ್ಚಾಗಿ ನಡೆಯಬೇಕು ಎಂದರು, ಸುಮಧುರ ಗಾಯನವನ್ನು ಕೊಂಡಾಡಿದ ಅವರು ಬಿಗ್ ಬಾಸ್ ನಂತಹ ಕಾರ್ಯಕ್ರಮದ ಫೈನಲ್ ನಡೆಯುವಂತಹ ಸಮಯದಲ್ಲಿ ಕಾರ್ಯಕ್ರಮ ನಡೆಯುತ್ತಿರುವ ಸಭಾಂಗಣವು ಕಿಕ್ಕಿರಿದು ತುಂಬಿರುವುದು ನೋಡಿದರೆ ನಮ್ಮ ಸಂಗೀತಕ್ಕಿರುವ ಶಕ್ತಿ ಎಂಥದು ಎಂಬುದಕ್ಕೆ ಸಾಕ್ಷಿ ಎಂದರು,

ಸಮಾರಂಭದಲ್ಲಿ ಗೀತಾಗಾಯನದಲ್ಲಿ ದೀವಾಕರ ಕಶ್ಯಪ್, ಹರೀಶ್ ನರಸಿಂಹ, ಗುರುರಾಜ್ ಹೊಳೆನರಸೀಪುರ, ಸ್ಮಿತಾ ವಸಂತ ಅವರು ನರಸಿಂಹಸ್ವಾಮಿ ಮತ್ತು ಬೇಂದ್ರೆ ಅಜ್ಜನವರ ಗೀತೆಗಳನ್ನು ಹಾಡಿ ರಂಜಿಸಿದರು,

ನಿನಾದ ಸಂಸ್ಕೃತಿ ಕಲಾಕೇಂದ್ರ ಮತ್ತು ಅತ್ರೇಯ ಕಲಾ ಸಂಪದ ಟ್ರಸ್ಟ್ ವಿದ್ಯಾರ್ಥಿಗಳು ಸಮೂಹ ಗಾಯನದಲ್ಲಿ ರಂಜಿಸಿದರೆ ಇವರಿಗೆ ಹಿಮ್ಮೆಳದಲ್ಲಿ ಕೀಬೋರ್ಡ್ ನಲ್ಲಿ ದುಷ್ಯಂತ್ ಮತ್ತು ರಮೇಶ್, ತಬಲಾದಲ್ಲಿ ಗುರುರಾಜ್ ಹೊಳೆನರಸೀಪುರ, ಡೋಲಕ್‌ನಲ್ಲಿ ಲೋಕೇಶ್ ಕೊಳಲಿನಲ್ಲಿ ವಸಂತ್ ಕುಮಾರ್ ಹಾಗು ರಿದಂ ಪ್ಯಾಡ್ ನಲ್ಲಿ ಎಂ ಪಿ ಶ್ರೀನಿವಾಸ್ ಸಾತ್ ನೀಡಿದರು.

ಕಾರ್ಯಕ್ರಮವನ್ನು ತಮ್ಮ ಸುಮಧುರ ಮಾತುಗಳಿಂದ ನಿರೂಪಿಸಿ ಕಾರ್ಯಕ್ರಮಕ್ಕೆ ಸಂಧ್ಯಾ ಭಟ್ ಕಳೆಗಟ್ಟಿದರು,

# ಟ್ರೇಡ್ ಶೋ 2025ರಲ್ಲಿ ಹೊಸ 1000 ಪಾದರಕ್ಷೆಗಳನ್ನು ಬಿಡುಗಡೆ ಮಾಡಿದ ವಾಕರೂ


ಉದಯವಾಹಿನಿ ಚಿತ್ರ

• **ಉದಯವಾಹಿನಿ ಬೆಂಗಳೂರು**

ಅತ್ಯಂತ ಪ್ರತಿಷ್ಠಿತ ಪಾದರಕ್ಷೆ ಬ್ರಾಂಡ್ ಆಗಿರುವ ವಾಕರೂ ಸಂಸ್ಥೆಯು ಬೆಂಗಳೂರಿನಲ್ಲಿ ನಡೆದ ಟ್ರೇಡ್ ಶೋ 2025ರಲ್ಲಿ 1000ಕ್ಕೂ ಹೆಚ್ಚು ಹೊಸ ಪಾದರಕ್ಷೆಗಳನ್ನು ಬಿಡುಗಡೆ ಮಾಡಿದೆ. ಕರ್ನಾಟಕದಾದ್ಯಂತ ಇರುವ ಗ್ರಾಹಕರ ಬದುಕು ಮತ್ತು ಆದ್ಯತೆಗಳಿಗೆ ಅನುಗುಣವಾಗಿ ಈ ಹೊಸ ಪಾದರಕ್ಷೆಗಳನ್ನು ವಿನ್ಯಾಸಗೊಳಿಸಲಾಗಿದೆ. ಕರ್ನಾಟಕದ ಗ್ರಾಹಕರ ಇಷ್ಟಗಳನ್ನು ಗಮನಿಸಿ ಈ ಕೆಳಗಿನ ವಿಭಾಗಗಳಲ್ಲಿ ಹೊಸ ಉತ್ಪನ್ನಗಳನ್ನು ವಾಕರೂ ಬಿಡುಗಡೆ ಮಾಡಿದೆ:

**ವಾಕರೂ ಮತ್ತು ವಾಕರೂ++** ಅರ್ಬನೋಸ್ ರೇಂಜ್: ಸೊಗಸಾದ ಫುಟ್ ಬೆಡ್‌ಗಳು ಮತ್ತು ಆರ್ಕ್ ಬೆಂಬಲವನ್ನು ಒದಗಿಸುವ ಈ ಉತ್ಪನ್ನವನ್ನು ಅತ್ಯುತ್ತಮ ಸೌಕರ್ಯ ಮತ್ತು ಸ್ಟೈಲ್ ಒದಗಿಸಲು ವಿನ್ಯಾಸಗೊಳಿಸಲಾಗಿದೆ.

★ **ವಾಕರೂ ಫ್ಲಿಪ್- ಫ್ಲಾಪ್ಸ್:** ಈ ಹಗುರವಾದ, ಟ್ರೆಂಡಿ ಉತ್ಪನ್ನಗಳು ಮತ್ತು ಹವಾಯಿ ಪಾದರಕ್ಷೆಗಳು ಈ ವಿಭಾಗದಲ್ಲಿ ದೊರೆಯಲಿದ್ದು, ಈ ಉತ್ಪನ್ನಗಳನ್ನು ಯುವ ಗ್ರಾಹಕರ ಮನಸೆಳೆಯಲು ರಚಿಸಲಾಗಿದೆ.

★ **ವಾಕರೂ ಸ್ಪೋರ್ಟ್ಸ್:** ಆಕ್ಟಿವ್ ಜೀವನಶೈಲಿ ಹೊಂದಿರುವವರಿಗೆಂದೇ ವಿನ್ಯಾಸಗೊಳಿಸಲಾದ ಈ ಶೂಗಳು ಅತ್ಯಾಧುನಿಕ ಫೀಚರ್ ಗಳನ್ನು ಹೊಂದಿವೆ. ನಿಮ್ಮ ಪಾದವನ್ನು ಅರಿಯಿರಿ ಎಂಬ ಯೋಜನೆಯ ಮೂಲಕ ಪ್ರತಿಯೊಬ್ಬ ಭಾರತೀಯರಿಗೆ ಸೂಕ್ತವಾಗಿ ಹೊಂದುವ ಪಾದರಕ್ಷೆಗಳನ್ನು ರಚಿಸಲು ವಾಕರೂ ಸಂಸ್ಥೆಯು ಫೂಟ್ ಸ್ಕ್ಯಾನಿಂಗ್ ತಂತ್ರಜ್ಞಾನವನ್ನು ಬಳಸಿಕೊಂಡು ಪಾದದ ರಚನೆಯನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡುತ್ತಿದೆ. ವಾಕರೂ ಕರ್ನಾಟಕದಲ್ಲಿ 3 ಉತ್ಪಾದನಾ ಘಟಕಗಳನ್ನು ಹೊಂದಿದ್ದು, ನಾವು 12000ಕ್ಕೂ ಹೆಚ್ಚು ರಿಟೇಲ್ ವ್ಯಾಪಾರಿಗಳ ಮೂಲಕ ಪಾದರಕ್ಷೆಗಳನ್ನು ಗ್ರಾಹಕರಿಗೆ ಒದಗಿಸುತ್ತೇವೆ. ಉದ್ಯಮದಲ್ಲಿ ಸದಾ ಮುಂಚೂಣಿಯಲ್ಲಿರುವ ಮತ್ತು ಗ್ರಾಹಕರಿಗೆ ಉತ್ತಮ ಗುಣಮಟ್ಟದ, ಫ್ಯಾಶನ್ ಗೆ ಹೊಂದುವ ಮತ್ತು ಆರಾಮದಾಯಕ ಪಾದರಕ್ಷೆಗಳನ್ನು ಒದಗಿಸುವ ಸಂಸ್ಥೆಯ ಉದ್ದೇಶಕ್ಕೆ ವಾಕರೂ ಸಂಸ್ಥೆಯ ಉತ್ಪನ್ನ ಶ್ರೇಣಿ ಮತ್ತು ಹೊಸ ಯೋಜನೆಗಳು ಅತ್ಯುತ್ತಮ ಉದಾಹರಣೆಗಳಾಗಿವೆ.

> **ಈ ಸಂದರ್ಭದಲ್ಲಿ ಹಾಜರಿದ್ದು ಮಾತನಾಡಿದ ವಾಕರೂ ಸಂಸ್ಥೆಯ ಎಂಡಿ ಶ್ರೀ ನೌಶಾದ್ ಅವರು, ''ನಮ್ಮ ಗ್ರಾಹಕರ ಅಗತ್ಯಗಳನ್ನು ಪೂರೈಸಲು ಮತ್ತು ಅವರ ಫ್ಯಾಶನ್ ಆಸೆಗಳನ್ನು ಪೂರೈಸಲು ಉತ್ತಮ ಪಾದರಕ್ಷೆಗಳನ್ನು ಒದಗಿಸುವ ಮೂಲಕ ಕರ್ನಾಟಕದ ಆದ್ಯತೆಯ ಬ್ರ್ಯಾಂಡ್ ಆಗುವ ಗುರಿಯನ್ನು ನಾವು ಹೊಂದಿದ್ದೇವೆ. ನಮ್ಮ 'ನಿಮ್ಮ ಪಾದವನ್ನು ಅರಿಯಿರಿ' ಯೋಜನೆಯ ಮೂಲಕ ಸರಿಯಾದ ಬಯೋಮೆಕಾನಿಕ್ಸ್ ಅನ್ನು ಬೆಂಬಲಿಸುವ ಪಾದರಕ್ಷೆ ಉತ್ಪಗಳನ್ನು ಅಭಿವೃದ್ಧಿಪಡಿಸಲು ನಾವು ಬದ್ಧರಾಗಿದ್ದೇವೆ'' ಎಂದು ಹೇಳಿದರು.**

# ಕಣ್ಣೀರಿಡುವ ನೀನೆ ನೀನೆ ರಾಜಕುಮಾರ ಗೀತೆ

• **ಉದಯವಾಹಿನಿ ಬೆಂಗಳೂರು**


ಉದಯವಾಹಿನಿ ಚಿತ್ರ

ದಿವಂಗತ ಲೆಜೆಂಡರಿ ನಟ ಮತ್ತು ಗಾಯಕ ಡಾ.ಪುನೀತ್ ರಾಜ್ ಕುಮಾರ್ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿಯೊಂದಿಗೆ ಗೋಪಾಲನ್ ಸೂಪರ್ ಸಿಂಗರ್ ಸೀಸನ್ 5 ರ ಗ್ರ್ಯಾಂಡ್ ಫಿನಾಲೆ ಮುಕ್ತಾಯವಾಯಿತು. ಸಂಜೆಯ ವಿಶೇಷವೆಂದರೆ ಪುನೀತ್ ರಾಜ್‌ಕುಮಾರ್ ಅವರ ಪತ್ನಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ಅವರ ಸಮ್ಮುಖದಲ್ಲಿ ''ನೀನೇ ನೀನೆ ರಾಜಕುಮಾರ'' ಗೀತೆಯನ್ನು ಬಿಡುಗಡೆ ಮಾಡಲಾಯಿತು. ಖ್ಯಾತ ಸಂಗೀತ ನಿರ್ದೇಶಕ ಸುನಿಲ್ ಕೋಶಿ ಸಂಯೋಜಿಸಿದ ಮತ್ತು ಜಾಂಕಾರ್ ಮ್ಯೂಸಿಕ್ ಲೇಬಲ್ ಅಡಿಯಲ್ಲಿ ಡಾ. ಸಿ. ಪ್ರಭಾಕರ್ ನಿರ್ಮಿಸಿದ ಈ ಗೀತೆಯು ಪುನೀತ್ ಅವರ ಪರಂಪರೆಯನ್ನು ಮತ್ತು ಕನ್ನಡ ಚಿತ್ರರಂಗ ಮತ್ತು ಸಂಗೀತದ ಮೇಲೆ ಸಕಾರಾತ್ಮಕ ಪ್ರಭಾವವನ್ನು ಆಚರಿಸಿತು. ಪಿ ಆರ್ ಕೆ ಸ್ಟುಡಿಯೋಸ್‌ನಲ್ಲಿ ಜೂನಿಯರ್ ಮತ್ತು ಸೀನಿಯರ್ ವಿಭಾಗಗಳ ಫೈನಲಿಸ್ಟ್‌ಗಳೊಂದಿಗೆ ರೆಕಾರ್ಡ್ ಮಾಡಲಾದ ಗೀತೆ, ಕನ್ನಡೇತರ ಗಾಯಕರನ್ನು ಒಳಗೊಂಡಿರುವ ಮೂಲಕ ಒಳಗೊಳ್ಳುವಿಕೆಯನ್ನು ಪ್ರತಿಬಿಂಬಿಸುತ್ತದೆ. ಸ್ಪರ್ಧಿಗಳು ಪುನೀತ್ ಅವರ ಸಾಂಪ್ರದಾಯಿಕ ಹಾಡುಗಳನ್ನು ಪ್ರದರ್ಶಿಸಿದರು, ಸ್ಮರಣೀಯ ಸಂಜೆಯನ್ನು ರಚಿಸಿದರು. ಗೋಪಾಲನ್ ಎಂಟರ್‌ಪ್ರೈಸಸ್‌ನ ಮಾರ್ಕೆಟಿಂಗ್ ಮುಖ್ಯಸ್ಥ ಆರ್. ವಿಕ್ರಮ್ ಸಿಂಗ್, ಪವರ್ ಸ್ಟಾರ್‌ನ ನಿರಂತರ ಪರಂಪರೆಯನ್ನು ಆಚರಿಸುವಾಗ ಉದಯೋನ್ಮುಖ ಪ್ರತಿಭೆಗಳನ್ನು ಪೋಷಿಸುವ ಕಾರ್ಯಕ್ರಮದ ಬದ್ಧತೆಯನ್ನು ಒತ್ತಿ ಹೇಳಿದರು

> **ಮ್ಯೂಸಿಕಲ್ ಗ್ರ್ಯಾಂಡ್ ಫಿನಾಲೆಯಲ್ಲಿ ಅಭಿಮಾನಿಗಳು**

# 528 ನಿವಾಸಿಗಳಿಗೆ ಅದ್ದೂರಿಯಾಗಿ ಸ್ವಾಗತ ಕೋರಿದ ಕಾಸಾಗ್ರ್ಯಾಂಡ್

• **ಉದಯವಾಹಿನಿ ಬೆಂಗಳೂರು**


ಉದಯವಾಹಿನಿ ಚಿತ್ರ

ಕಾಸಾಗ್ರ್ಯಾಂಡ್ ಸಂಸ್ಥೆಯು ತನ್ನ ಹೊಸ ಪ್ರಾಜೆಕ್ಟ್ ಕಾಸಾಗ್ರ್ಯಾಂಡ್ ಬೌಲೆವಾರ್ಡ್ ನಲ್ಲಿ ಅದ್ದೂರಿಯಾಗಿ ಸ್ವಾಗತ ಕಾರ್ಯಕ್ರಮ ಆಯೋಜಿಸಿದ್ದು,

ಈ ಸಂದರ್ಭದಲ್ಲಿ ಕಾಸಾಗ್ರ್ಯಾಂಡ್ ಬೌಲೆವಾರ್ಡ್ ನ 528 ಹೊಸ ಮನೆ ಮಾಲೀಕರನ್ನು ಸ್ವಾಗತಿಸಲಾಯಿತು. ಈ ಅಪೂರ್ವ ಸಮಾರಂಭದಲ್ಲಿ 500ಕ್ಕೂ ಹೆಚ್ಚು ಮನೆಮಾಲೀಕರು, ಅವರ ಕುಟುಂಬ ಸದಸ್ಯರು ಮತ್ತು ಸ್ನೇಹಿತರು ಸೇರಿದಂತೆ 1000ಕ್ಕೂ ಹೆಚ್ಚು ಮಂದಿ ಬಾಗವಹಿಸಿದ್ದರು.

ಸಂಭ್ರಮದಿಂದ ನಡೆದ ಈ ಸಮಾರಂಭದಲ್ಲಿ ನೃತ್ಯ ಕಾರ್ಯಕ್ರಮ, ಜಾದೂ ಕಾಯಕ್ರಮಗಳು ಸೇರಿದಂತೆ ಎಲ್ಲಾ ವಯಸ್ಸಿನವರಿಗೂ ಇಷ್ಟವಾಗುವ ಹಲವಾರು ಕಾರ್ಯಕ್ರಮಗಳು ನಡೆದುವು. ಜೊತೆ ನೆರೆಹೊರೆಯವರೊಂದಿಗೆ ಸಂವಹನ ನಡೆಸುವ ಅವಕಾಶವು ಕೂಡ ಒದಗಿಬಂದಿತ್ತು. ವಿಶೇಷ ಸ್ಟಾಲ್ ಗಳ ಮೂಲಕ ಆಹಾರ ಖಾದ್ಯಗಳು ಲಭ್ಯವಾಗುವಂತೆ ನೋಡಿಕೊಳ್ಳಲಾಗಿತ್ತು. ಸಂಗೀತ, ನೃತ್ಯ ಸೇರಿಕೊಂಡು ಮಂತ್ರಮುಗ್ಧಗೊಳಿಸುವ ವಾತಾವರಣ ನಿರ್ಮಾಣವಾಗಿತ್ತು. ಈ ಸಂದರ್ಭದಲ್ಲಿ ಕಾಸಾಗ್ರ್ಯಾಂಡ್ ಬೌಲೆವಾರ್ಡ್ ನ ವಿಶಾಲವಾದ ಅಪಾರ್ಟ್‌ಮೆಂಟ್‌ಗಳು, 75ಕ್ಕೂ ಹೆಚ್ಚು ವಿಶಿಷ್ಟ ಸೌಕರ್ಯಗಳು , 7.6 ಎಕರೆ ವಿಸ್ತಾರದಲ್ಲಿ ಹರಡಿಕೊಂಡಿರುವ ಹಸಿರು ಪ್ರದೇಶಗಳನ್ನು ವೀಕ್ಷಿಸಲು ಅನುವು ಮಾಡಿಕೊಡಲಾಯಿತು.

ಕ್ಲೋರಿನ್ ಮುಕ್ತ ಈಜುಕೊಳ, ವಿಟಮಿನ್ ಸಿ ಒದಗಿಸುವ ಸಾಮರ್ಥ್ಯದ ಶವರ್‌ಗಳು, ಗಾಳಿಯಾಡುವ ಕ್ಲಬ್ ಹೌಸ್, ಸಸ್ಯರಾಶಿ ಹೊಂದಿರುವ ಏರ್ ಪೆವಿಲಿಯನ್ ಗಳು ಮತ್ತು ಸ್ಮಾರ್ಟ್ ಹೋಮ್ ಸಿಸ್ಟಮ್ ಗಳಂತಹ ಹಲವಾರು ವೈಶಿಷ್ಟ್ಯಗಳನ್ನು ಪರಿಚಯಿಸಲಾಯಿತು.

ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲಾರೂ ಕಾಸಾಗ್ರ್ಯಾಂಡ್ ಬೌಲೆವಾರ್ಡ್ ನ ವಾತಾವರಣವನ್ನು ಸವಿಯುವ ಅವಕಾಶ ಪಡೆದರು. ವಿಶೇಷವಾಗಿ ಅಕ್ಕಪಕ್ಕದವರೆಲ್ಲಾ ಒಂದೆಡೆ ಸೇರಿ ಮಾತನಾಡಲು, ಬಾಂಧವ್ಯ ಬೆಸೆಯಲು ಅವಕಾಶ ಗಳಿಸಿಕೊಂಡರು. ಸಹಬಾಳ್ವೆಯ ಸಂತೋಷವನ್ನು ಪಡೆದರು. ತನ್ನ ನಿವಾಸಿಗಳಿಗೆ ಅತ್ಯುತ್ತಮ ಮನೆಯನ್ನು ಒದಗಿಸುವ ಭರವಸೆ ನೀಡಿರುವ ಕಾಸಾಗ್ರ್ಯಾಂಡ್ ಸಂಸ್ಥೆಯು ಸುಂದರವಾದ ಮನೆಗಳನ್ನಷ್ಟೇ ಒದಗಿಸುತ್ತಿಲ್ಲ, ಅದರ ಜೊತೆಗೆ ಅದ್ಭುತವಾದ ವಾತಾವರಣವನ್ನು ಕೂಡ ಒದಗಿಸುತ್ತದೆ. ಈ ಮೂಲಕ ಮನೇ ಮಾಲೀಕರು ಸಂತೋಷ, ಆನಂದ ಮತ್ತು ನೆಮ್ಮದಿಯುಕ್ತ ಪರಿಸರದ ಖುಷಿಯನ್ನು ಅನುಭವಿಸಬಹುದಾಗಿದೆ.

# ಶ್ರೀನಿವಾಸರಾವ್ ಅಧ್ಯಕ್ಷರಾಗಿ, ಗಣೇಶ್ ಉಪಾಧ್ಯಕ್ಷರಾಗಿ ಅವಿರೋಧ ಆಯ್ಕೆ


ಉದಯವಾಹಿನಿ ಚಿತ್ರ

• **ಉದಯವಾಹಿನಿ ಬೆಂಗಳೂರು**

ಸರ್ ಎಂ ವಿಶ್ವೇಶ್ವರಯ್ಯ ಕೋ –ಆಪರೇಟಿವ್ ಬ್ಯಾಂಕ್ ನ ಆಡಳಿತ ಮಂಡಳಿ ಚುನಾವಣೆಯಲ್ಲಿ ಎಸ್. ಎಸ್. ಶ್ರೀನಿವಾಸರಾವ್ ಅಧ್ಯಕ್ಷರಾಗಿ, ಎಲ್. ಗಣೇಶ್ ಉಪಾಧ್ಯಕ್ಷರಾಗಿ ಅವಿರೋಧ ಆಯ್ಕೆಯಾಗಿದ್ದಾರೆ, ನಡೆದ ಸಭೆಯಲ್ಲಿ ಚುನಾವಣಾಧಿಕಾರಿ ಚಂದ್ರಶೇಖರ ಅವರು ವಿಜೇತ ಸದಸ್ಯರಿಗೆ ಪ್ರಮಾಣ ಪತ್ರವನ್ನು ವಿತರಿಸಿ, ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಲು ಸೂಚಿಸಿದರು, ಅಧ್ಯಕ್ಷ ಸ್ಥಾನಕ್ಕೆ ಶ್ರೀನಿವಾಸರಾವ್ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಗಣೇಶ್ ಅವರು ನಾಮಪತ್ರ ಸಲ್ಲಿಸಿದ್ದು ಬೇರೆ ಯಾರು ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿ ಚಂದ್ರಶೇಖರ ಅವರು ಇವರಿಬ್ಬರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಘೋಷಿಸಿದರು, ಸಂದರ್ಭದಲ್ಲಿ ಹದಿನೈದು ಪ್ರತಿನಿಧಿಗಳ ಪೈಕಿ ಹನ್ನೊಂದು ಸದಸ್ಯರು ಹಾಜರಿದ್ದರು,

# ಉದಯೋನ್ಮುಖ ಕಲಾವಿದೆಯರಾದ ತನ್ವಿ–ಪೂರ್ವಿ –ಸಿಂಧೂರ ಗೆಜ್ಜೆ ನಮನ



**ಕಲಾ ಸಾಹಿತ್ಯ**
**ವೈ.ಕೆ. ಸಂಧ್ಯಾ ಶರ್ಮ**
ಲೇಖಕರು
ರಂಗಕರ್ಮಿ ಹಾಗೂ ನೃತ್ಯ ನಾಟಕಗಳ ವಿಮರ್ಶಕರು

• **ಉದಯವಾಹಿನಿ, ವಿಶೇಷ**

ಬೆಂಗಳೂರಿನ ಖ್ಯಾತ ಶಿವಾನುಗ್ರಹ ಲಲಿತಕಲಾ ಟ್ರಸ್ಟ್ –ನೃತ್ಯಶಾಲೆಯನಿರ್ದೇಶಕಿ– ಉತ್ತಮ ನಾಟ್ಯಗುರು ವಿದುಷಿ. ಲತಾ ರಮೇಶ್ ಅವರ ನುರಿತ ಗರಡಿಯಲ್ಲಿ ತರಬೇತುಗೊಂಡ ಉದಯೋನ್ಮುಖ ನೃತ್ಯಕಲಾವಿದೆಯರಾದ ಹದಿಮೂರು ವಯೋಮಾನದ ಕು. ತನ್ವಿ–ಪೂರ್ವಿ–ಸಿಂಧೂರ ಪ್ರತಿಭಾನ್ವಿತರು.

ಲತಾ ರಮೇಶ್ ಅವರಲ್ಲಿ ಬದ್ಧತೆಯಿಂದ ಸುಮಾರು ಏಳು ವರ್ಷಗಳಿಂದ ಕಲಾಕ್ಷೇತ್ರ ಶೈಲಿಯಲ್ಲಿ ನಾಟ್ಯಶಿಕ್ಷಣ ಪಡೆಯುತ್ತಿದ್ದು ಮೂವರೂ ಕರ್ನಾಟಕ ಸರ್ಕಾರದ ಜ್ಯೂನಿಯರ್ ನೃತ್ಯ ಪರೀಕ್ಷೆಗಳು ಮತ್ತು ಗಂಧರ್ವ ಮಹಾ ವಿದ್ಯಾಲಯದ ಪ್ರಾರಂಭಿಕ, ಪ್ರವೇಶಿಕಾ ಪ್ರಥಮ –ಪೂರ್ಣ ಪರೀಕ್ಷೆಗಳಲ್ಲಿ ಜಯಶೀಲರಾಗಿದ್ದಾರೆ. ಜೊತೆಗೆ ನೃತ್ಯದ ಎಲ್ಲಾ ಆಯಾಮಗಳನ್ನೂ ಅರಿಯುವ ದಿಸೆಯಲ್ಲಿ ಬಹು ಆಸಕ್ತಿಯಿಂದ ಪರಿಶ್ರಮಿಸಿ ಇದೀಗ ಕಲಾಪ್ರೇಮಿಗಳ ಸಮ್ಮುಖ ತಮ್ಮ ಕಲಾಪ್ರದರ್ಶನ ನೀಡಲು ಸನ್ನದ್ಧರಾಗಿದ್ದಾರೆ. ಇದೇ ತಿಂಗಳ 31 ಶುಕ್ರವಾರ ಸಂಜೆ 5.30 ಗಂಟೆಗೆ ಜೆ.ಸಿ.ರಸ್ತೆಯ ರವೀಂದ್ರ ಕಲಾಕ್ಷೇತ್ರದಲ್ಲಿ ವಿದ್ಯುಕ್ತವಾಗಿ ತಮ್ಮ 'ಗೆಜ್ಜೆನಮನ'ವನ್ನು ಸಲ್ಲಿಸಲಿದ್ದಾರೆ. ಈ ಮೂವರು ಕನ್ಯಾತ್ರಯರ ಕಲಾಸೊಬಗನ್ನು ಕಣ್ತುಂಬಿಕೊಳ್ಳಲು ಎಲ್ಲಾರಿಗೂ ಸುಸ್ವಾಗತ.

ಮೂವರು ಕಲಾಭ್ಯಾಸಿಗಳಿಗೂ ನೃತ್ಯ ಅವರ ಬಾಲ್ಯದ ಒಲವು. ಬಹು ಸಣ್ಣವಯಸ್ಸಿನಲ್ಲೇ ಇವರು ವಿದುಷಿ. ಲತಾ ರಮೇಶ್ ಅವರಲ್ಲಿ ಭರತನಾಟ್ಯ ಕಲಿಯಲು ಸೇರ್ಪಡೆಯಾಗಿ ಬಹು ಆಸಕ್ತಿಯಿಂದ ಗುರುಗಳ ಮಾರ್ಗದರ್ಶನದಲ್ಲಿ ನಿಷ್ಠೆಯಿಂದ ಕಲಿಯುತ್ತಿದ್ದಾರೆ. ಶ್ರೀಮತಿ ಶ್ರೀದೇವಿ ಪಿ. ರಾವ್ ಮತ್ತು ಶ್ರೀ ಪ್ರಶಾಂತ್ ಕುಮಾರ್ ಪುತ್ರಿ ತನ್ವಿ ಪಿ. ರಾವ್ ಬಹುಮುಖ ಪ್ರತಿಭೆ. ಸುದರ್ಶನ ವಿದ್ಯಾಮಂದಿರ ಸಂಸ್ಥೆಯಲ್ಲಿ ಎಂಟನೆಯ ತರಗತಿಯ ಮಾದರಿ ವಿದ್ಯಾರ್ಥಿನಿಯಾಗಿದ್ದಾಳೆ. ಕ್ರೀಡೆಯಲ್ಲೂ ಮುಂದಿರುವ ಇವಳು ಸಾಹಿತ್ಯಾಸಕ್ತೆ–ಎನ್.ಸಿ.ಸಿ ಯಲ್ಲಿ ಕೆಡೆಟ್, ಮಾರ್ಷಿಯಲ್ ಆರ್ಟ್ಸ್ ಅಭ್ಯಾಸಿ.


ಉದಯವಾಹಿನಿ ಚಿತ್ರ

ಶ್ರೀ ಸರ್ವೇಶ್ ಟಿ.ವಿ. ಮತ್ತು ಎನ್. ಚೈತ್ರ ದಂಪತಿಗಳ ಮಗಳಾದ ಪೂರ್ವಿ ಸರ್ವೇಶ್ ಷೇರ್ ವುಡ್ ಹೈಸ್ಕೂಲಿನಲ್ಲಿ ಎಂಟನೆಯ ತರಗತಿಯಲ್ಲಿ ಟಾಪರ್ ಆಗಿದ್ದಾಳೆ. ಫ್ರೀ ಸ್ಟೈಲ್ ಶೈಲಿಯಲ್ಲೂ ನರ್ತಿಸುವ ಉತ್ತಮ ನೃತ್ಯಗಾರ್ತಿ. ಕೀಬೋರ್ಡ್ ನುಡಿಸುವ ಇವಳು, ಕ್ರೀಡೆಯಲ್ಲೂ ಅನೇಕ ಬಹುಮಾನಗಳನ್ನು ಪಡೆದಿದ್ದು, ಗುರುಗಳ ತಂಡದೊಂದಿಗೆ ನೃತ್ಯ ಕಾರ್ಯಕ್ರಮಗಳನ್ನು ನೀಡಿದ್ದಾಳೆ.

ಶ್ರೀ ಎಸ್.ಎಂ. ನಾಗರಾಜ್ ಮತ್ತು ಲತಾ ನಾಗರಾಜರ ಮಗಳಾದ ಸಿಂಧೂರ ಎನ್. ರಾವ್ ಗ್ರೀನ್ ವ್ಯಾಲಿಶಾಲೆಯಲ್ಲಿ 8 ನೆಯ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದು, ಕ್ಲಾಸಿನಲ್ಲಿ ಟಾಪರ್ ಆಗಿದ್ದಾಳೆ. ಬಹುಮುಖ ಪ್ರತಿಭೆಯಾದ ಇವಳು ಗಾಯಕಿ, ಚಿತ್ರಕಲಾವಿದೆ, ಓದುವ ಹವ್ಯಾಸವುಳ್ಳ ಇವಳು ಕೀಬೋರ್ಡ್ ಕೂಡ ನುಡಿಸುತ್ತಾಳೆ .

ಮೂವರು ಪ್ರತಿಭಾವಂತ ಮಕ್ಕಳೂ ಲತಾ ಅವರ ಮಾರ್ಗದರ್ಶನದಲ್ಲಿ ಭರವಸೆಯ ಕಲಾವಿದರಾಗುವ ಎಲ್ಲಾ ಲಕ್ಷಣಗಳನ್ನೂ ತೋರಿದ್ದು , ಗುರು–ಶಿಷ್ಯೆಯರಿಗೆ ಅಭಿನಂದನೆಗಳು.

# ಟ್ರಂಪ್‌ಗೆ ಮಾನವೀಯತೆಯ ಪಾಠ ಮಾಡಿದ ಕೊಲಂಬಿಯಾ ಅಧ್ಯಕ್ಷ

## ನಿರ್ಬಂಧ ಬೆದರಿಕೆ ಹಿನ್ನೆಲೆಯಲ್ಲಿ ತಣ್ಣಗಾದ ಗುಸ್ತಾವೊ ಪೆಟ್ರೋ, ಅಕ್ರಮ ವಲಸಿಗರನ್ನು ಹೊರದಬ್ಬುತ್ತಿರುವ ಟ್ರಂಪ್

ಟ್ರಂಪ್ ನಡೆ ಖಂಡನೆ

**ಬೊಗೋಟಾ:** ಅಕ್ರಮ ವಲಸಿಗರ ಗಡಿಪಾರು ಪ್ರಕ್ರಿಯೆ ಚಾಲನೆ ನೀಡಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ, ಕೊಲಂಬಿಯಾ ಅಧ್ಯಕ್ಷ ಗುಸ್ತಾವೊ ಪೆಟ್ರೋ ಮಾನವೀಯತೆಯ ಪಾಠ ಮಾಡಿದ್ದಾರೆ. ಅಲ್ಲದೇ ಟ್ರಂಪ್ ಅವರ ದುರಾಸೆಯ ಕಾರಣದಿಂದಾಗಿ ಇಡೀ ಮಾನವ ಕುಲವೇ ಅಳಿದು ಹೋಗುವ ಅಪಾಯದಲ್ಲಿದೆ ಎಂದು ಪೆಟ್ರೋ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಅಕ್ರಮ ವಲಸಿಗರನ್ನು ಹೊತ್ತು ಕೊಲಂಬಿಯಾದ ರಾಜಧಾನಿ ಬೊಗೋಟಾಗೆ ಬಂದಿಳಿದ ಎರಡು ಅಮೆರಿಕನ್ ವಿಮಾನಗಳಿಗೆ, ಪೆಟ್ರೋ ಸೂಚನೆಯಂತೆ ಲ್ಯಾಂಡಿಂಗ್ ಅನುಮತಿ ನಿರಾಕರಿಸಲಾಗಿತ್ತು. ಇದಕ್ಕೆ ತೀಕ್ಷ್ಣವಾಗಿ ಪ್ರತಿಕ್ರಿಯೆ ನೀಡಿದ್ದ ಡೊನಾಲ್ಡ್ ಟ್ರಂಪ್, ಕೊಲಂಬಿಯಾ ಭಾರೀ ಬೆಲೆ ತೆರಬೇಕಾಗಲಿದೆ ಎಂದು ಎಚ್ಚರಿಸಿದ್ದರು. ಈ ಘಟನೆಗೆ ಪ್ರತಿಕ್ರಿಯೆ ನೀಡಿರುವ ಕೊಲಂಬಿಯಾ ಅಧ್ಯಕ್ಷ ಗುಸ್ತಾವೊ ಪೆಟ್ರೋ, ಅಮೆರಿಕ, ಡೊನಾಲ್ಡ್ ಟ್ರಂಪ್ ಅವರು ನಮ್ಮನ್ನು ಆಳುವ ಕನಸನ್ನು ಬಿಡುವುದು ಒಳಿತು. ಎಂದು ಗುಡುಗಿದ್ದಾರೆ. ಅಮೆರಿಕದ ಅಧ್ಯಕ್ಷರು ಕೊಲಂಬಿಯಾದ ವಲಸಿಗರನ್ನು ಅಪರಾಧಿಗಳಂತೆ ನೋಡುತ್ತಿರುವುದು ಸರಿಯಲ್ಲ, ನಾವು ನಮ್ಮ ನಾಗರಿಕರನ್ನು ಗೌರವದಿಂದ ವಾಪಸ್ ಕರೆಸಿಕೊಳ್ಳಲು ಆಗತ್ಯ ಬಿದ್ದರೆ ಅಧ್ಯಕ್ಷೀಯ ವಿಮಾನವನ್ನು ಕಳುಹಿಸಲೂ ಸಿದ್ಧರಿದ್ದೇವೆ. ಆದರೆ ಟ್ರಂಪ್ ತಮ್ಮ ದುರಾಸೆಯಿಂದಾಗಿ ಇಡೀ ಮಾನವ ಕುಲವನ್ನೇ ಅಳಿಸಿ ಹಾಕುವ ಧಾವಂತದಲ್ಲಿದ್ದಾರೆ.. ಎಂದು ಗುಸ್ತಾವೊ ಪೆಟ್ರೋ ತೀವ್ರವಾಗಿ ಕಿಡಿಕಾರಿದ್ದಾರೆ. ನನಗೆ ಒಂದು ದಿನ ನನ್ನ ವಿಸ್ಕಿ ಗ್ಲಾಸ್ ಜೊತೆಗೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೊಂದಿಗೆ ಕುಳಿತು ಹರಟೆ ಹಾಕುವ ಬಯಕೆ ಇದೆ. ಆದರೆ ಟ್ರಂಪ್ ಅವರು ನನ್ನನ್ನು ತಮ್ಮ ಸಮಾನ ಮನುಷ್ಯ ಎಂದು ಪರಿಗಣಿಸುವುದಿಲ್ಲ, ಹಾಗೆಯೇ ನಾನು ಮನುಷ್ಯರನ್ನು ಆರ್ಥಿಕ, ಜನಾಂಗೀಯ ಮತ್ತು ವರ್ಣದ ಆಧಾರದ ಮೇಲೆ ವರ್ಗೀಕರಿಸುವ ಸಿದ್ಧಾಂತವನ್ನು ಒಪ್ಪುವುದಿಲ್ಲ. ಹೀಗಾಗಿ ನಾವಿಬ್ಬರೂ ಎಂದಿಗೂ ಒಟ್ಟಿಗೆ ಕುಳಿತು ವಿಸ್ಕಿ ಕುಡಿಯುವ ಸಂದರ್ಭ ಬರುವುದಿಲ್ಲ. ಎಂದು ಕೊಲಂಬಿಯಾದ ಅಧ್ಯಕ್ಷರು ಮಾರ್ಮಿಕವಾಗಿ ಹೇಳಿದ್ದಾರೆ. ಡೊನಾಲ್ಡ್ ಟ್ರಂಪ್ ಲ್ಯಾಟಿನ್ ಅಮೆರಿಕದ ಅಕ್ರಮ ವಲಸಿಗರನ್ನು ಅಪರಾಧಿಗಳಂತೆ ಕಾಣುತ್ತಿದ್ದಾರೆ. ಕೊಲಂಬಿಯಾ ಒಂದರಲ್ಲೇ ಅಮೆರಿಕದ ಸುಮಾರು 15,000ಕ್ಕೂ ಹೆಚ್ಚು ದಾಖಲೆರಹಿತ ಅಮೆರಿಕನ್ ನಾಗರಿಕರಿದ್ದಾರೆ. ಆದರೆ ನಾವೆಂದೂ ಅವರೊಂದಿಗೆ ಅಮಾನವೀಯವಾಗಿ ವರ್ತಿಸಿಲ್ಲ. ಮನುಷ್ಯರನ್ನು ಮನುಷ್ಯರಂತೆ ಪರಿಗಣಿಸುವುದು ಹೇಗೆಂದು ನಮಗೆ ಗೊತ್ತಿದೆ. ಎಂದು ಗುಸ್ತಾವೊ ಪೆಟ್ರೋ ಅಮೆರಿಕದ ಅಧ್ಯಕ್ಷರಿಗೆ ತಿರುಗೇಟು ನೀಡಿದ್ದಾರೆ. ಸದ್ಯ ಅಮೆರಿಕದಿಂದ ಅಕ್ರಮ ವಲಸಿಗರನ್ನು ಸ್ವೀಕರಿಸಲು ಕೊಲಂಬಿಯಾ ಹಸಿರು ನಿಶಾನೆ ತೋರಿದ್ದು, ಅಮೆರಿಕದ ಕೆಂಗೆಣ್ಣಿಗೆ ಗುರಿಯಾಗುವುದರಿಂದ ತಪ್ಪಿಸಿಕೊಂಡಿದೆ.



ಈ ಕುರಿತು ಮಾತನಾಡಿರುವ ಕೊಲಂಬಿಯಾ ವಿದೇಶಾಂಗ ಸಚಿವ ಲೂಯಿಸ್ ಗಿಲ್ಬರ್ಟೊ ಮುರಿಲ್ಲೊ, ಅಮೆರಿದಿಂದ ಮರಳುತ್ತಿರುವ ಅಕ್ರಮ ವಲಸಿಗರನ್ನು ಸ್ವೀಕರಿಸಲಾಗುತ್ತಿದೆ ಎಂದು ಸ್ಪಷ್ಟಪಡಿಸಿದ್ದಾರೆ. ಮಿಲಿಟರಿ ವಿಮಾನದ ಬದಲಿಗೆ ನಾಗರಿಕ ವಿಮಾನದಲ್ಲಿ ವಲಸಿಗರನ್ನು ಕಳುಹಿಸಬೇಕು ಎಂಬ ಕೊಲಂಬಿಯಾ ಅಧ್ಯಕ್ಷ ಗುಸ್ತಾವೊ ಪೆಟ್ರೋ ಮನವಿಗೆ ಸೊಪ್ಪು ಹಾಕದ ಡೊನಾಲ್ಡ್ ಟ್ರಂಪ್, ಮಿಲಿಟರಿ ವಿಮಾನಗಳಲ್ಲೇ ಅಕ್ರಮ ವಲಸಿಗರನ್ನು ಆಯಾ ದೇಶಗಳಿಗೆ ವಾಪಸ್ ಕಳುಹಿಸುತ್ತಿದ್ದಾರೆ. ಸದ್ಯ ಅಕ್ರಮ ವಲಸಿಗರನ್ನು ಸ್ವೀಕರಿಸುವ ಕೊಲಂಬಿಯಾ ನಿರ್ಧಾರವನ್ನು ಸ್ವಾಗತಿಸಿರುವ ಶ್ವೇತಭವನ, ಲ್ಯಾಟಿನ್ ಅಮೆರಿಕ ದೇಶದದ ಮೇಲೆ ವಿಧಿಸಿದ್ದ ನಿರ್ಬಂಧವನ್ನು ಹಿಂಪಡೆಯುವುದಾಗಿ ಸ್ಪಷ್ಟಪಡಿಸಿದೆ.

**ಇನ್ನು ಟ್ರಂಪ್ ಆಡಳಿತವನ್ನು ಎದುರು ಹಾಕಿಕೊಂಡ ಸಮಾಜವಾದಿ ಅಧ್ಯಕ್ಷ ಗುಸ್ತಾವೊ ಪೆಟ್ರೋ ವಿರುದ್ಧ, ಕೊಲಂಬಿಯಾದ ಬಲಪಂಥೀಯ ಪಕ್ಷಗಳು ಆರೋಪಗಳ ಸುರಿಮಳೆಗೈದಿವೆ. ಈ ಕುರಿತು ಮಾತನಾಡಿರುವ ಮಾಜಿ ಅಧ್ಯಕ್ಷ ಇವಾನ್ ಡ್ಯೂಕ್, ಅಮೆರಿಕದ ಮಿಲಿಟರಿ ವಿಮಾನಗಳನ್ನು ತಡೆಯುವ ಮೂಲಕ ಪೆಟ್ರೋ ಭಾರೀ ಬೇಜವಾಬ್ದಾರಿತನ ಮೆರೆದಿದ್ದಾರೆ. ಇದರಿಂದ ಸಿಟ್ಟಾಗಿರುವ ಅಮೆರಿಕ ಕೊಲಂಬಿಯಾದ ಮೇಲೆ ವಿಧಿಸಿರುವ ನಿರ್ಬಂಧಗಳು ದೇಶದಲ್ಲಿ ಭಾರೀ ಮಾನವೀಯ ಬಿಕ್ಕಟ್ಟನ್ನು ಸೃಷ್ಟಿಸಲಿದೆ**

**- ಗುಸ್ತಾವೊ ಪೆಟ್ರೋ ಕೊಲಂಬಿಯಾ ಅಧ್ಯಕ್ಷ**

**ಅಕ್ರಮ ವಲಸಿಗರ ಗಡಿಪಾರು ಪ್ರಕ್ರಿಯೆಗೆ ಚಾಲನೆ ನೀಡಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ, ಕೊಲಂಬಿಯಾ ಅಧ್ಯಕ್ಷ ಗುಸ್ತಾವೊ ಪೆಟ್ರೋ ಮಾನವೀಯತೆಯ ಪಾಠ ಮಾಡಿದ್ದಾರೆ. ಅಕ್ರಮ ವಲಸಿಗರನ್ನು ಹೊತ್ತ ಅಮೆರಿಕದ ಮಿಲಿಟರಿ ವಿಮಾನದ ಕೊಲಂಬಿಯಾ ಪ್ರವೇಶಕ್ಕೆ ತಡೆ ನೀಡಿದ್ದ ಗುಸ್ತಾವೊ ಪೆಟ್ರೋ, ಭಾರೀ ಒತ್ತಡದ ಬಳಿಕ ಅಕ್ರಮ ವಲಸಿಗರನ್ನು ಸ್ವೀಕರಿಸಲು ಅನುಮತಿ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಕೊಲಂಬಿಯಾದ ಮೇಲೆ ವಿಧಿಸಿದ್ದ ನಿರ್ಬಂಧವನ್ನು ಟ್ರಂಪ್ ಆಡಳಿತ ಹಿಂಪಡೆದಿರುವುದಾಗಿ ಶ್ವೇತಭವನ ಮಾಹಿತಿ ನೀಡಿದೆ.**

# ನನ್ನದು ಭಾರತೀಯ ಡಿಎನ್‌ಎ; ಇಂಡೋನೇಷ್ಯಾ ಅಧ್ಯಕ್ಷ

**ನವದೆಹಲಿ:** ನನ್ನ ಪೂರ್ವಜರು ಭಾರತೀಯರು ಹಾಗಾಗಿ ನನ್ನೊಳಗೂ ಇಲ್ಲಿನ ಡಿಎನ್‌ಎ ಇದೆ ಎಂದು ಇಂಡೋನೇಷ್ಯಾ ಅಧ್ಯಕ್ಷ ಪ್ರಬೋವೊ ಸುಬಿಯಾಂಟೋ ತಿಳಿಸಿದ್ದಾರೆ. ಈ ಬಾರಿ ಗಣರಾಜ್ಯೋತ್ಸವದ ಮುಖ್ಯ ಅತಿಥಿಯಾಗಿ ಭಾರತಕ್ಕೆ ಆಗಮಿಸಿದ್ದ ಅವರು, ರಾಷ್ಟ್ರಪತಿ ದ್ರೌಪದಿ ಮುರ್ಮು ಆಯೋಜಿಸಿದ್ದ ಗೌರವಾರ್ಥ ಭೋಜನ ಕೂಟದ ಸಂದರ್ಭದಲ್ಲಿ ತಮ ಮನದಾಳದ ಮಾತನ್ನಾಡಿದ್ದಾರೆ. ಕೆಲವು ವಾರಗಳ ಹಿಂದೆ, ನಾನು ನನ್ನ ಜೆನೆಟಿಕ್ ಸೀಕ್ವೆನ್ಸಿಂಗ್ ಪರೀಕ್ಷೆ, ಡಿಎನ್‌ಎ ಪರೀಕ್ಷೆಯನ್ನು ಮಾಡಿದ್ದೇನೆ, ಅದು ನನ್ನ ಡಿಎನ್‌ಎ ಭಾರತೀಯ ಎಂದು ತಿಳಿದುಬಂದಿದೆ.

ನಾನು ಭಾರತೀಯ ಸಂಗೀತವನ್ನು ಕೇಳಿದಾಗ ನಾನು ನೃತ್ಯ ಮಾಡಲು ಪ್ರಾರಂಭಿಸುತ್ತೇನೆ ಎಂದು ಅವರು ಹೇಳಿದ್ದಾರೆ. ಅಧ್ಯಕ್ಷ ಸುಬಿಯಾಂತೋ ಅವರ ಮಾತು ಕೇಳಿ ಪ್ರಧಾನಿ ನರೇಂದ್ರ ಮೋದಿ ಮತ್ತು ಉಪಾಧ್ಯಕ್ಷ ಜಗದೀಪ್ ಧಂಖರ್ ಸೇರಿದಂತೆ ಅತಿಥಿಗಳು ನಗಲು ಪ್ರಾರಂಭಿಸಿದರು. ಭಾರತದ



76ನೇ ಗಣರಾಜ್ಯೋತ್ಸವದ ಮುಖ್ಯ ಅತಿಥಿಯಾಗಿ ದೆಹಲಿಗೆ ಬಂದಿದ್ದ ಸುಬಿಯಾಂಟೋ ಉಭಯ ದೇಶಗಳ ನಡುವಿನ ನಿರಂತರ ಸಾಂಸ್ಕೃತಿಕ ಮತ್ತು ಐತಿಹಾಸಿಕ ಬಾಂಧವ್ಯದ ಕುರಿತು ಮಾತನಾಡಿದರು. ಉಭಯ ದೇಶಗಳ ನಡುವಿನ ಪಾರಂಪರಿಕ ಪರಂಪರೆಗೆ ಒತ್ತು ನೀಡಿದ ಅವರು, ನಮ ಭಾಷೆಯ ಬಹುಮುಖ್ಯ ಭಾಗ ಸಂಸ್ಕೃತದಿಂದ ಬಂದಿದೆ. ಅನೇಕ ಇಂಡೋನೇಷಿಯನ್ ಹೆಸರುಗಳು ಸಂಸ್ಕೃತದಲ್ಲಿವೆ. ನಮ ದೈನಂದಿನ ಜೀವನದಲ್ಲಿ, ಪ್ರಾಚೀನ ಭಾರತೀಯ ನಾಗರಿಕತೆಯ ಪ್ರಭಾವವು ತುಂಬಾ ಪ್ರಬಲವಾಗಿದೆ ಎಂದು ಹೇಳಿದರು. ಇಂಡೋನೇಷ್ಯಾದ ಅಧ್ಯಕ್ಷರು ಸಹ ಪ್ರಧಾನಿ ಮೋದಿಯವರ ನಾಯಕತ್ವವನ್ನು ಶ್ಲಾಘಿಸಿದರು, ಇದು ಸ್ಫೂರ್ತಿದಾಯಕ ಎಂದು ಬಣ್ಣಿಸಿದರು. ಭಾರತದಲ್ಲಿರುವುದಕ್ಕೆ ನನಗೆ ತುಂಬಾ ಹೆಮ್ಮೆಯಾಗುತ್ತಿದೆ ಎಂದು ಅವರು ಹೇಳಿದರು.

**ನಾನು ವೃತ್ತಿಪರ ರಾಜಕಾರಣಿಯೂ ಅಲ್ಲ, ಉತ್ತಮ ರಾಜತಾಂತ್ರಿಕನೂ ಅಲ್ಲ, ನನ್ನ ಮನದಾಳದಲ್ಲಿರುವುದನ್ನು ಹೇಳುತ್ತೇನೆ. ನಾನು ಇಲ್ಲಿಗೆ ಬಂದು ಕೆಲವು ದಿನಗಳಾಗಿವೆ, ಆದರೆ ಪ್ರಧಾನಿ ಮೋದಿಯವರ ನಾಯಕತ್ವ ಮತ್ತು ಬದ್ಧತೆಯಿಂದ ಬಹಳಷ್ಟು ಕಲಿತಿದ್ದೇನೆ ಎಂದರು. ಪ್ರಧಾನಿ ಮೋದಿಯವರ ನಾಯಕತ್ವ, ಬಡತನ ನಿರ್ಮೂಲನೆಗೆ ನಿಮ ಬದ್ಧತೆ, ಅಂಚಿನಲ್ಲಿರುವ ಜನರು ಮತ್ತು ಸಮಾಜದ ದುರ್ಬಲ ವರ್ಗದವರಿಗೆ ಸಹಾಯ ಮಾಡುವುದು ನಮಗೆ ಸ್ಫೂರ್ತಿಯಾಗಿದೆ ಎಂದಿದ್ದಾರೆ.**

# ಸಂವಿಧಾನ ಬದಲಿಸಿ ಮನುಸ್ಮೃತಿ ಮರುಪರಿಚಯಿಸುವ ಷಡ್ಯಂತ್ರ

**ಮುಂಬೈ:** ಪಂಜಾಬ್‌ನ ಅಮೃತಸರದಲ್ಲಿ ಗಣರಾಜ್ಯೋತ್ಸವ ದಿನ ದುಷ್ಕರ್ಮಿಗಳು ಅಂಬೇಡ್ಕರ್ ಪ್ರತಿಮೆಗೆ ಹಾನಿ ಮಾಡಿರುವುದರ ಕುರಿತು ಪ್ರತಿಕ್ರಿಯಿಸಿರುವ ವಂಚಿತ್ ಬಹು ಜನ ಅಘಾಡಿ ಪಕ್ಷದ ಮುಖ್ಯಸ್ಥ ಪ್ರಕಾಶ್ ಅಂಬೇಡ್ಕರ್, ಸಂವಿಧಾನ ಬದಲಿಸಿ ಮನುಸ್ಮೃತಿ ಮರು ಪರಿಚಯಿಸಲು ರಾಷ್ಟ್ರದಾದ್ಯಂತ ದೊಡ್ಡ ಷಡ್ಯಂತ್ರ ನಡೆಯುತ್ತಿದೆ ಎಂದು ಹೇಳಿದ್ದಾರೆ.



ದೇಶದಾದ್ಯಂತ ಸಂವಿಧಾನ ಮತ್ತು ಅಂಬೇಡ್ಕರ್ ಪ್ರತಿಮೆ ಧ್ವಂಸ ಪ್ರಕರಣಗಳು ಹೆಚ್ಚುತ್ತಿದ್ದು, ಈ ಬಗ್ಗೆ ಸೂಕ್ತ ತನಿಖೆಯಾಗಬೇಕು ಎಂದು ಒತ್ತಾಯಿಸಿದ್ದಾರೆ.

ಸಂವಿಧಾನ ಬದಲಿಸಿ ಮನುಸ್ಮೃತಿ ಪರಿಚಯಿಸಲು ಷಡ್ಯಂತ್ರ ನಡೆಯುತ್ತಿದೆ. ಸಂವಿಧಾನ ಮತ್ತು ಅಂಬೇಡ್ಕರ್ ಪ್ರತಿಮೆಗಳನ್ನು ಧ್ವಂಸ ಮಾಡುತ್ತಿರುವುದು ಇದಕ್ಕೆ ನಿದರ್ಶನವಾಗಿದೆ ಎಂದು ಹೇಳಿದ್ದಾರೆ. ಅಂಬೇಡ್ಕರ್ ಪ್ರತಿಮೆಗೆ ಹಾನಿ ಮಾಡುವುದು ಕ್ರಿಮಿನಲ್ ಕೃತ್ಯಕ್ಕಿಂತ ದೊಡ್ಡದು. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಾಮಾಜಿಕ ಸುಧಾರಣೆ, ರಾಜಕೀಯ ತತ್ವಶಾಸ್ತ್ರ, ಶ್ರೀಮಂತ ಪರಂಪರೆಯನ್ನು ತಿರಸ್ಕರಿಸುವವರಿಂದ ಇಂತಹ ಕೆಲಸಗಳು ನಡೆಯುತ್ತಿವೆ ಎಂದು ಅಸಮಾಧಾನ ಹೊರಹಾಕಿದ್ದಾರೆ. ಇಂತಹ ಘಟನೆಗಳು ಆಘಾತ ಉಂಟು ಮಾಡುತ್ತಿವೆ.

ಆದರೆ ಇದಕ್ಕಿಂತಲೂ ಆಘಾತವಾಗುತ್ತಿ ರುವುದು ಅಂಬೇಡ್ಕರ್ ಅಧ್ಯಕ್ಷತೆಯಲ್ಲಿ ರಚಿಸಲಾದ ಸಂವಿಧಾನವನ್ನು ಭಾರತವು ಅಂಗೀಕರಿಸಿದ ದಿನವಾದ, ವಸಾಹತುಶಾಹಿ, ಮನುಸ್ಮೃತಿ ಆಡಳಿತದಿಂದ ಮುಕ್ತ ಗೊಂಡ ದಿನವಾದ ಗಣರಾಜ್ಯೋತ್ಸವದ ದಿನವೇ ಅಂಬೇ ಡ್ಕರ್ ಪ್ರತಿಮೆಗೆ ಹಾನಿಮಾಡಲಾಗಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಎಎಪಿ ನೇತೃತ್ವದ ಪಂಜಾಬ್ ಸರ್ಕಾರವು ದುಷ್ಕರ್ಮಿಗಳ ವಿರುದ್ಧ ಕಠಿಣ ಕ್ರಮಕೊಳ್ಳುವ ಮೂಲಕ ಇಂತಹ ಘಟನೆಗಳು ಮರುಕಳಿಸದಂತೆ ಎಚ್ಚರವಹಿಸಬೇಕು' ಎಂದು ಆಗ್ರಹಿಸಿದ್ದಾರೆ.

# ಉತ್ತರ ಗಾಜಾದ ಗಡಿ ತೆರೆದ ಇಸ್ರೇಲ್

**ಡೇರ್ ಅಲ್ ಬಾಲಾ:** ಊರು ಸೇರುವ ತವಕ, ಮುಖದಲ್ಲಿ ಅತೀವ ಸಂತಸ, ತಮ್ಮ ಬಳಿ ಅಳಿದು ಉಳಿದ ವಸ್ತುಗಳನ್ನು ಸುತ್ತಿಕೊಂಡು, ಕುಟುಂಬ ದವರೊಂದಿಗೆ ಕಾಲ್ನಡಿಗೆಯಲ್ಲಿ ಸಾವಿರಾರು ಪ್ಯಾಲೆಸ್ಟೀನಿಯನ್ನರು ನೆಟ್‌ಜರಿಮ್ ಕಾರಿಡಾರ್ ಮೂಲಕ ಉತ್ತರ ಗಾಜಾವನ್ನು ತಲುಪುತ್ತಿದ್ದಾರೆ.



ದಕ್ಷಿಣ ಗಾಜಾದ ಭಾಗಗಳಲ್ಲಿ ವಿವಿಧ ನಿರಾಶ್ರಿತರ ಶಿಬಿರಗಳಲ್ಲಿ ಉಳಿದುಕೊಂಡಿದ್ದ ಜನರು ಭಾನುವಾರದ ಹೊತ್ತಿಗೆ ನೆಟ್‌ಜರಿಮ್ ಕಾರಿಡಾರ್ ಬಳಿ ಜಮಾಯಿಸಲು ಶುರುವಿಟ್ಟಿದ್ದರು. ಆದರೆ, ಗಾಜಾ ಗಡಿಯನ್ನು ಇಸ್ರೇಲ್ ತೆರದಿರಲಿಲ್ಲ. ರಾತ್ರಿ ಇಡೀ ಕೊರೆಯುವ ಚಳಿಯಲ್ಲಿಯೇ ಗಾಜಾ ಜನರು ಕಾದು ಕುಳಿತಿದ್ದರು. ಹಮಾಸ್ ಬಂಡುಕೋರ ಸಂಘಟನೆಯು ಒಪ್ಪಂದದಂತೆ ಒತ್ತೆಯಾಳುಗಳನ್ನು ಬಿಡುಗಡೆ ಮಾಡುತ್ತಿಲ್ಲ ಎಂದು ಇಸ್ರೇಲ್ ಆರೋಪಿಸಿತ್ತು. ಒಂದೇ ರಾತ್ರಿಯಲ್ಲಿ ಈ ಸಮಸ್ಯೆಯನ್ನು ಮಧ್ಯವರ್ತಿಗಳು ನಿವಾರಿಸಿದ್ದಾರೆ. ಈ ಕಾರಣದಿಂದ ಸೋಮವಾರ ಬೆಳಿಗ್ಗೆ 7ರ ಸುಮಾರಿಗೆ ಯಾವುದೇ ಪರಿಶೀಲನೆ ಇಲ್ಲದೆ ಗಾಜಾ ಜನರು ತಮ್ಮ ಊರು ಸೇರುತ್ತಿದ್ದಾರೆ.

15 ತಿಂಗಳ ಸುದೀರ್ಘ ಯುದ್ಧವು ಉತ್ತರ ಗಾಜಾವನ್ನು ಸಂಪೂರ್ಣವಾಗಿ ನಾಶ ಮಾಡಿದೆ. ತಮ್ಮ ಮನೆ ಅಥವಾ ಮನೆಯ ಕುರುಹು ಕೂಡ ಇಲ್ಲ ಎನ್ನುವ ಸತ್ಯ ತಿಳಿದಿದ್ದರೂ ಜನರು ಅತೀವ ಉತ್ಸಾಹದಲ್ಲಿ ಮರಳುತ್ತಿದ್ದಾರೆ. ಉತ್ತರ ಗಾಜಾದ ಬಹುಪಾಲು ಜನರು ಊರು ತೊರೆದಿದ್ದರು ಕೆಲವರು ಅಲ್ಲಿಯೇ ಇದ್ದರು. ತಮ್ಮ ಕುಟುಂಬಸ್ಥರನ್ನು ಮತ್ತೊಮ್ಮೆ ನೋಡಿದ ಖುಷಿಯಲ್ಲಿ, ತಮ್ಮವರನ್ನು ಅಪ್ಪಿಕೊಂಡು ಬರಮಾಡಿಕೊಳ್ಳುತ್ತಿದ್ದಾರೆ.

# ಮಹಾರಾಷ್ಟ್ರದಲ್ಲಿ ಜಿಬಿಎಸ್ ಸೋಂಕಿಗೆ ಒಳಗಾಗಿದ್ದ ಶಂಕಿತ ವ್ಯಕ್ತಿ ಸಾವು

**ಪುಣೆ:** ಮಹಾರಾಷ್ಟ್ರದ ಸೋಲಾಪುರ ಜಿಲ್ಲೆಯಲ್ಲಿ ಗುಯಿಲಿನ್-ಬಾರೆ ಸಿಂಡ್ರೋಮ್ (ಜಿಬಿಎಸ್) ಸೋಂಕಿಗೆ ಒಳಗಾದ ಶಂಕಿತ ವ್ಯಕ್ತಿಯೊಬ್ಬರು ಸಾವನ್ನಪ್ಪಿದ್ದಾರೆ. ಜಿಬಿಎಸ್ ತುಗುಲಿದೆ ಎಂದು ಶಂಕಿಸಲಾಗಿ ಮಹಾರಾಷ್ಟ್ರದಲ್ಲಿ ಇದು ಬಹುಶಃ ಮೊದಲ ಸಾವು ಎಂದು ಆರೋಗ್ಯ ಅಧಿಕಾರಿಗಳು ತಿಳಿಸಿದ್ದಾರೆ. ಈ ನಡುವೆ ಪುಣೆಯಲ್ಲಿ ನರ ಅಸ್ವಸ್ಥೆ ರೋಗಿಗಳ ಸಂಖ್ಯೆ 100 ದಾಟಿದೆ. ಸೋಲಾಪುರದ ಮೂಲದ ವ್ಯಕ್ತಿ ಪುಣೆಗೆ ಬಂದಿದ್ದರು, ಅಲ್ಲಿ ಅವರಿಗೆ ಈ ಕಾಯಿಲೆ ತಗುಲಿದೆ ಎಂದು ಶಂಕಿಸಲಾಗಿದೆ,ಆದರೆ ಇದರ ಬಗ್ಗೆ ಹೆಚ್ಚಿನ ವಿವರಗಳನ್ನುನೀಡಿಲ್ಲ ಪುಣೆಯಲ್ಲಿ ಪ್ರಸ್ತುತಜಿಬಿಎಸ್ ಪ್ರಕರಣಗಳ ಸಂಖ್ಯೆ 101 ಕ್ಕೆ ಏರಿದೆ, ಇದರಲ್ಲಿ 68 ಪುರುಷರು ಮತ್ತು 33 ಮಹಿಳೆಯರು ಇದ್ದಾರೆ. ಈ ಪೈಕಿ 16 ರೋಗಿಗಳು ವೆಂಟಿಲೇಟರ್‌ನಲ್ಲಿದ್ದಾರೆ



**ಏತನ್ಮಧ್ಯೆ, ಕ್ಷಿಪ್ರ ಪ್ರತಿಕ್ರಿಯೆ ವೈದ್ಯಕೀಯ ತಂಡ ಮತ್ತು ಪುಣೆ ಮಹಾನಗರ ಪಾಲಿಕೆಯ ಆರೋಗ್ಯ ಇಲಾಖೆಯು ಇಲ್ಲಿನ ಸಿಂಹ ಗಡ್ ರಸ್ತೆ ಪ್ರದೇಶಗಳಲ್ಲಿ ತಪಾಸಣೆ ಮುಂದುವರಿಸಿದೆ.ಪುಣೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 15,761, ಚಿಂಚ್‌ವಾಡ್ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 3,719 ಮತ್ತು ಜಿಲ್ಲೆಯ ಗ್ರಾಮೀಣ ಪ್ರದೇಶ ಗಳಲ್ಲಿ 6,098 ಮನೆಗಳು ಸೇರಿದಂತೆ ಒಟ್ಟು 25,578 ಮನೆಗಳನ್ನು ಇಲ್ಲಿಯವರೆಗೆ ಸಮೀಕ್ಷೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ.**

ರಾಜ್ಯ ಆರೋಗ್ಯ ಇಲಾಖೆಯ ಅಧಿಕಾರಿ ತಿಳಿಸಿದ್ದಾರೆ.

ಈ ರೋಗ ಅಪರೂಪವಾಗಿದ್ದು, ಇದು ದೇಹ ಹಠಾತ್ ಮರಗಟ್ಟುವಿಕೆ ಮತ್ತು ಸ್ನಾಯು ದೌರ್ಬಲ್ಯವನ್ನು ಉಂಟುಮಾಡುತ್ತದೆ, ಇದರಲ್ಲಿ ಕೈಕಾಲುಗಳಲ್ಲಿ ತೀವ್ರ ದೌರ್ಬಲ್ಯ, ಸಡಿಲ ಚಲನೆಗಳು ಇತ್ಯಾದಿ ಲಕ್ಷಣಗಳು ಕಂಡುಬರುತ್ತವೆ. ಬ್ಯಾಕ್ಟೀರಿಯಾ ಮತ್ತು ವೈರಲ್ ಸೋಂಕುಗಳು ಸಾಮಾನ್ಯವಾಗಿ ರೋಗಿಗಳ ರೋಗ ನಿರೋಧಕ ಶಕ್ತಿಯನ್ನು ದುರ್ಬಲಗೊಳಿಸುತ್ತದೆ ಎಂದು ವೈದ್ಯರು ಹೇಳಿದ್ದಾರೆ. ಮಕ್ಕಳು ಮತ್ತು ಯುವ ವಯಸ್ಸಿನ ಗುಂಪುಗಳಲ್ಲಿ ಇದು ಪ್ರಚಲಿತವಾಗಿದ್ದರೂ, ಇದು ಸಾಂಕ್ರಾಮಿಕ ಅಥವಾ ಸಾಂಕ್ರಾಮಿಕ ರೋಗಕ್ಕೆ ಕಾರಣವಾಗುವುದಿಲ್ಲ ಎಂದು ಅವರು ಹೇಳಿದರು, ಹೆಚ್ಚಿನ ರೋಗಿಗಳು ಚಿಕಿತ್ಸೆಯಿಂದ ಸಂಪೂರ್ಣವಾಗಿ ಚೇತರಿಸಿಕೊಳ್ಳುತ್ತಾರೆ ಎಂದು ಅವರು ಹೇಳಿದರು.

ಆರಂಭದಲ್ಲಿ 24 ಶಂಕಿತ ಪ್ರಕರಣಗಳು ಕಂಡುಬಂದ ನಂತರ ಈ ಸೋಂಕಿನ ಹಠಾತ್ ಏರಿಕೆಯನ್ನು ತನಿಖೆ ಮಾಡಲು ರಾಜ್ಯ ಆರೋಗ್ಯ ಇಲಾಖೆ ಕ್ಷಿಪ್ರ ಪ್ರತಿಕ್ರಿಯೆ ತಂಡವನ್ನು ಸ್ಥಾಪಿಸಿದೆ.

# ರಾಜಕೀಯ ಪ್ರಕ್ಷುಬ್ಧತೆ ವೇಳೆ ಪರಾರಿಯಾದ 700 ಕೈದಿಗಳು ನಾಪತ್ತೆ

**ಢಾಕಾ:** 2024ರ ಜುಲೈ ಹಾಗೂ ಆಗಸ್ಟ್ ನಡುವೆ ತಲೆದೋರಿದ ರಾಜಕೀಯ ಪ್ರಕ್ಷುಬ್ಧತೆ ಸಂದರ್ಭದಲ್ಲಿ ಜೈಲುಗಳಿಂದ ತಪ್ಪಿಸಿಕೊಂಡಿರುವ ಸುಮಾರು 700 ಕೈದಿಗಳು ಇನ್ನೂ ತಲೆಮರೆಸಿಕೊಂಡಿದ್ದಾರೆ ಎಂದು ಬಾಂಗ್ಲಾದೇಶ ಮಧ್ಯಂತರ ಸರ್ಕಾರ ಭಾನುವಾರ ತಿಳಿಸಿದೆ.'ಸುಮಾರು 700 ಕೈದಿಗಳು ಜೈಲುಗಳಿಂದ ಹೊರಗಿದ್ದಾರೆ. ಅವರನ್ನು ಮತ್ತೆ ಬಂಧಿಸುವ ಪ್ರಯತ್ನಗಳು ನಡೆಯುತ್ತಿವೆ' ಎಂದು ಗೃಹ ಸಚಿವಾಲಯದ ಸಲಹೆಗಾರ ಲೆಫ್ಟಿನೆಂಟ್ ಜನರಲ್ (ನಿವೃತ್ತ) ಜಹಾಂಗೀರ್ ಅಲಂ ಚೌಧರಿ ಮಾಧ್ಯಮದವರಿಗೆ ಹೇಳಿದ್ದಾರೆ.

ಸಾಕಷ್ಟು ಮಂದಿ ಪರಾರಿಯಾಗಿದ್ದರು. ಅದರಲ್ಲಿ ಹೆಚ್ಚಿನವರನ್ನು ಬಂಧಿಸಲಾಗಿದೆ ಎಂದ ಅವರು, ನಿಖರ ಮಾಹಿತಿ ಹಂಚಿಕೊಳ್ಳಲಿಲ್ಲ. ನಾಪತ್ತೆಯಾಗಿರುವವರ ಗುರುತಿಗೆ ಸಂಬಂಧಿಸಿದ ವಿವರ ಕೇಳಿದಾಗ, ಸಮಗ್ರ ತನಿಖೆ ನಡೆಯುತ್ತಿದೆ ಎಂದಷ್ಟೇ ಹೇಳಿದ್ದಾರೆ. ಶಿಕ್ಷೆಗೆ ಗುರಿಯಾಗಿದ್ದ ಐಎಸ್ ಉಗ್ರರು, ಮರಣದಂಡನೆ ಅನುಭವಿಸುತ್ತಿದ್ದ ಅಪರಾಧಿಗಳೂ ಸೇರಿದಂತೆ ಸುಮಾರು 700 ಕೈದಿಗಳು ನಾಪತ್ತೆ ಯಾಗಿದ್ದಾರೆ ಎಂದು ಜೈಲು ಅಧಿಕಾರಿಗಳು ಎರಡು ತಿಂಗಳ ಹಿಂದೆಯೇ ಬಹಿರಂಗಪಡಿಸಿದ್ದರು. 2024ರ ಆಗಸ್ಟ್ 5ರ ನಂತರ ಯಾವುದೇ ಅಪರಾಧಿಗೆ ಕ್ಷಮಾದಾನ ನೀಡಿಲ್ಲ. ಆದರೆ, ಅಧಿಕೃತವಾಗಿ ಬಿಡುಗಡೆಯಾಗಿರುವವರು ಜಾಮೀನಿನ ಮೇಲಿದ್ದಾರೆ ಎಂದು ಚೌಧರಿ ಸ್ಪಷ್ಟಪಡಿಸಿದ್ದಾರೆ.



ಜಾಮೀನಿನ ಮೇಲೆ ಹೊರಗಿರುವ ವರೇನಾದರೂ ಅಪರಾಧ ಕೃತ್ಯಗಳಲ್ಲಿ ಪಾಲ್ಗೊಂಡಿದ್ದರೆ, ಅವರನ್ನು ಬಂಧಿಸಿ ನ್ಯಾಯಾಂಗದೆದುರು ಹಾಜರುಪಡಿಸಲಾಗುವುದು' ಎಂದು ಎಚ್ಚರಿಸಿದ್ದಾರೆ. ದೇಶದಲ್ಲಿನ ಸದ್ಯದ ಕಾನೂನು-ಸುವ್ಯವಸ್ಥೆ ಕುರಿತು, ದೇಶದಾದ್ಯಂತ ದರೋಡೆ ಮತ್ತು ಸುಲಿಗೆ ಪ್ರಕರಣಗಳು ಹೆಚ್ಚಾಗುತ್ತಿವೆ. ಅದರಂತೆ, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮಗಳನ್ನೂ ಕೈಗೊಳ್ಳಲಾಗುತ್ತಿದೆ ಎಂದು ಸಮರ್ಥಿಸಿಕೊಂಡಿದ್ದಾರೆ. ಹಾಗೆಯೇ, ದೇಶದಲ್ಲಿ ಪೊಲೀಸ್ ಸಿಬ್ಬಂದಿ ಕೊರತೆಯೇನಿಲ್ಲ. ಆದರೆ, ಅವರೆಲ್ಲ ಪ್ರಾಮಾಣಿಕವಾಗಿ ಕೆಲಸ ಮಾಡಬೇಕಷ್ಟೇ ಎಂದಿದ್ದಾರೆ.

**2024ರ ಜುಲೈ ಹಾಗೂ ಆಗಸ್ಟ್ ಅವಧಿಯಲ್ಲಿ ಬಾಂಗ್ಲಾದ ಹಲವು ಜೈಲುಗಳಿಂದ ಕೈದಿಗಳು ಪರಾರಿಯಾದ ಪ್ರಕರಣಗಳು ವರದಿಯಾದವು. ಢಾಕಾ ಬಳಿಕ ಕೇಂದ್ರ, ನರ್ಸಿಂಗಡಿ ಜಿಲ್ಲೆಯಲ್ಲೇ 826 ಮಂದಿ ತಪ್ಪಿಸಿಕೊಂಡಿದ್ದರು.**

# 600 ಆಸ್ಪತ್ರೆಗಳಲ್ಲಿ ಆಯುಷ್ಮಾನ್ ಭಾರತ್ ಸೇವೆ ಸ್ಥಗಿತ

**ಚಂಡೀಗಢ:** ಹರಿಯಾಣದ 600 ಖಾಸಗಿ ಆಸ್ಪತ್ರೆಗಳು ಫೆಬ್ರುವರಿ 3 ರಿಂದ ಆಯುಷ್ಮಾನ್ ಭಾರತ್ ಯೋಜನೆಯಡಿ ರೋಗಿಗಳಿಗೆ ಚಿಕಿತ್ಸೆ ನೀಡುವುದಿಲ್ಲ ಎಂದು ರಾಜ್ಯದ ಭಾರತೀಯ ವೈದ್ಯಕೀಯ ಸಂಘ ಸೋಮವಾರ ಪ್ರಕಟಿಸಿದೆ. 400 ಕೋಟಿ ಮೊತ್ತವನ್ನು ಮರುಪಾವತಿ ಮಾಡಲು ಸರ್ಕಾರ ವಿಫಲವಾದ ಹಿನ್ನೆಲೆ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಹೇಳಿದೆ. ರಾಜ್ಯದಲ್ಲಿ ಸುಮಾರು 1,300 ಆಸ್ಪತ್ರೆಗಳು ಆಯುಷ್ಮಾನ್ ಭಾರತ್ ಯೋಜನೆಯಡಿ ಕಾರ್ಯನಿರ್ವಹಿಸಲು ನೋಂದಾಯಿಸಿಕೊಂಡಿವೆ. ಇದರಲ್ಲಿ 600 ಖಾಸಗಿ ಆಸ್ಪತ್ರೆಗಳೂ ಸೇರಿವೆ. ಈ ಆಸ್ಪತ್ರೆಗಳಿಗೆ ಹಣ ಮರುಪಾವತಿ ವಿಳಂಬವಾಗಿದೆ. ಆದರೆ ಹೊಸ ಬಿಲ್‌ಗಳು ಹೆಚ್ಚಾಗುತ್ತಲೇ ಇವೆ. ಅಗತ್ಯ ಹಣವಿಲ್ಲದೆ ಆಸ್ಪತ್ರೆಗಳು ಕಾರ್ಯನಿರ್ವಹಿಸುವುದು ಅಸಾಧ್ಯ ಎಂದು ಹರಿಯಾಣದ ಐಎಂಎ ಅಧ್ಯಕ್ಷ ಮಹಾವೀರ್ ಜೈನ್ ಹೇಳಿದ್ದಾರೆ.

**ಏನಿದು ಆಯುಷ್ಮಾನ್ ಭಾರತ್ ಯೋಜನೆ:** ದೇಶದ ಬಡವರು ಮತ್ತು ಗ್ರಾಮೀಣ ಪ್ರದೇಶದ ಜನರಿಗೆ ಆರೋಗ್ಯ ಸೇವೆ ಕಲ್ಪಿಸುವ ಉದ್ದೇಶದಿಂದ 2018ರಲ್ಲಿ ಈ ಯೋಜನೆ ಜಾರಿಗೆ ಬಂದಿತ್ತು. ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರ ಆಯುಷ್ಮಾನ್ ಭಾರತ್ ಯೋಜನೆಯನ್ನು ಎರಡು ಹಂತಗಳಲ್ಲಿ ಜಾರಿಗೊಳಿಸುತ್ತಿದೆ.

ಮೊದಲನೆಯದ್ದು, ಆಯುಷ್ಮಾನ್ ಆರೋಗ್ಯ ಮಂದಿರ. ಎರಡನೆಯದ್ದು, ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ. ಈ ಯೋಜನೆಯ ಅಡಿ ಬಡ ಕುಟುಂಬಗಳಿಗೆ ವರ್ಷಕ್ಕೆ 5 ಲಕ್ಷದವರೆಗೆ ವಿಮಾ ಸೌಲಭ್ಯ ಕಲ್ಪಿಸಲಾಗುತ್ತಿತ್ತು. ಅಂದರೆ, ಸರ್ಕಾರಿ ಆಸ್ಪತ್ರೆಗಳಲ್ಲಿ ಲಭ್ಯವಿರದ ಚಿಕಿತ್ಸೆಗಳನ್ನು ಫಲಾನುಭವಿಗಳು ಖಾಸಗಿ ಆಸ್ಪತ್ರೆಗಳಲ್ಲಿ ನಗದು ರಹಿತವಾಗಿ ಪಡೆಯಬಹುದಾಗಿತ್ತು.

**ವಿಸ್ತೃತ ರೂಪ ಪಡೆದ ಆಯುಷ್ಮಾನ್:** ಜಗತ್ತಿನ ಅತಿ ದೊಡ್ಡ ಆರೋಗ್ಯ ಯೋಜನೆ ಎಂಬ ಹೆಗ್ಗಳಿಕೆ ಹೊಂದಿರುವ ಈ ಯೋಜನೆಯನ್ನು ಇತ್ತೀಚೆಗೆ ವಿಸ್ತರಿಸಲಾಗಿತ್ತು. 70 ಮತ್ತು ಅದಕ್ಕಿಂತ ಹೆಚ್ಚು ವರ್ಷ ವಯಸ್ಸಿನ ಎಲ್ಲಾ ಹಿರಿಯ ನಾಗರಿಕರಿಗೆ ಆರೋಗ್ಯ ವಿಮೆಯನ್ನು ಒದಗಿಸಲಿದೆ.

# ಎನ್‌ಡಿಎ ಸದಸ್ಯರ 14 ತಿದ್ದುಪಡಿಗಳಿಗೆ ಅಂಗೀಕಾರ ನೀಡಿದ ಜೆಪಿಸಿ

## ವಿಪಕ್ಷಗಳ ಅಸಹನೆ ನಡುವೆ ವಕ್ಫ್ ಮಸೂದೆ ತಿದ್ದುಪಡಿಗೆ ಒಪ್ಪಿಗೆ ನೀಡಿದ ಜಂಟಿ ಸಂಸದೀಯ ಸಮಿತಿ

**ಹೊಸದಿಲ್ಲಿ:** ಸಂಸತ್ತಿನ ಜಂಟಿ ಸಮಿತಿಯು ವಕ್ಫ್ ತಿದ್ದುಪಡಿ ಮಸೂದೆಗೆ ಸೋಮವಾರ ಅನುಮೋದನೆ ನೀಡಿದೆ. ಈ ಮಸೂದೆಯನ್ನು ಕಳೆದ ವರ್ಷ ಆಗಸ್ಟ್‌ನಲ್ಲಿ ಸಂಸತ್ತಿನಲ್ಲಿ ಮಂಡಿಸಲಾಗಿತ್ತು. ಜೆಪಿಸಿ ಅಧ್ಯಕ್ಷ ಜಗದಂಬಿಕಾ ಪಾಲ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ, ವಕ್ಫ್ ತಿದ್ದುಪಡಿ ಮಸೂದೆಗೆ ಅನುಮೋದನೆ ನೀಡಲಾಗಿದೆ.

ಬಿಜೆಪಿ ನೇತೃತ್ವದ ಎನ್‌ಡಿಎ ಸದಸ್ಯರು ಮಂಡಿಸಿದ 14 ತಿದ್ದುಪಡಿಗಳನ್ನು ಜೆಪಿಸಿ ಅಂಗೀಕರಿ ಸಿದ್ದು, ವಿರೋಧ ಪಕ್ಷದ ಸದಸ್ಯರು ಮಂಡಿಸಿದ್ದ ಎಲ್ಲಾ ತಿದ್ದುಪಡಿಗಳನ್ನು ತಿರಸ್ಕರಿಸಿದೆ. ಧಾರ್ಮಿಕ ಉದ್ದೇಶಗಳಿಗಾಗಿ ಬಳಸಲಾಗುತ್ತಿರುವ ವಕ್ಫ್ ಆಸ್ತಿಗಳನ್ನು ಬಳಕೆಯಿಂದ ವಕ್ಫ್' ನೀತಿಯ ಆಧಾರದ ಮೇಲೆ ಪ್ರಶ್ನಿಸದಿರುವ ಅಂಶವನ್ನು ತೆಗೆದು ಹಾಕಿರವುದು, ಈ ತಿದ್ದುಪಡಿ ಮಸೂದೆಯ ಪ್ರಮುಖ ಅಂಶವಾಗಿದೆ.

ಜಂಟಿ ಸಮಿತಿಯ ಸಭೆಯ ನಂತರ ಮಾಧ್ಯಮಗಳಿಗೆ ಮಾಹಿತಿ ನೀಡಿದ ಜೆಪಿಸಿ ಅಧ್ಯಕ್ಷ ಜಗದಂಬಿಕಾ ಪಾಲ್, ಎನ್‌ಡಿಎ ಸದಸ್ಯರು ಮಂಡಿಸಿದ 14 ತಿದ್ದುಪಡಿಗಳನ್ನು ಸ್ವೀಕರಿಸಲಾಗಿದೆ ಎಂದು ಹೇಳಿದರು. ವಿರೋಧ ಪಕ್ಷದ ಸದಸ್ಯರು ಹಲವು ತಿದ್ದುಪಡಿಗಳನ್ನು



ಮಂಡಿಸಿದ್ದರಾದರೂ, ಅವೆಲ್ಲವನ್ನೂ ಮತದಾನದ ಮೂಲಕ ತಿರಸ್ಕರಿಸಲಾಗಿದೆ.. ಎಂದು ಜಗದಂಬಿಕಾ ಪಾಲ್ ಸ್ಪಷ್ಟಪಡಿಸಿದ್ದಾರೆ.

ಸಮಿತಿಯು ಅಂಗೀಕರಿಸಿದ ತಿದ್ದುಪಡಿಗಳು ಕಾನೂನನ್ನು ಉತ್ತಮ ಮತ್ತು ಹೆಚ್ಚು ಪರಿಣಾಮಕಾರಿಯನ್ನಾಗಿ ಮಾಡುತ್ತದೆ ಎಂದು ಜಗದಂಬಿಕಾ ಪಾಲ್ ಸಭೆಯಲ್ಲಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ವಕ್ಫ್ ತಿದ್ದುಪಡಿ ಮಸೂದೆಗೆ ಅಂಗೀಕಾರ ನೀಡುವ ಜೆಪಿಸಿ ಪ್ರಕ್ರಿಯೆಯನ್ನು ಪ್ರಜಾಸತ್ತಾತ್ಮಕ ಎಂದು ಬಣ್ಣಿಸಿರುವ ಜಗದಂಬಿಕಾ ಪಾಲ್, ಅಂಗೀಕರಿಸಿದ ತಿದ್ದುಪಡಿಗಳು ಉತ್ತಮ ಮಸೂದೆಯನ್ನು ರೂಪಿಸುತ್ತವೆ ಎಂದು ಬಲವಾಗಿ ನಂಬಿರುವುದಾಗಿ ಹೇಳಿದ್ದಾರೆ.

**ಸಂಸತ್ತಿನಲ್ಲಿ ಮಂಡಿಸಲಾದ ವಕ್ಫ್ ತಿದ್ದುಪಡಿ ಮಸೂದೆಗೆ ಜಂಟಿ ಸಂಸದೀಯ ಸಮಿತಿ ಅನುಮೋದನೆ ನೀಡಿದೆ. ಅದೇ ರೀತಿ ವಿರೋಧ ಪಕ್ಷದ ಸದಸ್ಯರು ಎಲ್ಲಾ ತಿದ್ದುಪಡಿ ಪ್ರಸ್ತಾಪಗಳೂ ತಿರಸ್ಕರಿಸಲ್ಪಟ್ಟಿದ್ದು, ಈ ಕುರಿತು ವಿಪಕ್ಷಗಳು ತೀವ್ರ ಅಸಹನೆ ವ್ಯಕ್ತಪಡಿಸಿವೆ. ಬಿಜೆಪಿ ನೇತೃತ್ವದ ಎನ್‌ಡಿಎ ಸದಸ್ಯರು ಮಂಡಿಸಿದ 14 ತಿದ್ದುಪಡಿಗಳನ್ನು ಜೆಪಿಸಿ ಅಂಗೀಕರಿಸಿರುವುದು ವಿಶೇಷ. ಆದರೆ ಈ ಕುರಿತು ಮಾತನಾಡಿರುವ ಜೆಪಿಸಿ ಅಧ್ಯಕ್ಷ ಜಗದಂಬಿಕಾ ಪಾಲ್, ಪ್ರಜಾಸತ್ತಾತ್ಮಕ ಮಾದರಿಯಲ್ಲಿ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.**

ಸಮಿತಿಯು ಬಿಜೆಪಿ ನೇತೃತ್ವದ ಎನ್‌ಡಿಎ ಮಂಡಿಸಿದ 14 ತಿದ್ದುಪಡಿಗಳನ್ನು ಅಂಗೀಕರಿಸಿತು. ಆದರೆ ವಿರೋಧ ಪಕ್ಷದ ಸದಸ್ಯರು ಸೂಚಿಸಿದ ಪ್ರತಿಯೊಂದು ಬದಲಾವಣೆಯನ್ನೂ ತಿರಸ್ಕರಿಸಿತು. ಜೆಪಿಸಿ ಅಧ್ಯಕ್ಷರ ನಡೆಯನ್ನು ತೀವ್ರವಾಗಿ ಖಂಡಿಸಿರುವ ಪ್ರತಿಪಕ್ಷ ಸದಸ್ಯರು, ಇದೊಂದು ಅಸಂವಿಧಾನಿಕ ಮತ್ತು ಅಪ್ರಜಾಸಸತ್ತಾತ್ಮಕ ಸಭೆ ಎಂದು ಜರೆದಿವೆ.

ಈ ಕುರಿತು ಮಾತನಾಡಿರುವ ಟಿಎಂಸಿ ಸಂಸದ ಕಲ್ಯಾಣ್ ಬ್ಯಾನರ್ಜಿ, ಜಗದಂಬಿಕಾ ಪಾಲ್ ಅವರ ನಡೆ ಪ್ರಜಾಪ್ರಭುತ್ವವನ್ನು ಅಣುಕಿಸುವಂತಿತ್ತು. ಸಭೆಯ ಸಮಯದಲ್ಲಿ ಯಾವುದೇ ನಿಯಮಗಳು ಅಥವಾ ಕಾರ್ಯವಿಧಾನಗಳನ್ನು ಪಾಲಿಸಲಾಗಿಲ್ಲ ಎಂದು ಆರೋಪಿಸಿದ್ದಾರೆ. ಜೆಪಿಸಿ ಅಧ್ಯಕ್ಷರು ನಮಗೆ ಮಾತನಾಡಲು ಅವಕಾಶ ನೀಡಲಿಲ್ಲ. ಸಭೆಯಲ್ಲಿ ಯಾವುದೇ ನಿಯಮಗಳು ಅಥವಾ ಕಾರ್ಯವಿಧಾನಗಳನ್ನು ಪಾಲಿಸಲಾಗಿಲ್ಲ. ಸಭೆಯಲ್ಲಿ ನಮಗೆ ಯಾವುದೇ ದಾಖಲೆಗಳನ್ನು ಒದಗಿಸಲಾಗಿಲ್ಲ. ಜಗದಂಬಿಕಾ ಪಾಲ್ ಚರ್ಚೆಗೆ ಅವಕಾಶವನ್ನೇ ನೀಡಲಿಲ್ಲ ಎಂದು ಕಲ್ಯಾಣ್ ಬ್ಯಾನರ್ಜಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಜೆಪಿಸಿ ತನ್ನ ವರದಿಯನ್ನು ನವೆಂಬರ್ 29ರೊಳಗೆ ಸಲ್ಲಿಸಬೇಕಿತ್ತು. ಆದರೆ ಆ ಗಡುವನ್ನು ಫೆಬ್ರವರಿ 13 ರಂದು ಕೊನೆಗೊಳ್ಳುವ ಸಂಸತ್ತಿನ ಬಜೆಟ್ ಅಧಿವೇಶನದ ಕೊನೆಯ ದಿನಕ್ಕೆ ವಿಸ್ತರಿಸಲಾಗಿದೆ. ತಿದ್ದುಪಡಿಗಳನ್ನು ಅಧ್ಯಯನ ಮಾಡಲು ರಚಿಸಲಾದ ಸಮಿತಿಯು ಹಲವಾರು ವಿಚಾರಣೆಗಳನ್ನು ನಡೆಸಿದೆ. ಆದರೆ ವಿರೋಧ ಪಕ್ಷದ ಸಂಸದರು, ಅಧ್ಯಕ್ಷರು ಆಡಳಿತ ಪಕ್ಷದ ಪರವಾಗಿ ಪಕ್ಷಪಾತ ತೋರುತ್ತಿದ್ದಾರೆ ಎಂದು ಆರೋಪಿಸಿವೆ. ಸೋಮವಾರ ನಡೆದ ಜೆಪಿಸಿ ಸಭೆಯಲ್ಲಿ ಪೂರ್ವನಿರ್ಧಾರಿತ ನಿರ್ಣಯಗಳನ್ನು ತೆಗೆದುಕೊಳ್ಳಲಾಗಿದೆ. ಯಾವುದೇ ನಿಯಮಗಳು ಅಥವಾ ಕಾರ್ಯವಿಧಾನಗಳನ್ನು ಪಾಲಿಸದೇ ಏಕಪಕ್ಷೀಯವಾಗಿ ನಿರ್ಧಾರ ಪ್ರಕಟಿಸಲಾಗಿದೆ ಎಂದು ವಿರೋಧ ಪಕ್ಷಗಳ ಸದಸ್ಯರು ಹರಿಹಾಯ್ದಿದ್ದಾರೆ.

- **ವಕ್ಫ್ ತಿದ್ದುಪಡಿ ಮಸೂದೆಗೆ ಗ್ರೀನ್ ಸಿಗ್ನಲ್ ನೀಡಿದ ಜಂಟಿ ಸಂಸದೀಯ ಸಮಿತಿ**
- **ವಿಪಕ್ಷಗಳ ತಿದ್ದುಪಡಿ ಪ್ರಸ್ತಾವನೆ ತಿರಸ್ಕರಿಸಿದ ಜಂಟಿ ಸಂಸದೀಯ ಸಮಿತಿ**
- **ಜೆಪಿಸಿ ಅಧ್ಯಕ್ಷ ಜಗದಂಬಿಕಾ ಪಾಲ್ ನಡೆ ಖಂಡಿಸಿದ ವಿಪಕ್ಷ ಸದಸ್ಯರು**



## ಮಿನಿ ನ್ಯೂಸ್

### ಪರ್‌ಪ್ಲೆಕ್ಸಿಟಿ ಟಿಕ್‌ಟಾಕ್ ವಿಲೀನಕ್ಕೆ ಹೊಸ ಪ್ರಯತ್ನ

**ವಾಷಿಂಗ್ಟನ್:** ಪರ್‌ಪ್ಲೆಕ್ಸಿಟಿ ಎಐ ಕಂಪನಿಯು ಟಿಕ್‌ಟಾಕ್ ಕಂಪನಿಯನ್ನು ತನ್ನಲ್ಲಿ ವಿಲೀನಗೊಳಿಸಿ ಹೊಸ ಸಂಸ್ಥೆಯನ್ನು ರೂಪಿಸುವ ಹೊಸ ಪ್ರಸ್ತಾವನೆ ಸಲ್ಲಿಸಿದೆ ಎಂದು ತಿಳಿದುಬಂದಿದೆ. ಈ ಹೊಸ ಪ್ರಸ್ತಾವನೆಯು ಅಮೆರಿಕ ಸರ್ಕಾರವು ಹೊಸದಾಗಿ ಸೃಷ್ಟಿಯಾಗುವ ಸಂಸ್ಥೆಯಲ್ಲಿ ಶೇ. 50ರಷ್ಟು ಷೇರುಗಳನ್ನು ಹೊಂದಲು ಅವಕಾಶ ಕಲ್ಪಿಸುತ್ತದೆ.

ಜನವರಿ 18 ರಂದು ಟಿಕ್‌ಟಾಕ್‌ನ ಪೋಷಕ ಸಂಸ್ಥೆ ಬೈಟ್‌ಡಾನ್ಸ್‌ಗೆ ಟಿಕ್‌ಟಾಕ್ ಅನ್ನು ನಿಷೇಧಿಸುವ ಕಾನೂನು ಜಾರಿಯಾಗುವ ಮುನ್ನ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಅದು ಕಾರ್ಯರೂಪಕ್ಕೆ ಬಂದಿರಲಿಲ್ಲ. ಈಗಿನದು ಅದರ ಪರಿಷ್ಕೃತ ಪ್ರಸ್ತಾವನೆಯಾಗಿದೆ. ಮೊದಲಿನ ಪ್ರಸ್ತಾವನೆಯಲ್ಲಿ ಸ್ಯಾನ್‌ಫ್ರಾನ್ಸಿಸ್ಕೋ ಮೂಲದ ಕೃತಕ ಬುದ್ಧಿಮತ್ತೆ ನವೋದ್ಯಮ ಪರ್‌ಪ್ಲೆಕ್ಸಿಟಿಯ ಜೊತೆಗೆ ಟಿಕ್-ಟಾಕ್ ಅಮೆರಿಕ ವಹಿವಾಟುಗಳನ್ನು ವಿಲೀನಗೊಳಿಸಿ ಹೊಸ ಸಂಸ್ಥೆ ಹುಟ್ಟುಹಾಕಲು ಕೋರಲಾಗಿತ್ತು. ಇದಕ್ಕೆ ಬೈಟ್‌ಡಾನ್ಸ್ ಪ್ರತಿಕ್ರಿಯೆ ನೀಡಿರಲಿಲ್ಲ. ಹೊಸ ಪ್ರಸ್ತಾವನೆಯಲ್ಲಿ ಸಾರ್ವಜನಿಕ ಹೂಡಿಕೆಗೆ ಅವಕಾಶ ಕಲ್ಪಿಸಲಾಗಿದ್ದು ಕನಿಷ್ಠ ಶೇ 300 ಶತಕೋಟಿ ಡಾಲರ್‌ಗಳಿಗೂ ಅಧಿಕ ಬಂಡವಾಳ ಹೂಡಿಕೆಯಾಗುವ ನಿರೀಕ್ಷೆ ಇದೆ ಎಂದು ಕಂಪನಿಗೆ ಸಂಬಂಧಪಟ್ಟವರೊಬ್ಬರು ತಿಳಿಸಿದ್ದಾರೆ. ಬೈಟ್‌ಡಾನ್ಸ ಮತ್ತು ಟಿಕ್‌ಟಾಕ್ ಕಂಪನಿಗಳು ಈ ಬಗ್ಗೆ ಪ್ರತಿಕ್ರಿಯೆ ನೀಡಿಲ್ಲ.

### ಮಹಾಕುಂಭದಲ್ಲಿ ಪವಿತ್ರ ಸ್ನಾನ ಮಾಡಿದ ಅಮಿತ್ ಶಾ

**ಮಹಾಕುಂಭ ನಗರ:** ಕೇಂದ್ರ ಗಹ ಸಚಿವ ಅಮಿತ್ ಶಾ ಅವರು ಪ್ರಯಾಗ್ ರಾಜ್‌ನಲ್ಲಿ ನಡೆಯುತ್ತಿರುವ ಮಹಾ ಕುಂಭಮೇಳದಲ್ಲಿ ಪವಿತ್ರ ಸ್ನಾನ ಮಾಡಿದ್ದಾರೆ. ಅಮಿತ್ ಶಾಗೆ ಉತ್ತರಪ್ರದೇಶ್ ಮುಖ್ಯಮಂತ್ರಿ ಯೋಗಿ ಆದಿತ್ಯ ನಾಥ್ ಸಾತ್ ನೀಡಿದ್ದಾರೆ. ಮಹಾಕುಂಭ ಮೇಳ 2025ರಲ್ಲಿ ಭಾಗವಹಿಸಲು ಬೆಳಗ್ಗೆ 11.30ರ ಸುಮಾರಿಗೆ ಪ್ರಯಾಗ್‌ರಾಜ್‌ಗೆ ತಲುಪಿದ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ನಂತರ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಮತ್ತು ಉಪಮುಖ್ಯಮಂತ್ರಿ ಕೇಶವ್ ಮೌರ್ಯ ಮತ್ತು ಬ್ರಜೇಶ್ ಪಾಠಕ್ ಸ್ವಾಗತಿಸಿದರು. ಅಲ್ಲಿಂದ ಕುಂಭಮೇಳೆ ನಡೆಯುತ್ತಿರುವ ಸ್ಥಳಕ್ಕೆ ತೆರಳಿದರು. ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನ ಮಾಡಿದರು. ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನ ಮಾಡಿದ ನಂತರ ಅವರು ಬಡೇ ಹನುಮಾನ್ ಜಿ ದೇವಸ್ಥಾನ ಮತ್ತು ಅಭಯವತ್‌ಗೆ ಭೇಟಿ ನೀಡಿ ದರು. ಜನವರಿ 13ರಂದು ಆರಂಭವಾದ ಮಹಾಕುಂಭ ಫೆಬ್ರವರಿ 26ರವರೆಗೆ ನಡೆಯಲಿದೆ.ಫೆ. 5 ರಂದು ಪ್ರಧಾನಿ ನರೇಂದ್ರ ಮೋದಿ ಪವಿತ್ರ ಸ್ನಾನ ಮಾಡಲಿದ್ದಾರೆ.

### ಮನೆಗೆ ಹಿಂತಿರುಗುತ್ತಿದ್ದ ಕುಟುಂಬ ಅಪಘಾತಕ್ಕೆ ಬಲಿ

**ಆಗ್ರಾ:** ಮಹಾ ಕುಂಭಮೇಳದಲ್ಲಿ ಪವಿತ್ರ ಸ್ನಾನ ಮಾಡಿ ಮನೆಗೆ ಹಿಂತಿರುಗುತ್ತಿದ್ದ ಇಡಿ ಕುಟುಂಬ ಫತೇಹಾಬಾದ್ ಪ್ರದೇಶದಲ್ಲಿ ಲಕ್ನೋ-ಆಗ್ರಾ ಎಕ್ಸ್‌ಪ್ರೆಸ್‌ವೇಯಲ್ಲಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಮೃತಪಟ್ಟಿದೆ. ದೆಹಲಿಯ ದಂಪತಿ ಮತ್ತು ಅವರ ಇಬ್ಬರು ಮಕ್ಕಳು ಸಾವನ್ನಪ್ಪಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಮತರು, ರಾಷ್ಟ್ರ ರಾಜಧಾನಿಯ ಉತ್ತಮ್ ನಗರದ ನಿವಾಸಿಗಳು, ಪ್ರಯಾಗರಾಜ್‌ನ ಮಹಾಕುಂಭದಲ್ಲಿ ಪವಿತ್ರ ಸ್ನಾನ ಮಾಡಿ ಮನೆಗೆ ಮರಳುತ್ತಿದ್ದರು. 42ರ ಹರೆಯದ ಓಂಪ್ರಕಾಶ್ ಸಿಂಗ್ ಎಂಬುವರು ಕಾರಿನ ನಿಯಂತ್ರಣ ತಪ್ಪಿ ಪಲ್ಟಿ ಹೊಡೆದಿದ್ದಾರೆ. ವಾಹನವು ರಸ್ತೆ ವಿಭಜಕವನ್ನು ಹಾರಿ ಎಕ್ಸ್ ಪ್ರೆಸ್‌ವೇಯ ಎದುರು ಭಾಗದಿಂದ ಬರುತ್ತಿದ್ದ ಟ್ರಕ್‌ಗೆ ಡಿಕ್ಕಿ ಹೊಡೆದಿದೆ ಎಂದು ಅವರು ಹೇಳಿದರು.

ಸಿಂಗ್ ಅವರ ಪತ್ನಿ ಪೂರ್ಣಿಮಾ, ಅವರ ಮಗಳು ಅಹಾನಾ, ನಾಲ್ಕು ವರ್ಷದ ಮಗ ವಿನಾಯಕ್ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ ಎಂದು ಸಹಾಯಕ ಪೊಲೀಸ್ ಕಮಿಷನರ್ ಅಮರ್ ದೀಪ್ ತಿಳಿಸಿದ್ದಾರೆ. ಮತದೇಹಗಳನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗಿದ್ದು, ಕುಟುಂಬದವರಿಗೆ ಮಾಹಿತಿ ನೀಡಲಾಗಿದೆ ಎಂದು ಅವರು ತಿಳಿಸಿದ್ದಾರೆ. ಪ್ರಾಥಮಿಕ ತನಿಖೆಯ ಪ್ರಕಾರ ಚಾಲಕ ನಿದ್ರೆಗೆ ಜಾರಿದ್ದು ಅಪಘಾತಕ್ಕೆ ಕಾರಣವಾಗಿರಬಹುದು ಎಂದು ಅಧಿಕಾರಿ ಹೇಳಿದರು.

### ಲೆಬನಾನ್‌ನಿಂದ ಇಸ್ರೇಲ್ ಸೈನ್ಯ ವಾಪಸ್: ಗಡುವು ವಿಸ್ತರಣೆ

**ಮೇಸ್ ಅಲ್-ಜಬಲ್:** ಇಸ್ರೇಲ್ ಸೇನಾಪಡೆಗಳು ದಕ್ಷಿಣ ಲೆಬನಾನ್‌ನಿಂದ ಹೊರಹೋಗುವ ಗಡುವನ್ನು ಫೆಬ್ರುವರಿ 18ರವರೆಗೆ ವಿಸ್ತರಿಸಲು ಎರಡೂ ರಾಷ್ಟ್ರಗಳು ಒಪ್ಪಿಕೊಂಡಿವೆ ಎಂದು ಶ್ವೇತಭವನ ತಿಳಿಸಿದೆ. ಇಸ್ರೇಲ್- ಹಿಜ್ಬುಲ್ಲಾ ಬಂಡುಕೋರರ ನಡುವಿನ ಯುದ್ಧ ನಿಲ್ಲಿಸುವ ಸಂಬಂಧ ಕಳೆದ ನವೆಂಬರ್ ಅಂತ್ಯದಲ್ಲಿ ನಡೆದ ಕದನ ವಿರಾಮ ಒಪ್ಪಂದದಲ್ಲಿ ನಿಗದಿಪಡಿಸಿದ 60 ದಿನಗಳ ಗಡುವನ್ನು ವಿಸ್ತರಿಸುವಂತೆ ಇಸ್ರೇಲ್ ಸಲ್ಲಿಸಿದ ಮನವಿಗೆ ಸಮ್ಮತಿಸಲಾಗಿದೆ.

ಹಿಜ್ಬುಲ್ಲಾ ಬಂಡುಕೋರರು ತಮ್ಮ ನೆಲೆಯನ್ನು ಮತ್ತೆ ಸ್ಥಾಪಿಸಿಕೊಳ್ಳದಿರು ವುದನ್ನು ಖಚಿತಪಡಿಸಿಕೊಳ್ಳಲು ಲೆಬನಾನಿನ ಸೇನೆಯು ದಕ್ಷಿಣ ಲೆಬನಾನ್‌ನ ಎಲ್ಲಾ ಪ್ರದೇಶಗಳಿಗೆ ನಿಯೋಜನೆಗೊಳ್ಳದ ಕಾರಣ, ಇಸ್ರೇಲ್ ಸೇನೆ ಹೆಚ್ಚು ಕಾಲ ಉಳಿಯಬೇಕಿದೆ ಎಂದು ತಿಳಿಸಲಾಗಿದೆ. ಇಸ್ರೇಲ್ ಪಡೆಗಳು ವಾಪಸ್ ಮರಳುವ ತನಕವೂ ಸೇನೆ ನಿಯೋಜಿಸಲು ಸಾಧ್ಯವಿಲ್ಲ ಎಂದು ಲೆಬನಾನ್ ಹೇಳಿದೆ. ಲೆಬನಾನ್ ಮತ್ತು ಇಸ್ರೇಲ್ ನಡುವಿನ ಒಪ್ಪಂದವು 2025ರ ಫೆ.18ರವರೆಗೂ ಅಮೆರಿಕದ ಮೇಲುಸ್ತುವಾರಿಯಲ್ಲಿ ಚಾಲ್ತಿಯಲ್ಲಿರುತ್ತದೆ ಎಂದು ಶ್ವೇತಭವನ ತಿಳಿಸಿದೆ.

### ಉಕ್ರೇನ್‌ನ ವೆಲಿಕಾ ನೊವೊಸಿಲ್ಕಾ ಪಟ್ಟಣ ವಶ: ರಷ್ಯಾ

**ಕೀವ್:** ಕಾರ್ಯತಂತ್ರದ ದೃಷ್ಟಿಯಿಂದ ಪ್ರಮುಖವಾಗಿರುವ ಉಕ್ರೇನ್‌ನ ವಲಿಕಾ ನೂವೊಸಿಲ್ಕಾ ಪಟ್ಟಣವನ್ನು ನಮ್ಮ ಪಡೆಗಳು ವಶಪಡಿಸಿಕೊಂಡಿವೆ ಎಂದು ರಷ್ಯಾದ ರಕ್ಷಣಾ ಸಚಿವಾಲಯ ಭಾನುವಾರ ಹೇಳಿದೆ. ಪಟ್ಟಣವನ್ನು ನಾವು ಸಂಪೂರ್ಣವಾಗಿ ತೊರೆದಿಲ್ಲ. ವೆಲಿಕಾ ನೊವೊಸಿಲ್ಕಾಗಾಗಿ ರಷ್ಯಾದೊಂದಿಗೆ ಹೋರಾಟ ಮುಂದುವರೆಯುತ್ತದೆ ಎಂದು ಉಕ್ರೇನ್ ಸೇನೆ ಹೇಳಿದೆ. ರಷ್ಯಾ ಪಡೆಯು ವೆಲಿಕಾ ನೊವೊಸಿಲ್ಕಾವನ್ನು ಸುತ್ತುವರಿಯುವುದನ್ನು ತಡೆಯಲು ನಮ್ಮ ಪಡೆಗಳು ಪಟ್ಟಣದ ಕೆಲವು ಭಾಗಗಳಿಂದ ಹಿಂದೆ ಸರಿದವು. ಶಸ್ತ್ರಾಸ್ತ್ರ ಮತ್ತು ಡ್ರೋನ್ ವಿಷಯದಲ್ಲಿ ರಷ್ಯಾದೊಂದಿಗೆ ನಾವು ಸಮಾನ ಸಾಮರ್ಥ್ಯ ಹೊಂದಿದ್ದರೂ ರಷ್ಯಾವು ಬೃಹತ್ ಮಾನವಬಲವನ್ನು ಹೊಂದಿದೆ ಎಂದು ಉಕ್ರೇನ್ ಸೇನೆಯ 110ನೇ ಪ್ರತ್ಯೇಕ ತಾಂತ್ರಿಕ ತುಕಡಿಯು (ಮೆಕ್ಯಾನೈಸ್ಡ್ ಬ್ರಿಗೇಡ್) ತನ್ನ ಅಧಿಕೃತ ಟೆಲಿಗ್ರಾಂ ಚಾನಲ್‌ನಲ್ಲಿ ಹೇಳಿಕೊಂಡಿದೆ.

